ಜನಶಕ್ತಿ





ಕನ್ನಡ ವಾರಪತ್ರಿಕೆ

ಸಂಪುಟ 7 ಸಂಚಿಕೆ 44
ನವೆಂಬರ್ 03, 2013 ಪುಟ 16 ರೂ. 10/-


blog: janashakthi.wordpress.com e-mail: js_weekly@yahoo.com

ಏನೇನು ನಡೆಯಬಹುದು ಅಲ್ಲಿ! 'ಧರ್ಮಸ್ಥಳ' ಎಂಬಲ್ಲಿ ?





ಈರುಳ್ಳಿಗಾಗಿ ಕಣ್ಣೀರು!



ಕೋಮುವಾದದ ಸವಾಲಿಗೆ ಜನತೆಯ ಐಕ್ಯತೆಯೇ ಉತ್ತರ



ಭಾರತೀಯ ಔಷಧ ಕಂಪನಿಗಳನ್ನು ನುಂಗಲು ನಿಂತಿರುವ 'ಬ.ಕಂ.'ಗಳು

ಜಿಂಬಾಬ್ವೆ: ಮುಗಾಬೆ ಗೆಲುವು: ಸುಧಾರಣೆಗೆ ಜನರ ಒಲವು



ಭಾರತದ ಔಷಧಿ ಕಂಪನಿಗಳನ್ನು ನುಂಗಲು ಬಂದು ನಿಂತಿರುವ ಬಹುರಾಷ್ಟ್ರೀಯ ಔಷಧಿ ಕಂಪನಿಗಳು

ಭಾರತದಲ್ಲಿ 80ರ ದಶಕದಲ್ಲಿ ಔಷಧಿ ಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿತ್ತು ಎಂದು ಯುನಿಡೋ ಸಂಸ್ಥೆ 1982ರಲ್ಲಿ ಹೇಳಿದೆ. ಅದು ಸಾಧ್ಯವಾಗಲು ಭಾರತೀಯ ಪೇಟೆಂಟ್ ಕಾಯಿದೆ 1970, ಔಷಧಿ ಬೆಲೆ ನಿಯಂತ್ರಣ ಆದೇಶ 1979, ಸಾರ್ವಜನಿಕ ಔಷಧಿ ಉದ್ಯಮಗಳು (ಎಚ್‌ಎಎಲ್, ಐಡಿಪಿಎಲ್) ಪ್ರಮುಖ ಪಾತ್ರ ವಹಿಸಿದವು. 80ರ ನಂತರ ಭಾರತೀಯ ಕಂಪನಿಗಳು ಮೊದಲ ಬಹುರಾಷ್ಟ್ರೀಯ ಔಷಧಿ ಕಂಪನಿಗಳು ಸಾಧಿಸಿದಷ್ಟು ಮಾರುಕಟ್ಟೆಯ ಮೇಲಿನ ಹತೋಟಿಯನ್ನು ಸಡಿಲಿಸಿ ತಾವು ಹತೋಟಿ ಸಾಧಿಸಿದವು. ಔಷಧಿ ಬೆಲೆಗಳು ಕಡಿಮೆಯಾದವು. ಅಗತ್ಯ ಔಷಧಿಗಳು ದೊರಕಲಾರಂಭಿಸಿದವು ಹಾಗೂ ಭಾರತ ಇತರೇ ಬಡದೇಶಗಳಿಗೆ ಔಷಧಿಗಳನ್ನು ರಫ್ತು ಮಾಡಲು ಪ್ರಾರಂಭಿಸಿತು. ಇಂದು ಭಾರತ ಅಮೇರಿಕದ ನಂತರ ಅತಿಹೆಚ್ಚು ಔಷಧ ತಯಾರಿಸುವ ದೇಶ ಹಾಗೂ ನಾಲ್ಕನೇ ಅತಿಹೆಚ್ಚು ಕಡಿಮೆ ಬೆಲೆಯ ಔಷಧಿ ರಫ್ತು ಮಾಡುವ ದೇಶ. ಭಾರತ ಕ್ಯಾನ್ಸರ್ ಮತ್ತು ಎಚ್‌ಐವಿ ರೋಗಕ್ಕೆ ಉಪಯೋಗಿಸುವ ಔಷಧಿಯನ್ನು ರಫ್ತು ಮಾಡುತ್ತದೆ.





ಆದರೆ ಭಾರತದ ಸಾಧನೆಯನ್ನು ಬಹುರಾಷ್ಟ್ರೀಯ ಕಂಪನಿಗಳು ಸಹಿಸಲಿಲ್ಲ. ಈಗ ಬಹುರಾಷ್ಟ್ರೀಯ ಕಂಪನಿಗಳು ಪುನಃ ಭಾರತಕ್ಕೆ ಲಗ್ಗೆ ಹಾಕಿವೆ. ಅಮೆರಿಕಾ ಹಾಗೂ ಯೂರೋಪಿನ್ ಯೂನಿಯನ್‌ಗಳು ಭಾರತ ಹೊಸ ಪೇ-ಟೆಂಟ್ ಕಾನೂನು ಜಾರಿ ಮಾಡುವಂತೆ ಒತ್ತಡ ತಂದು ಔಷಧಿ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿವೆ.


ಜಾಗತೀಕರಣಗೊಂಡ ರಾಷ್ಟ್ರಗಳಲ್ಲಿ ಆರ್ಥಿಕ ಪರಿಸ್ಥಿತಿ ಬಿಗಡಾಯಿಸುತ್ತಿರುವ ಸಂದರ್ಭದಲ್ಲಿ, ಸರಕಾರ ಆರೋಗ್ಯ ಕ್ಷೇತ್ರಕ್ಕೆ ಮಾಡುವ ಖರ್ಚನ್ನು ಕಡಿಮೆ ಮಾಡಲು ಮುಂದಾಗಿವೆ. ಅಂತರಾಷ್ಟ್ರೀಯ ಸಂಸ್ಥೆಗಳಾದ ವಿಶ್ವಬ್ಯಾಂಕ್, ಐಎಂಎಫ್‌ಗಳು ಅಮೇರಿಕಾ ಹಾಗೂ ಇಯು(ಯುರೋಪಿಯನ್ ಯುನಿಯನ್)ಗಳ ಏಜೆಂಟರೆಂಬಂತೆ ವರ್ತಿಸುತ್ತಿದ್ದು, ಜಗತ್ತಿನಲ್ಲಿ ಖಾಸಗೀಕರಣ ಪ್ರಕ್ರಿಯೆ ಚುರುಕುಗೊಳ್ಳುವಂತೆ ಮಾಡಲು ಮುಂದಾಗಿವೆ. ಖಾಸಗೀಕರಣಗೊಂಡ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಸರಕಾರದ ಹಂಗಿಲ್ಲದೇ ಒಳಗೆ ನುಸುಳಿ ದೇಶವನ್ನು ಕೊಳ್ಳೆ ಹೊಡೆಯಲು ಮುಂದಾಗಿದೆ.

ಈಗ ನವಉದಾರವಾದೀ ನೀತಿಯಿಂದಾದ ಬಿಕ್ಕಟ್ಟನ್ನು ಎದುರಿಸಲು ಮನಮೋಹನ್ ಸಿಂಗ್ ಅವರು ವಿದೇಶಿ ನೇರ ಬಂಡವಾಳ (ಎಫ್‌ಡಿಐ)ವನ್ನು ಭಾರತದಲ್ಲಿ ಜಾರಿಮಾಡಲು ಮುಂದಾಗಿದ್ದಾರೆ. ಇದರಿಂದಾಗಿ ವಿದೇಶಿ ಬಂಡವಾಳದ ನೆಪದಲ್ಲಿ ಅಪಾರ ಸಂಖ್ಯೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬರಲಾರಂಭಿಸಿದೆ ಹಾಗೂ ಔಷಧಿ ಕ್ಷೇತ್ರದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿವೆ. ಭಾರತೀಯ ಕಂಪನಿಗಳು 'ತಪ್ಪಿತಸ್ಥ' ಎಂದು ಹೆಸರಿಸಲು ಹೊಸ ತಂತ್ರ ಹೂಡಿದೆ.

1. ಭಾರತೀಯ ಕಂಪನಿಗಳ ಮೇಲೆ ಸದ್ಯದ ಒಳ್ಳೆಯ ತಯಾರಿಕಾ ಪದ್ಧತಿ (CURRENT GOOD MANUFACTURING PRACTICE) ಕ್ರಮವನ್ನು ಜಾರಿಮಾಡಲು ಮುಂದಾಗಿದೆ. ಅನೇಕ ಕಂಪನಿಗಳು ಈ ಕ್ರಮಕ್ಕೆ ಸ್ಪಂದಿಸಲು ಸಾಧ್ಯವಿಲ್ಲ ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಆ ಕಂಪನಿಗಳನ್ನು ಮೂಲೆಗುಂಪು ಮಾಡುತ್ತವೆ ಅಥವಾ ಕೊಂಡುಕೊಳ್ಳುತ್ತವೆ.


2. ಭಾರತೀಯ ಔಷಧಿಗಳನ್ನು ಕಡಿಮೆ ಗುಣಮಟ್ಟದ ಅಥವಾ ಕಳಪೆ ಗುಣಮಟ್ಟದ ಔಷಧಿಗಳು ಎಂದು ಕರೆಯಲಾಗಿದೆ. ಅಮೇರಿಕಾದಲ್ಲಿ, ಯಾವ ಔಷಧಿಗಳು ಅಲ್ಲಿಯ ಸ್ಥಳೀಯ ಕಾನೂನಿಗೆ ಅನುಗುಣವಾಗಿರುವುದಿಲ್ಲವೋ, ಅವುಗಳನ್ನು ಕಳಪೆ ಗುಣಮಟ್ಟದ ಔಷಧಿಗಳು ಎಂದು ಕರೆಯಲಾಗುತ್ತದೆ. ಆದರೆ ಭಾರತದಲ್ಲಿ ಆ ಔಷಧಿಗಳು ಕಳಪೆ ಗುಣಮಟ್ಟದ್ದಾಗಿರುವುದಿಲ್ಲ. ಅಲ್ಲಿಯ ಕಾನೂನುಗಳನ್ನು ಇತರರು ಒಪ್ಪಬೇಕಾಗಿಲ್ಲ ಎಂಬ ಕನಿಷ್ಠ ಕಾಳಜಿಯೂ ಈ ಅಮೇರಿಕಾ ಹಾಗೂ ಯುರೋಪ್ ಸರಕಾರಗಳಿಗಿಲ್ಲ. ಭಾರತದಲ್ಲಿ 'ರಾನ್‌ಬ್ಯಾಕ್ಸಿ' ಕಂಪನಿ ಮೇಲೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ವೇಳೆಗೆ ಸುಪ್ರಿಂಕೋರ್ಟ್ ಈ ವಿಷಯವನ್ನು ಹೊರಹಾಕಿದೆ. ಅಮೇರಿಕಾ ಹಾಗೂ ಇಯು ದೇಶಗಳು ಮಾಧ್ಯಮಗಳ ಮೂಲಕ ವ್ಯಾಪಕವಾದ ಅಪಪ್ರಚಾರ ಮಾಡುತ್ತ ಭಾರತೀಯ ಔಷಧಿಗಳು ಕಳಪೆ ಗುಣಮಟ್ಟದ್ದು ಎಂದು ಹೇಳುತ್ತಾ ಬಂದಿವೆ.





ಸಾಕಷ್ಟು ಜನಪರ ಸಾಧನೆ ಮಾಡಿರುವ ಭಾರತದ ಔಷಧರಂಗಕ್ಕೆ ಈಗ ಬಹುರಾಷ್ಟ್ರೀಯ ಕಂಪನಿಗಳಿಂದ ಅಪಾಯ ಎದುರಾಗಿದೆ. ಔಷಧ ಉದ್ಯಮ ಖಾಸಗೀಕರಣಗೊಂಡ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಸರಕಾರಗಳ ಹಂಗಿಲ್ಲದೇ ಒಳಗೆ ನುಸುಳಿ ದೇಶವನ್ನು ಕೊಳ್ಳೆ ಹೊಡೆಯಲು ಮುಂದಾಗಿವೆ. ಇದರಿಂದ ನಮ್ಮ ಆಳುವ ಸರ್ಕಾರ ಪಾಠವನ್ನೇಕೆ ಕಲಿಯುವುದಿಲ್ಲ?

ಭಾರತವೂ ಈಗ ಈ ಪ್ರಚಾರಕ್ಕೆ ಒಪ್ಪಿಗೆ ಸೂಚಿಸಿದೆವೆಂದು ಹೇಳಲು ಕಾರಣ – ಈಗ ಭಾರತ ಸರಕಾರ ಅಮೇರಿಕಾದ ಎಸ್‌ಡಿಎ ಸಂಸ್ಥೆಯನ್ನು ಬರಮಾಡಿಕೊಂಡಿದೆ ಹಾಗೂ ದೆಹಲಿ ಮತ್ತು ಇತರ ಪಟ್ಟಣಗಳಲ್ಲಿ ಅದರ ಕಛೇರಿಗಳನ್ನು ತೆರೆಯಲು ಅನುಮತಿ ನೀಡಿದೆ. ಅಮೇರಿಕಾದ ಔಷಧಿ ಪರೀಕ್ಷಕರು ಭಾರತದ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಜಾರಿಯಲ್ಲಿರುವ ಔಷಧಿ ಪರೀಕ್ಷೆಗಳಲ್ಲಿ(DRUG TRIALS) ಮೂಗುತೂರಿಸುತ್ತ ಭಾರತೀಯ ಔಷಧಿ ತಯಾರಿಕಾ ಘಟಕ ಹಾಗೂ ಅಲ್ಲಿಯ ವಹಿವಾಟಿನ ಮೇಲೆ ನಿಗಾ ಇಟ್ಟು ಅಮೇರಿಕಾಕ್ಕೆ ವರದಿ ನೀಡಲು ಮುಂದಾಗಿದ್ದಾರೆ. ಇದರ ಪರಿಣಾಮವಾಗಿ ಅಮೇರಿಕಾ ಸರಕಾರ ಭಾರತೀಯ ಔಷಧಿಗಳನ್ನು ಕಳಪೆ ಗುಣಮಟ್ಟದ್ದು ಎಂದು ಘೋಷಿಸಲು ಮುಂದಾಗಿದೆ.



ಆದರೆ ಭಾರತೀಯ ಔಷಧಿ ನಿಯಂತ್ರಣ ಭಾರತೀಯ ಕಂಪನಿಗಳಿಗೆ ಔಷಧಿಗಳನ್ನು ರಫ್ತು ಮಾಡಲು ಸಹಾಯ ಮಾಡುವುದನ್ನು ಬಿಟ್ಟು, ಅಮೇರಿಕಾ ಆಶಯದಂತೆ ಭಾರತೀಯ ಕಂಪನಿಗಳ ಮೇಲೆ ... ಇಡಲು ಮುಂದಾಗಿದೆ.

ಭಾರತೀಯ ಕಂಪನಿಗಳ ಮೇಲೆ ... ಸರಕಾರವೇ ದಾಳಿಮಾಡುತ್ತದೆ. ... ಸರಕಾರ 2007–2011ರ ವೇಳೆಗೆ ... ಕ್ಷೇತ್ರಕ್ಕೆ 105% ವಿದೇಶಿ ನೇರ ಬಂಡವಾಳ... ಒಪ್ಪಿಕೊಂಡಿದೆ; ಈ ಸಮಯದಲ್ಲಿ ಭಾ... 50,000 ಕೋಟಿ ರೂಪಾಯಿಗಳು ಬಂ... ಆದರೆ ಅದು ಔಷಧಿ ತಯಾರಿಸಲು ... ಅದು ಭಾರತೀಯ ಔಷಧಿ ಕಂಪನಿಗ... ಕೊಂಡುಕೊಳ್ಳಲು! ಈ ಬೆಳವಣಿಗೆಯ ವಿ... ಭಾರತೀಯ ಕಂಪನಿಗಳು ಸಿಡಿದೇ... ಬದಲು ತಮ್ಮನ್ನು ತಾವೇ ಅರ್ಪಿಸಿಕೊಂ... ಇದು ನಾಚಿಕೆಗೇಡಿನ ವಿಷಯ. ... ಬೆಳವಣಿಗೆಗೆ ನಾವು ಸರಕಾರವನ್ನು ... ಮಾಡಬಹುದು. ಈ ಬೆಳವಣಿಗೆ ವಿ... ಕೆಲವು ಸಂಸದರು ಹಾಗೂ ಮಂತ್ರಿ... ತಮ್ಮ ವಿರೋಧ ವ್ಯಕ್ತಪಡಿಸಿದರೂ ಸರ... ಮೂಕ ಪ್ರೇಕ್ಷಕನಂತೆ ಕುಳಿತಿದೆ.

ಅಮೇರಿಕಾದ ಔಷಧಿ ಉದ್ಯಮದ ... ಭಾರತ ಸರಕಾರದ ಮೇಲೆ ಪ್ರಭಾವ ಬೀ... ಬಂದ ಗುಂಪೊಂದು ಕೇಂದ್ರ ವಾ... ಮಂತ್ರಿ ಆನಂದ ಶರ್ಮಾ ಅವರನ್ನು ... ಜನವರಿ 2013 ರಲ್ಲಿ ಭೇಟಿಮಾಡಿ ಇತ್ತಿ... ನೋವಾರ್ಟಿಸ್ ತೀರ್ಪು ಬಂದುದರ ... ಮಾತನಾಡುವಾಗ, ಅವರು ಅಮೇರಿ... ಗುಂಪಿಗೆ ಕೊಟ್ಟ ಭರವಸೆ: 'ಭಾರತಿ... ಸುಪ್ರಿಂ ಕೋರ್ಟಿನ ತೀರ್ಪು ಇದ್ದ... ಭಾರತ ಸರಕಾರ ಗ್ಲೀವ್ಯಾಕ್ ವಿಷಯ... ಪೇಟೆಂಟ್ ಕಾಯಿದೆಯ ಕಡ್ಡಾಯ ಪರವಾ... ಸವಲತ್ತನ್ನು ಉಪಯೋಗಿಸುವು... ಏಕೆಂದರೆ ಭಾರತ ಸರಕಾರ ಬ... ಜವಾಬ್ಧಾರಿಯುತ ಸರಕಾರವಾ... ಇಲ್ಲಿ ಅರ್ಥಮಾಡಿಕೊಳ್ಳಬೇಕಾಗಿರು... ಸರಕಾರ ಜವಾಬ್ಧಾರಿಯುತವಾಗಿರು... ಭಾರತೀಯರಿಗೋ ಅಥವಾ ಬಹುರಾಷ್ಟ್ರೀ... ಕಂಪನಿಗಳಿಗೋ? ಎಂದು.

ಭಾರತದ... ವಸ್ತು (PRODU... ಪೇಟೆಂಟ್‌ಗೆ ಸ್ವಾತ... ಬಂದಾಗಿನಿಂದ 19... ವರೆಗೆ ಪರವಾನಿಗೆ ಇರ... ಆದರೆ ಆಗಿನ ಆರ್ಥಿಕ ... ಪ್ರಣವ್ ಮುಖರ್ಜಿಯವರು 199... ಮೊರಾಕ್ಕೋದಲ್ಲಿ ಡಬ್ಲುಟಿಓ ... ಒಪ್ಪಂದಕ್ಕೆ ಸಹಿ ಹಾಕುವವರೆಗೆ ಮಾತ್ರ, ... ನಂತರ ಭಾರತೀಯ ಪೇಟೆಂಟ್ ಕಾನೂ... ಟ್ರಿಪ್ಸ್ ಒಪ್ಪಂದಕ್ಕೆ ಸೂಕ್ತವಾದ ಬದಲ... ತರಲಾಯಿತು. ಅಂದಿನಿಂದ ವಸ್ತು ಪ... ಂಟ್ ಜಾರಿಗೆ ಬಂದಿದೆ. ಭಾರತದಲ್ಲಿ ... ವರ್ಷಗಳವರೆಗೆ ಔಷಧಿಗಳಿಗೆ ವಸ್ತು ಪ... ಂಟ್ ಇಲ್ಲದ ಕಾರಣ ಔಷಧಿ ಕಂಪ...

ಪುಟ...

...ಸ್ವಾದಕ್ಕೀಯ ಈರುಳ್ಳಿಗಾಗಿ ಕಣ್ಣೀರು!

...ಳ್ಳಿ ಕತ್ತರಿಸುವಾಗ ಕಣ್ಣೀರು ಬರುವುದು ಸಹಜ. ಆದರೆ ಈಗ ...ಗೆಟುಕದಂತಹ ಈರುಳ್ಳಿಗಾಗಿ ಕಣ್ಣೀರಿಡುತ್ತಿದ್ದಾರೆ! ಈರುಳ್ಳಿ ಬೆಲೆ ...ೇರಿದ್ದು ಸಾಮಾನ್ಯ ಗ್ರಾಹಕರು ಕಂಗಾಲಾಗಿದ್ದಾರೆ. ದೀಪಾವಳಿ ... ಕೆಜಿ ಈರುಳ್ಳಿ ಬೆಲೆ 100 ರೂ. ಆಗಬಹುದೆಂಬ ಭೀತಿ ...ಗುತ್ತಿದೆ.

...ಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಗುಣ್ಣಮಟ್ಟದ ...ಳ್ಳಿ ಬೆಲೆ ಕೆಜಿಗೆ 60 ರಿಂದ 80 ರೂ. ಆಸುಪಾಸಿನಲ್ಲಿದೆ. ...ರ ಇತರ ಪ್ರಮುಖ ಚಿಲ್ಲರೆ ಮಾರುಕಟ್ಟೆಯಲ್ಲಿ ಈರುಳ್ಳಿ ಧಾರಣೆ ...ೀಯವಾಗಿ ಏರಿಕೆಯಾಗಿದೆ. ಮುಂಬಯಿಯಲ್ಲಿ ಕೆಜಿ ಈರುಳ್ಳಿ ...70 ರೂ. ಇದ್ದರೆ ಕೋಲ್ಕೊತಾದಲ್ಲಿ ಅದು 80 ರೂ., ದಿಲ್ಲಿಯಲ್ಲಿ ...ೂ., ಜಮ್ಮು-ಕಾಶ್ಮೀರದಲ್ಲಿ 100 ರೂ. ಗಡಿ ದಾಟಿದೆ. 2010 ...ಗರಿಷ್ಠ ರೂ. 85ಕ್ಕೆ ಏರಿಕೆಯಾಗಿತ್ತು. ನಂತರದ ದಿನಗಳಲ್ಲಿ ...ಲಾಗಿರುವ ಗರಿಷ್ಠ ಧಾರಣೆ ಇದಾಗಿದೆ.

...ಲ್ಲಾ ತರಕಾರಿಗಳ ದರಗಳೂ ಏರುತ್ತಲೇ ಇವೆ. ಅದರಲ್ಲಿಯೂ, ...ಗೂ ಬೇಕಾಗಿರುವ ಈರುಳ್ಳಿಯ ಬೆಲೆ ಅಂಕುಶವಿಲ್ಲದೆ ...ಯುತ್ತಿರುವುದು ಮಧ್ಯಮ ವರ್ಗದವರನ್ನೂ ಒಳಗೊಂಡಂತೆ ಎಲ್ಲ ...ಗಗಳನ್ನು ಚಿಂತೆಗೀಡುಮಾಡಿದೆ. ಎಲ್ಲರಿಗಿಂತಲೂ ಹೆಚ್ಚಾಗಿ ಅತ್ಯಲ್ಪ ...ದನೆಯೊಂದಿಗೆ ಜೀವನ ಸಾಗಿಸಲು ಶ್ರಮಪಡುತ್ತಿರುವ ನಗರದ ...ಟಿತ ಕಾರ್ಮಿಕರಿಗೆ ಮತ್ತು ಗ್ರಾಮೀಣ ಕೃಷಿ ಕಾರ್ಮಿಕರಿಗೆ ...ಳ್ಳಿ ಬೆಲೆ ಏರಿಕೆ ಹೆಚ್ಚಿನ ಸಂಕಷ್ಟವನ್ನು ತಂದೊಡ್ಡಿದೆ.

...ತ್ತರ ಕರ್ನಾಟಕದ ಹಳ್ಳಿಗಳ ಬಡವರಿಗಂತೂ ತರಕಾರಿಗಳಲ್ಲಿ ...ರುವುದು ಈರುಳ್ಳಿ(ಉಳ್ಳಾಗಡ್ಡಿ) ಮಾತ್ರ. ವಾರದ ಸಂತೆಗೆಂದು ... ಹೋದಾಗ ಅವರು ಖರೀದಿ ಮಾಡಿ ಬುಟ್ಟಿಯಲ್ಲಿ ತುಂಬಿ ...ರ ವಸ್ತುಗಳಲ್ಲಿ ವಾರಕ್ಕೆ ಬೇಕಾಗುವಷ್ಟು ಜೋಳ, ಉಪ್ಪು, ಹಸಿ ...ಸಿನಕಾಯಿ ಜತೆಯಲ್ಲಿ ಈರುಳ್ಳಿ ಇರಲೇಬೇಕು. ಈರುಳ್ಳಿಯೊಂದಿಗೆ ...ಮೆಣಸಿನಕಾಯಿಯೊಂದಿದ್ದರೆ ಅವರ ರೊಟ್ಟಿ ಊಟ ಮುಗಿದೇ ...ುತ್ತದೆ.

...ತ್ತರ ಭಾರತಕ್ಕೆ ಹೋಲಿಸಿದಲ್ಲಿ, ಕರ್ನಾಟಕದಲ್ಲಿ ಈರುಳ್ಳಿ ಬೆಲೆ ...ಯಿದ್ದು ಮಧ್ಯಮ ಮತ್ತು ಸಣ್ಣ ಗಾತ್ರದ ಈರುಳ್ಳಿ ಕೆಜಿಗೆ ಕ್ರಮವಾಗಿ ...ಿಂದ 30 ರೂ. ವರೆಗೆ ಮಾರಾಟ ಆಗುತ್ತಿದೆ. ಬೆಂಗಳೂರು ...ಂಸಿಯಲ್ಲಿ ಉತ್ತಮ ದರ್ಜೆಯ ಈರುಳ್ಳಿ ಕ್ವಿಂಟಲ್‌ಗೆ ಗರಿಷ್ಠ ರೂ. ...0 ರ ವರೆಗೆ ಮಾರಾಟ ಆಗುತ್ತಿದೆ. ಬೆಳಗಾವಿ ಎಪಿಎಂಸಿಯಲ್ಲಿ ... ಈರುಳ್ಳಿ ಕ್ವಿಂಟಲ್‌ಗೆ ಗರಿಷ್ಠ ರೂ. 4,800 ದರದಲ್ಲಿ ಮತ್ತು ... ಈರುಳ್ಳಿ ಗರಿಷ್ಠ ರೂ 5,100 ರ ದರದಲ್ಲಿ ಮಾರಾಟವಾಗಿದೆ. ...ಳ್ಳಿ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ಗರಿಷ್ಠ 5,000 ರೂ. ದರದಲ್ಲಿ ...ರಾಟವಾಗಿದೆ.

...ರ್ನಾಟಕ ಅತಿ ಹೆಚ್ಚು ಈರುಳ್ಳಿ ಬೆಳೆಯುವ ರಾಜ್ಯಗಳಲ್ಲಿ ಒಂದಾಗಿದೆ. ...ರಾಜ್ಯದಲ್ಲಿ ಬೆಳೆಯುವ ಈರುಳ್ಳಿಯಲ್ಲಿ ನೀರಿನಂಶ ಜಾಸ್ತಿ ಇರುವ ... ಅದನ್ನು ಹೆಚ್ಚು ದಿನ ದಾಸ್ತಾನು ಮಾಡಲು ಸಾಧ್ಯವಿಲ್ಲ. ಆದ್ದ-... ರೈತರು ದಾಸ್ತಾನುಮಾಡಿ ಹೆಚ್ಚು ಆದಾಯಗಳಿಸುವ ಸಾದ-...ಇಲ್ಲ. ವರ್ತಕರು ಮಾತ್ರ ರೈತರಿಂದ ಕಡಿಮೆ ಬೆಲೆಗೆ ಖರೀದಿ ...ಡಿಕೊಂಡು ತಮ್ಮ ಸುಸಜ್ಜಿತ ಉಗ್ರಾಣಗಳಲ್ಲಿ ದಾಸ್ತಾನುಮಾಡಿ, ...ರುಕಟ್ಟೆಯಲ್ಲಿ ಕೃತಕ ಅಭಾವವನ್ನು ಸೃಷ್ಟಿಸಿ, ಹೆಚ್ಚಿನ ಬೆಲೆಗೆ ...ರಾಟಮಾಡಿ ಬಾರೀ ಲಾಭ ಗಳಿಸುತ್ತಿರುತ್ತಾರೆ. ದೇಶದ ಉತ್ತರದ ...ತೇಕ ರಾಜ್ಯಗಳಲ್ಲಿ ಈರುಳ್ಳಿ ಕೊರತೆ ಉಂಟಾಗಿದ್ದು ಕರ್ನಾಟಕದ ...ಳ್ಳಿ ಹೊರ ರಾಜ್ಯಗಳಿಗೂ ಹೋಗುತ್ತಿರುವುದರಿಂದ ಇಲ್ಲಿ ಬೆಲೆ ...ಕೆಗೆ ಅದೂ ಒಂದು ಕಾರಣವಾಗಿದೆ. ಡಿಸೆಂಬರ ವರೆಗೂ ...ಳ್ಳಿ ಕಟಾವು ನಡೆಯಲಿದ್ದು ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ...ಳ್ಳಿ ಬಂದಾಗ ಬೆಲೆಗಳು ಹತೋಟಿಗೆ ಬರಬಹುದು ಎಂದು ...ಕ್ಷಿಸಲಾಗುತ್ತಿದೆ.

ಆದರೆ, ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ...ಳ್ಳಿ ಪೂರೈಕೆಯ ಹೆಚ್ಚಳಕ್ಕಾಗಿ ಕಾದು ಕುಳಿತುಕೊಳ್ಳದೆ ಬೆಲೆಗಳನ್ನು ...ಯಂತ್ರಿಸಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು. ಮುಖ್ಯವಾಗಿ ...ೀರ ವರ್ತಕರು, ಅಕ್ರಮ ದಾಸ್ತಾನುದಾರರು ಕೃತಕ ಅಭಾವ ...ಷ್ಟಿ ಬೆಲೆ ಏರಿಕೆಗೆ ಕಾರಣವಾಗುತ್ತಿರುತ್ತಾರೆ. ಅಂತಹ ಖದೀಮರ ...ದ್ಧ ಕಠಿಣಕ್ರಮ ಜರಗಿಸಲು ಸರ್ಕಾರಗಳು ಹಿಂಜರಿಯಬಾರದು.

ಮೋದಿ ಬರುವ ಮುನ್ನ ಬಲ ಕ್ರೋಢೀಕರಣದ ಯತ್ನದಲ್ಲಿ ಬಿಜೆಪಿ

ದಿನಗಳು ಉರುಳುತ್ತಿರುವಂತೆ, ಲೋಕಸಭಾ ಚುನಾವಣೆಗಳ ಸಿದ್ಧತೆಗಳೂ ಗಹನ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಹಗರಣಗಳು, ಜನದ್ರೋಹದಲ್ಲಿ ಮುಳುಗೇಳುತ್ತಿರುವ ಕಾಂಗ್ರೆಸ್ ಪಕ್ಷವೂ ಬಾಯಿ ಕೊಡವಿ ಕೊಳ್ಳುತ್ತಿದೆ, ಪ್ರಧಾನಿ ಮನಮೋಹನ ಸಿಂಗ್ 'ಅಪರಾಧಿ ನಾನಲ್ಲ' ಎನ್ನುತ್ತಿದ್ದರೆ, ರಾಹುಲಗಾಂಧಿ ದೇಶದ ಕುರಿತು ಉಗ್ರವಾಗಿ ಮಾತನಾಡ ತೊಡಗಿದ್ದಾನೆ. 'ಪ್ರಿಯಾಂಕ' ಎಂಬ 'ಅಸ್ತ್ರ'ವನ್ನು ಬಿಜೆಪಿಯ ಮೋದಿ ತಂತ್ರಕ್ಕೆ ಎದುರಾಗಿ ಕಾಂಗ್ರೆಸ್ ಪ್ರಯೋಗಿಸಲು ಯೋಜಿಸುತ್ತಲಿದ್ದರೆ, ಬಿಜೆಪಿ ಮತ್ತಷ್ಟೂ ಆಕ್ರಮಣಕಾರಿಯಾಗಿ ಹಲವು ಹತ್ತು ಮುಖಗಳಲ್ಲಿ ಕೆಳಗೆ ಜನಮಾನಸ ಕೆಡಿಸುವ ಕೃತ್ಯಕ್ಕೆ ಇಳಿಯುತ್ತಿದೆ.

ನರಹಂತಕನ ಸ್ವಾಗತಕ್ಕೆ

ಬಿಜೆಪಿ-ಸಂಘಪರಿವಾರವು ಕಾಂಗ್ರೆಸ್‌ನ ಯುಪಿಎ ಸರಕಾರದ ವಿರುದ್ಧ ಜನರಲ್ಲಿ ಹೆಚ್ಚುತ್ತಿರುವ ಅತೃಪ್ತಿಯನ್ನು ಬಳಸಿಕೊಳ್ಳಲು ಹೆಚ್ಚು ತೊಡಗಿರುವುದು ಕೋಮುವಾದೀ ಕ್ರೋಢೀಕರಣದ ಮೂಲಕವೇ. ಬಾಯ್ಬಡುಕ ಮೋದಿಯನ್ನು ದೇಶದ ಎಲ್ಲಾ ಕಡೆ ತಿರುಗಿಸುತ್ತಿರುವುದು ಒಂದಡೆಯಾದರೆ ಆಯ್ದ ರಾಜ್ಯಗಳಲ್ಲಿ, ಪ್ರದೇಶಗಳಲ್ಲಿ ಕೋಮು ಪ್ರಚೋದನೆ, ಗಲಭೆಗಳನ್ನು ಹೊತ್ತಿಸುತ್ತಿದೆ. ಇದಕ್ಕೆ ನಮ್ಮ ರಾಜ್ಯವೂ ಹೊರತಲ್ಲ.

ನವೆಂಬರ್ 17ಕ್ಕೆ ನರೇಂದ್ರ ಮೋದಿಯನ್ನು ಕರ್ನಾಟಕಕ್ಕೆ ಕರೆದು ತರಲಾಗುತ್ತಿದೆ. ಬೆಂಗಳೂರಿನಲ್ಲಿ ಆತನ ಭಾಷಣ. ಆ ಬಳಿಕ?! ಎಲ್ಲಿ ಮೋದಿ ಹೋಗಿ ಬರುವನೋ ಅಲ್ಲಿ ಕೋಮು ಗಲಭೆಗಳು ಸಂಭವಿಸಿವೆ. ಸಂಭವಿಸುವಂತೆ ನೋಡಿಕೊಳ್ಳಲಾಗಿದೆ. ಹುಡುಗ-ಹುಡುಗಿ ಮಾತನಾಡಿದರೆಂಬ ಕ್ಷುಲ್ಲಕ ಕಾರಣವಾಗಿರಬಹುದು. ಆದರೆ ಅದರ ಪರಿಣಾಮ ಮಾತ್ರ ಘೋರವನ್ನಾಗಿಸಲಾಗುವುದು. ಲೋಕಸಭಾ ಚುನಾವಣೆಗೆ ಕೋಮು ವಿಭಜನೆಯನ್ನೇ ನೆಚ್ಚಿಕೊಂಡಿರುವ ಬಿಜೆಪಿಯು ಮೋದಿಯನ್ನು ಪ್ರ ಧಾನಿ ಅಭ್ಯರ್ಥಿಯನ್ನಾಗಿ ಆರೆಸ್ಸೆಸ್ ಘೋಷಿಸಿದ್ದು ಅದ-ಕ್ಕೆ ಹುಮ್ಮಸ್ಸು ಹೆಚ್ಚಿಸಿತು. ಇಂತಹ ಮೋದಿಯನ್ನು ಕ-ರೆದು ತಂದ ಬಳಿಕ ಅದು ರಾಜಕೀಯ ಲಾಭ ಹೇಗೆಲ್ಲಾ ಗಿಟ್ಟಿಸಬೇಕು ಎಂಬುದರಲ್ಲಿ ಹಿಂದೆ ಬಿದ್ದೀತೇ?

ಕೋಮುವಾದದ ಕೃತ್ಯಗಳು


ಈಗಾಗಲೇ ಕರಾವಳಿಯಲ್ಲಿ ಅದು ನಡೆಸಿರುವ ಅಟ್ಟಹಾಸದ ದುಷ್ಕೃತ್ಯಗಳನ್ನು ಇದೇ ಪುಟದ ಕಾಲಂಗಳಲ್ಲಿ ತಾವು ಓದಿದ್ದೀರಿ. ಗೋವು, ಹುಡುಗಿಯರು, ಪಾರ್ಟಿ-ಪ್ರವಾಸ, ಮುಂ.ಗಳಲ್ಲಿ ಧಾಳಿಗಳು. ಇವುಗಳ ಜೊತೆ-ಗೆ ಇದೀಗ ಬಜರಂಗದಳ, ಹಿಂದೂ ಮಹಾಸಭಾ ಸಂಘಟನೆಗಳ ಮೂಲಕ 'ಖಡ್ಗ ದೀಕ್ಷೆ' ಹೆಸರಿನಲ್ಲಿ ಹಿಂದುತ್ವದ ಉಗ್ರಗಾಮಿ ಚಟುವಟಿಕೆಗಳಿಗೆ ಇಳಿದಿದೆ. ಹಿಂಸೆಗೆ ಮತ್ತಷ್ಟು ಪ್ರಚೋದಿಸುತ್ತಿರುವುದು ಧಾಳಿಯ ಸಿದ್ಧತೆಯ ಮುನ್ಸೂಚನೆ. ಇತರೆ ಜಿಲ್ಲೆಗಳಲ್ಲಿಯೂ ಕಾಣುವ ಸಂಗತಿ.

ಹಾಗೇ ಬಾಬಾಬುಡನ್‌ಗಿರಿಯಲ್ಲಿ ಅಲ್ಲಿನ ಕೋಮುಸೌಹಾರ್ದತೆಯ ಸೂಫಿ-ಸಂತ ಪರಂಪರೆ, ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ದತ್ತ ಜಯಂತಿ, ದತ್ತ ಯಜ್ಞ, ದತ್ತಮಾಲೆಯಂತಹ ಹಿಂದೆಂದೂ ಇಲ್ಲದ ಆಚರಣೆಗಳಿಗೆ ಸಿದ್ಧತೆ ಆರಂಭಿಸಿ ನವೆಂಬರ್-ಡಿಶೆಂಬರ್‌ನಲ್ಲಿ ಕೋಮುದ್ವೇಷದ ಕಿಚ್ಚು ಹೊತ್ತಿಸಲು ನಿರ್ಧರಿಸಿದೆ. ಬೆಳ್ತಂಗಡಿಯ ಸೌಜನ್ಯಳ ಕೊಲೆ ಪ್ರಕರಣದಲ್ಲಿ ವಿಶ್ವ ಹಿಂದೂ ಪರಿಷತ್‌ನ ವಿ.ಪೇಜಾವರರೂ ಒಳಗೊಂಡು ಇಡೀ ಸಂಘ ಪರಿವಾರ ಆರೋಪಿಗಳ ರಕ್ಷಣೆಗೆ ಟೊಂಕ ಕಟ್ಟಿ ನಿಂತಿದ್ದು ಯಾವ ಧರ್ಮ ಕಾಯಲು? ಧರ್ಮಸ್ಥಳದ ಮಾಫಿಯಾದ ಬಲ, ಮುಗ್ಧ ಜನರನ್ನು ಹಾದಿ ತಪ್ಪಿಸಿ ರಾಜಕೀಯ ಬೆಂಬಲ ಗಳಿಸುವ ಹುನ್ನಾರವಲ್ಲದೇ ಇನ್ನೇನಿದೆ?

ರಾಜ್ಯದಲ್ಲಿ ಇತ್ತೀಚೆಗೆ ಆರೆಸ್ಸೆಸ್ ನಡೆಸಿದ ದಿನಾಚರಣೆಯನ್ನು ಇದೇ ಉದ್ದೇಶಕ್ಕೆ ಬಳಸಲಾಯಿತು. ಹಲವು ಕಡೆ ಧಾರ್ಮಿಕ ಅಲ್ಪಸಂಖ್ಯಾತರನ್ನು ಬೇಕೆಂದೇ ಕೆಣಕುವ ಪ್ರಯತ್ನಗಳನ್ನೂ ಮಾಡಲಾಯಿತು. ವಿಶೇಷವಾಗಿ ಬೆಂಗಳೂರಿನಲ್ಲಿ ಬಿಜೆಪಿಯ ಪ್ರಧಾನ ಕಾರ್ಯದರ್ಶಿ, ಸಂಸದ ಅನಂತಕುಮಾರ್ ಚಾಮರಾಜಪೇಟೆಯ ಈದ್ಗಾ ಮೈದಾನಕ್ಕೆ ನುಗ್ಗಿ ದಾಂಧಲೆ ನಡೆಸಲು ಕಾರ್ಯಕರ್ತರಿಗೆ ಕುಮ್ಮಕ್ಕು ನೀಡಿದ್ದು ಏನನ್ನು ಹೇಳುತ್ತದೆ. ಸಂವಿಧಾನದ ಮೇಲೆ ಪ್ರಮಾಣ ಮಾಡಿದ ತಾನೊಬ್ಬ ಸಂಸದ ಎಂಬುದನ್ನು ಮರೆತು ವರ್ತಿಸಿದ್ದರ ಉದ್ದೇಶ ಕೋಮುದ್ವೇಷ ಹುಟ್ಟಿಸುವುದೇ ಅಲ್ಲವೇ?

ರಾಜಕೀಯ ವರಸೆಗಳು

ಇವುಗಳ ಜೊತೆಗೆ ಸಾರ್ವಜನಿಕ ರಾಜಕೀಯ ವರಸೆಗಳನ್ನೂ ಅದು ಬಿಟ್ಟಿಲ್ಲ ಮತ್ತು ವಿವಿಧ ರಾಜಕೀಯ ಪಕ್ಷಗಳನ್ನು, ಶಕ್ತಿಗಳನ್ನು ಸೆಳೆಯಲು ತನ್ನ ಪ್ರಯತ್ನವನ್ನು ತೀವ್ರಗೊಳಿಸಿದೆ. ಮುಖ್ಯವಾಗಿ ಹಲವು ತಿಂಗಳಿಂದಲೂ ಗಮನಿಸಿರುವಂತೆ ಕೆಲವು ಉಚ್ಚಾಟಿತ ನಾಯಕರಿಗೆ ಅದು ಬಲೆ ಬೀಸಿ ಕಾದು ಕುಳಿತಿತ್ತು. ಅದರಂತೆ ಬಿಜೆಪಿಯ ಗಾಳಕ್ಕೆ ಯಡಿಯೂರಪ್ಪ ಬಿದ್ದಿದ್ದಾರೆ. ಅವರಿಗೆ ಬೇರೆ ಗತಿಯೂ ಮತಿಯೂ ಇಲ್ಲ. ಅದೇ ಹೊತ್ತಿನಲ್ಲಿ ಬಿಜೆಪಿಯೊಳಗೆ ಸೇರಿಸಿಕೊಳ್ಳಲೂ ಬಿಜೆಪಿಯೂ ಸಿದ್ಧವಿಲ್ಲ. ಹೀಗಾಗಿ ಮೋದಿ ಮಂತ್ರದ ಕಡ್ಡಿ ಹಿಡಿದು ಕೆಜೆಪಿ ಪಕ್ಷವು ಬಿಜೆಪಿ ನೇತೃತ್ವದ ಎನ್‌ಡಿಎಯ ಭಾಗವಾಗಲು ಅರ್ಜಿ ಹಾಕಿ ಕಾದು ಕುಳಿತಿದ್ದಾರೆ. ಅದರ ಅಡ್ವಾನ್ಸ್ ಎಂದೇನೋ ಸಂದರ್ಭ ಸೃಷ್ಟಿಸಿಕೊಂಡು ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಅತ್ಯಂತ ಕೀಳು ಮಾತುಗಳಲ್ಲಿ ಬೈಯ್ದಾಡಿದ್ದಾರೆ.



ಇದೇ ಹೊತ್ತಿನಲ್ಲಿ ರಾಜಕೀಯ ನಡೆಯ ಗೊಂದಲದಲ್ಲಿರುವ ಗಣಿ ಮಾಫಿಯಾದ ಜ.ರೆಡ್ಡಿ ಬಣದ ಶ್ರೀರಾಮುಲು ಪಕ್ಷವನ್ನು ಸೆಳೆಯಲು ನಡೆಸಿರುವ ಪ್ರಯತ್ನದಲ್ಲಿ ಫಲ ತಕ್ಷಣ ಕೈಗೂಡದಿದ್ದರೂ ಬಿಜೆಪಿಗೆ ನಿರಾಸೆ ಆಗಿಲ್ಲ. ಯಡ್ಡಿ ಮತ್ತು ರೆಡ್ಡಿ ಬಣಗಳು ಬಿಜೆಪಿಯ ಹತ್ತಿರ ಸರಿಯುವುದು ರಾಜಕೀಯವಾಗಿ ಅದಕ್ಕೆ ಒಂದಿಷ್ಟು ಬಲ ತರಬಹುದು(ಹೇಳಿಕೊಳ್ಳುವಷ್ಟಲ್ಲದಿದ್ದರೂ). ಹೀಗೆ ರಾಜ್ಯದಲ್ಲಿ ಬಿಜೆಪಿಯು ಕಳೆದು ಹೋದ ನೆಲೆಯನ್ನು ಪಡೆಯಲು ಹಲವಾರು ತಂತ್ರ-ಕುತಂತ್ರಗಳ ಮೂಲಕ ಯತ್ನಿಸುತ್ತಿದೆ.

ಹಾಗೇ ಮೋದಿಯನ್ನು ಕರೆದು ತರುತ್ತಿರುವ ಸಂಘ ಪರಿವಾರ ರಾಜ್ಯದ ಎಲ್ಲಾ ಜಿಲ್ಲೆಗಳ ಹಳ್ಳಿಗಳನ್ನೂ ತಲುಪುತ್ತಿದೆ. ಅದಕ್ಕಾಗಿ ಬಿಜೆಪಿ ಗೆಳೆಯರು ಎಂಬ ಸಂಘಟನೆಯನ್ನೂ ಸೃಷ್ಟಿಸಿದೆ. 17ರಂದು 10 ಲಕ್ಷ ಜನರನ್ನು ಸೇರಿಸಲು ಹೊರಟಿದೆ. ಹೈದ್ರಾಬಾದ್‌ನ ಸ್ಟಂಟ್‌ನಂತೆ ಇಲ್ಲಿಯೂ ಪ್ರವೇಶ ಶುಲ್ಕ (ರೂ.5 ರ ಬದಲು 10ರೂ.) ನಿಗದಿಗೊಳಿಸಿದೆ. ಹಣ ಕೊಟ್ಟು ಸಾಮಾನ್ಯ ಜನ ಬರುವ ದಿನಗಳು ಈ ಪಕ್ಷದ ಶಬ್ದ ಕೋಶದಲ್ಲಿ ಕಣ್ಮರೆಯಾಗಿದೆ. ಹಾಗಿರುವಾಗ ಹಣ ಯಾರು ಕೊಡುತ್ತಾರೆ ಎಂದು ಬೇರೆ ಹೇಳುವುದು ಬೇಕಿಲ್ಲ, ಅಲ್ಲವೇ?


ಆತಂಕ ಹುಟ್ಟಿಸುವ ನಡೆಗಳು

ಅಂತೂ, ಮೋದಿ ಕಾಲಿಡುವ ಮುನ್ನ ಇಷ್ಟು ಆಕ್ರಮಣಕಾರಿ ನಡೆ. ನಂತರ? ಕರ್ನಾಟಕವನ್ನು ಗುಜರಾತ್ ಆಗಿಸುವ ಪರಿವಾರದ ಎದುರಲ್ಲಿ ಹಲವು ಹತ್ತು ಆತಂಕಗಳು. ಸೌಹಾರ್ದ ಕರ್ನಾಟಕ ದ್ವೇಷದ ಕರ್ನಾಟಕ ಆಗದಿರುವಂತೆ ಜನ ಉತ್ತರ ನೀಡಬೇಕು. ಹಾಗೇ ಕರ್ನಾಟಕ ಸರ್ಕಾರದ ಇದನ್ನು ಹೇಗೆ ಎದುರಿಸುತ್ತದೆ ಎಂಬುದು ಬಹಳ ಮಹತ್ವದ ಪ್ರಶ್ನೆಯು ಆಗಿದೆ.

'ಸರ್ಕಾರದ ಸೌಲಭ್ಯಗಳು ದಲಿತರ ಪಾಲಿಗೆ ಇನ್ನೂ ಗಗನ ಕುಸುಮವೇ'
ನಾಗಮಂಗಲ ತಾಲ್ಲೂಕು ದಲಿತ ಹಕ್ಕು ಸಮಾವೇಶದ ಅಭಿಪ್ರಾಯ

ವರದಿ: ಆರ್.ಕೃಷ್ಣ, ಮಂಡ್ಯ

ಮಂಡ್ಯ ಜಿಲ್ಲೆಯಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ನಾಗಮಂಗಲ ತಾಲ್ಲೂಕಿನಲ್ಲಿ ದಲಿತರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಇಲ್ಲಿ 240 ಹಳ್ಳಿಗಳಲ್ಲಿ 140 ಹೆಚ್ಚು ಹಳ್ಳಿಗಳಲ್ಲಿ ದಲಿತರು ವಾಸಮಾಡುತ್ತಿದ್ದು, ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿ ಸಿಗದೆ ಸಾಮಾಜಿತವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಹಳ ಹಿಂದುಳಿದಿದ್ದಾರೆ. ಬಹಳಷ್ಟು ದಲಿತ ಯುವಕ-ಯುವತಿಯರು ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಎಷ್ಟೋ ಹಳ್ಳಿಗಳಲ್ಲಿ ರಸ್ತೆ, ನಿವೇಶನ, ನೀರು, ಸ್ಮಶಾನ ಯಾವುದು ಇಲ್ಲ. ಬಿಟ್ಟಿ ದುಡಿಮೆಗೆ ಬಳಸಿಕೊಳ್ಳುವ ಬಲಾಢ್ಯರು ನಿರಂತರವಾಗಿ ವಂಚಿಸುತ್ತಲೇ ಬರುತ್ತಿದ್ದಾರೆ. ಜನಪ್ರತಿನಿಧಿಗಳು ಸಹ ಸೌಲಭ್ಯವನ್ನು ಮರೆಮಾಚುತ್ತಿದ್ದು ದಲಿತರ ಪಾಲಿಗೆ ಅವು ಗಗನ ಕುಸುಮವಾಗಿವೆ. ಎಷ್ಟೋ ಸರ್ಕಾರಿ ಸೌಲಭ್ಯಗಳ ಬಗ್ಗೆ ಅಲ್ಲಿಯ ಜನತೆಗೆ ಗೊತ್ತೇ ಇಲ್ಲ. ಅಂಬೇಡ್ಕರ್ ಅಭಿವೃದ್ಧಿ ನಿಗಮ ಬಿಟ್ಟರೆ ಯಾವುದೇ ಇಲಾಖೆಯ 22.75 ಅನುದಾನದ ಬಳಕೆ ಸಾಮಾನ್ಯರಿಗೆ ಗೊತ್ತಿಲ್ಲವಾಗಿದೆ. ಇಲ್ಲಿ ದಲಿತರ ಮನಸ್ಥಿತಿಯನ್ನು ಬಳಸಿಕೊಂಡು ನಾನಾ ಸಂಘಗಳು ತಲೆ ಎತ್ತಿವೆ. ಇದರಲ್ಲಿ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಸಮುದಾಯವನ್ನು ಬಳಸಿಕೊಳ್ಳುತ್ತಿದ್ದಾರೆ. ದಲಿತರ ಅಭಿವೃದ್ಧಿ ಪ್ರಶ್ನೆ ಕುರಿತು ಸ್ಪಷ್ಟತೆ ಇಲ್ಲವಾಗಿದೆ. ಇಂತಹ ಸಂದರ್ಭದಲ್ಲಿ ದಲಿತ ಹಕ್ಕುಗಳ ಸಮಿತಿಯಿಂದ ತಾಲ್ಲೂಕು ದಲಿತರ ಹಕ್ಕು ಸಮಾವೇಶ 27-09-2013 ರಂದು ಅಂಬೇಡ್ಕರ್ ಭವನದಲ್ಲಿ ಜರುಗಿತು.



ಸಮಾವೇಶವನ್ನು ಉದ್ಘಾಟನೆಯನ್ನು ಮಾಡಿದ ಸಿಪಿಐ(ಎಂ) ಮುಖಂಡ ಗೋಪಾಲಕೃಷ್ಣ ಅರಳಹಳ್ಳಿಯವರು ದಲಿತರು ಮುಖ್ಯವಾಹಿನಿಗೆ ಬರುವಂತಹ ಸನ್ನಿವೇಶ, ಅವಕಾಶಗಳು ನಿರ್ಮಾಣವಾಗಬೇಕು. ಶತ ಶತಮಾನಗಳಿಂದ ದಲಿತರನ್ನು ಶೋಷಿಸುತ್ತಲೇ, ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದು, ತಮ್ಮ ಹಕ್ಕನ್ನು ಚಲಾಯಿಸುವ ಮನಸ್ಥಿತಿಯನ್ನು ದಲಿತರು ಕಳೆದುಕೊಳ್ಳುತ್ತಿದ್ದಾರೆ. ಮಂಡ್ಯದಂತಹ ಜಿಲ್ಲೆಯಲ್ಲಿ ಜಾತಿ ಪದ್ಧತಿ ಬಲವಾಗಿದ್ದು ರಾಜ್ಯದಲ್ಲೇ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಪ್ರಥಮಸ್ಥಾನ ಪಡೆದುಕೊಂಡಿದೆ. ದಲಿತರ ಪರವಾಗಿದ್ದೇವೆಂದು ಹೇಳಿಕೊಂಡು ಬಹಳಷ್ಟು ಸಂಘಟನೆಗಳು ಬಂದರೂ ಕೂಡ, ದಲಿತರ ಬದುಕು ಹಸನಾಗಿಲ್ಲ, ತಮ್ಮ ಹಕ್ಕನ್ನು ತಿಳಿದುಕೊಂಡು ಪರಿಸ್ಥಿತಿಯನ್ನು ಸಂಘಟನಾತ್ಮಕವಾಗಿ ಎದುರಿಸಬೇಕೆಂದು ಕರೆ ನೀಡಿದರು.

ಮತ್ತೊಬ್ಬ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಸಿಪಿಐ(ಎಂ) ಜಿಲ್ಲಾಕಾರ್ಯದರ್ಶಿ ಎಂ.ಪುಟ್ಟಮಾದುರವರು,
ಜಿಲ್ಲೆಯಲ್ಲಿ ಹಲವು ಕಡೆ, ಜಾತಿ ದೌ
ಬಹಿಷ್ಕಾರ, ಮರ್ಯಾದಾ ಹತ್ಯೆ, ದೇವ
ಪ್ರವೇಶ ನಿರಾಕರಣೆ, ಅನಿಷ್ಟ ಪದ್ಧತಿಗ
ಕ್ಷೌರ ನಿರಾಕರಣೆ ಮುಂತಾದ
ನಡೆಯುತ್ತಿವೆ. ಇಂತಹ ಹಲವು ಪ್ರಕರಣ
ಸಿಪಿಐ(ಎಂ) ಪಕ್ಷ ಮತ್ತು ದಲಿತ ಹ
ಸಮಿತಿ ನೇತೃತ್ವದಲ್ಲಿ ಮಧ್ಯಪ್ರವೇಶ
ನೊಂದ ಜನತೆಗೆ ಪರಿಹಾರ ಕೊಡಿ
ಸಾಧ್ಯವಾಗಿದೆ. ಜನಸಂಖ್ಯೆಗೆ ಅನುಗುಣ
ಅನುದಾನ ಬಿಡುಗಡೆಯಾದರೆ,
ಸರಿಯಾಗಿ ಬಳಕೆಯಾದರೆ ದಲಿತರ ಬ
ಸಾಕಷ್ಟು ಉತ್ತಮಗೊಳ್ಳುತ್ತದೆ. ದ
ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊ
ಹಾಗೆ, ಅವಕಾಶ ಕಲ್ಪಿಸಲು ಸ
ಮುಂದಾಗಬೇಕು ಎಂದರು. ಅದೇ ರೀತಿ
ಮಂಡ್ಯ ತಾಲ್ಲೂಕಿನ ರಾಜೇಂದ್ರ
ಬಾಬು, ಮದ್ದೂರು ತಾಲ್ಲೂಕಿನ ತ
ಜಿಲ್ಲಾ ಮುಖಂಡರಾದ ಆರ್. ಕೃಷ್ಣ
ಮಾತಾಡಿದರು. ಈ ಕಾರ್ಯಕ್ರ
ಅಧ್ಯಕ್ಷತೆಯನ್ನು ಜಯಶಂಕರ್ ವಹಿಸಿ
ತಾಲ್ಲೂಕುಗಳು, ಹೋಬಳಿಗ
ಪ್ರತಿನಿಧಿಗಳು ಬಂದಿದ್ದರು ಸುಮಾರ
ಗ್ರಾಮ ಪಂಚಾಯಿತಿಗಳ 26 ಹಳ್ಳಿಗ
ಜನರು ಆಗಮಿಸಿದ್ದರು. ಅಂತಿಮ
20 ಜನರ ತಾಲ್ಲೂಕು ಸಮಿತಿ ರಚನೆ
ಅಧ್ಯಕ್ಷರಾಗಿ ಶಿವಲಿಂಗಯ್ಯ ಬಿಂಡೇನ
ಕಾರ್ಯದರ್ಶಿಯಾಗಿ, ಜಯಶ
ಬಿಳಿಗುಂದ ಆಯ್ಕೆಯಾದರು.

'ಶ್ರೀ ಕ್ಷೇತ್ರದ ವಿರುದ್ಧ' ಎಂಬ ಅಪಪ್ರಚಾರ - ಮುಗ್ಧ ಜನತೆಯನ್ನು ದಾರಿತಪ್ಪಿಸುವ ಹುನ್ನಾರ'.
ಸೌಜನ್ಯ ಪ್ರಕರಣದ ಕುರಿತು - ಕುಂದಾಪುರ ಡಿವೈಎಫ್ಐ

ಧರ್ಮಸ್ಥಳದ ಕುಮಾರಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ಪ್ರತಿಭಟನೆ ನಡೆಸಿ ಆಗ್ರಹಿಸಿದೆ. ಶಾಸ್ತ್ರಿ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಸೌಜನ್ಯ ಕೊಲೆ ನಿಷ್ಪಕ್ಷಪಾತ ತನಿಖೆಯಾಗಬೇಕಾಗಿದೆ ಅಧಿಕಾರಕ್ಕಾಗಿ ನ್ಯಾಯ ಕಡೆಗಣಿಸುತ್ತಿರುವ ರಾಜಕಾರಣಿಗಳನ್ನು ಜನತೆ ದೂರವಿಡಬೇಕು, ಧರ್ಮದ ಹೆಸರಿನಲ್ಲಿ ಪ್ರಕರಣವನ್ನು 'ಶ್ರೀ ಕ್ಷೇತ್ರ ವಿರುದ್ಧ' ಎಂಬ ಅಪಪ್ರಚಾರ ನಡೆಸಿ ಮುಗ್ಧ ಜನತೆಯನ್ನು ದಾರಿತಪ್ಪಿಸುವ ಕುತಂತ್ರ ನಿಲ್ಲಿಸಬೇಕು. ನ್ಯಾಯದ ಪರವಾಗಿ ಹೋರಾಟ ಮಾಡುತ್ತಿರುವವರಿಗೆ ಬೆದರಿಕೆ ಒಡ್ಡುವುದನ್ನು ಡಿವೈಎಫ್ಐ ಖಂಡಿಸುತ್ತದೆ. ಸೌಜನ್ಯ ಕುಟುಂಬಕ್ಕೆ ಗರಿಷ್ಠ ಭದ್ರತೆ ಒದಗಿಸಬೇಕು. ಹೆಣ್ಣಿನ ಮಾನ-ಪ್ರಾಣಕ್ಕೆ ಗೌರವವಿಲ್ಲದ ರಾಜಕಾರಣ ನಿಲ್ಲಿಸಬೇಕು. ಧರ್ಮದ ಹೆಸರಿನಲ್ಲಿ ಅಧರ್ಮ ನಿಲ್ಲಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಡಿವೈಎಫ್ಐನ ಸಂಚಾಲಕರಾದ ರಾಜೇಶ್ ವಡೇರಹೋಬಳಿ,
ಸಹ ಸಂಚಾಲಕರಾದ ಸುರೇಶ್ ಕಲ್ಲಾ
ಡಿವೈಎಫ್ಐನ ಮಾಜಿ ಅಧ್ಯಕ್ಷ
ಎಚ್.ನರಸಿಂಹ ಸಭೆಯನ್ನುದ್ದ
ಮಾತನಾಡಿದರು. ಪ್ರಭಾಕರ್ ನೇರ
ಗಣೇಶ್ ಕಲ್ಲಾಗರ, ರಾಜಾ ಬಿ.ಟಿ.
ಶೇಕರ ದೋಣಿಮನೆ, ಶ್ರೀಕಾಂತ ಹೆಮ
ಸಂತೋಷ ಹೆಮ್ಮಾಡಿ ಪ್ರತಿಭಟನೆಯ ನ
ವಹಿಸಿದ್ದರು.



ಭಾರತದ ಔಷಧಿ ಕಂಪನಿಗಳನ್ನು.....

ಪುಟ 2 ರಿಂದ

ದೇಶದ ಮೂಲೆ ಮೂಲೆಗಳಿಗೆ ಹೋಗಿ ತಮ್ಮ ಔಷಧಿ ಮಾರಾಟ ಜಾಲವನ್ನು ಹೆಚ್ಚಿಸಿಕೊಂಡಿದ್ದವು ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಸವಾಲಾಗಿದ್ದವು. ಈ ಬೆಳವಣಿಗೆ ಬೇರಾವ ದೇಶದಲ್ಲೂ ಕಂಡುಬಂದಿರಲಿಲ್ಲ. ಆದರೆ ಈಗ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶಕ್ಕೆ ಬಂದು, ನಮ್ಮ ಕಂಪನಿಗಳನ್ನು ಕೊಂಡುಕೊಂಡು, ತಮ್ಮ ವಹಿವಾಟನ್ನು ಹೆಚ್ಚಿಸಿಕೊಳ್ಳಲು ಮುಂದಾಗಿವೆ. ಇತ್ತೀಚೆಗೆ ಡಿಪಿಸಿಒ 2013 ಜಾರಿಯಾಗಿದೆ. ಈ ಬೆಳವಣಿಗೆಯಿಂದ ಔಷಧಿ ಬೆಲೆಗಳು ಕಡಿಮೆಯಾಗುತ್ತದೆಂದು ಹೇಳಲಾಗುತ್ತಿದೆ. ಆದರೆ ಅನೇಕ ಅಗತ್ಯ ಔಷಧಿಗಳು ಈ ವಿಧಿಯಲ್ಲಿ ಬರದೇ ಇರುವುದರಿಂದ, ಇದೊಂದು ಕಣ್ಣಿಗೆ ಮಣ್ಣೆರೆಚುವ ತಂತ್ರ.

ಸಾಮಾನ್ಯವಾಗಿ ವಸ್ತುವಿನ ಮೇಲೆ ಅಬಕಾರಿ ಶುಲ್ಕ (Excise Duty) ಹೇರುವಾಗ ಅದನ್ನು ತಯಾರಿಕೆ-
ಯ ಖರ್ಚಿನ ಮೇಲೆ ವಿಧಿಸಲಾಗು
ಆದರೆ 2005 ರಲ್ಲಿ ಕೇಂದ್ರ ಸ
ಕೊಟ್ಟ ಹೇಳಿಕೆ ಏನೆಂದರೆ ಇನ್ನುಮ
ಅಬಕಾರಿ ಶುಲ್ಕವನ್ನು ಗರಿಷ್ಠ ಮಾ
ಬೆಲೆ ಮೇಲೆ (Maximum r
price) ವಿಧಿಸಲಾಗುವುದೆಂದು. ಇದು
ಔಷಧಿ ಬೆಲೆಗಳು ಹೆಚ್ಚಾಗುವುದ
ಅದರ ಜವಾಬ್ದಾರಿಯನ್ನು ಜನಸಾಮಾ
ಹೊರಬೇಕಾಗುತ್ತದೆ. ಆದರೆ ಅಗತ್ಯ ಔಷ
ಮೇಲೆ ಸರಕಾರ ಏಕೆ ಕರ ವಿಧಿಸಬೇಕು

ಔಷಧಿ ಬೆಲೆಗಳು ದಿನದಿಂದ
ಹೆಚ್ಚುತ್ತಲಿವೆ. ಇದಕ್ಕೆ ಕಾರಣ ಬಹುರಾ
ಕಂಪನಿಗಳು ಭಾರತೀಯ ಕಂಪನಿ
ಕೊಂಡುಕೊಳ್ಳುವುದು. ಇದನ್ನು ಸ
ತಡೆಯಲು ಪ್ರಯತ್ನಿಸಬೇಕು. ಸಾರ್ವ
ಔಷಧಿ ಉದ್ಯಮ ಈಗ ಮುಚ್ಚುವ ಹಂತದ
ಅದನ್ನು ಪುನರುತ್ಥಾನಗೊಳಿಸಬೇಕು.
ಔಷಧಿಗಳ ದೊರಕುವಿಕೆಗೆ ಸು
ಕೂಡಲೇ ವ್ಯವಸ್ಥೆ ಮಾಡಬೇಕು. ಇಲ್ಲವ
ಜನಾರೋಗ್ಯಕ್ಕೆ ಆಪತ್ತು ಹೆಚ್ಚುವ
ಇದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಭೂ ಸಂಬಂಧಗಳು ಬದಲಾಗದೆ ಅಭಿವೃದ್ಧಿ ಎಂಬುದು ಮರೀಚಿಕೆ'

–ಡಾ॥ ಎಂ.ಚಂದ್ರಪೂಜಾರಿ

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ರಾಜ್ಯ ಸಮಿತಿಯು ಅಕ್ಟೋಬರ್ 17 ರಂದು ಬೆಂಗಳೂರಿನ ಎನ್‌ಜಿಓ ಸಭಾಂಗಣದಲ್ಲಿ ಸರ್ಕಾರದ 'ಭೂನೀತಿ ರೈತರಿಗಾಗಿಯೋ? ಅಥವಾ ಬಹುರಾಷ್ಟ್ರೀಯ ಕಂಪನಿಗಾಗಿಯೋ?' ಎಂಬ ರಾಜ್ಯಮಟ್ಟದ ವಿಚಾರಸಂಕಿರಣ ಸಂಘಟಿಸಿತ್ತು. ಒಂದು ವರದಿ


ವರದಿ–ಟಿ.ಯಶವಂತ

...ತ್ರ್ಯ ಬಂದ ಆರು ದಶಕಗಳ ...ವೂ ಗ್ರಾಮೀಣ ಬದುಕನ್ನು ...ತ್ರಿಸುತ್ತಿರುವ ಭೂ ಮಾಲೀಕ ...ಾನಿಕೆಯ ಆಸ್ತಿ ಸಂಬಂಧಗಳನ್ನು ... ಮಾಡದೇ ಅಭಿವೃದ್ಧಿ ಹಾಗೂ ...ಪಡಿಸುವುದು ಕೇವಲ ಬೂಟಾಟಿಕೆ ... ಇಂತಹ ಅಭಿವೃದ್ಧಿ ಬಹುಪಾಲು ...ಪಾಲಿಗೆ ಮರೀಚಿಕೆ ಎಂದು ಕನ್ನಡ ... ಪ್ರಾಧ್ಯಾಪಕರು, ನಾಡಿನ ಪ್ರಮುಖ ...ರಾದ ಪ್ರೊ. ಎಂ. ಚಂದ್ರಪೂಜಾರಿರವರು ...ಸಿದರು. ಅವರು ವಿಚಾರ ಸಂಕಿರಣದ ... ಉಪನ್ಯಾಸಕರಾಗಿ ಅವರು ...ಾಡುತ್ತಿದ್ದರು.

...60, 70 ರ ದಶಕದವರೆಗೆ ಸಿನಿಮಾ, ..., ಕಲೆಗಳಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ ...ಂಗಳು ಕೇಂದ್ರ ವಿಷಯಗಳಾಗಿದ್ದವು. ... ದಶಕದಲ್ಲಿ ಈ ಪ್ರಕ್ರಿಯೆ ಹಿಂದೆ ...ಲಾರಂಭಿಸಿ 1990 ರ ಹೊತ್ತಿಗೆ ... ತಿರುವು–ಮುರುವು ಉಂಟಾಯಿತು. ... ಸಿನಿಮಾ ಧಾರವಾಹಿಗಳಲ್ಲಿ ಕೃಷಿಕರು ...ದೇ ಇಲ್ಲ. ಬಹುರಾಷ್ಟ್ರೀಯ ...ಗಳ ವ್ಯಾಪಾರಿಗಳ, ಕಂಪನಿಗಳ ...ಸ್ಥರ ಪಾತ್ರಗಳು ...ಡಿಬರುತ್ತಿವೆ. ...ದರೆ ಭಾರತದಲ್ಲಿ ...ರೇ ಇಲ್ಲವೇ? ...ರವಾಗಿ ಭಾರತದಲ್ಲಿ ...60 ರಷ್ಟು ಜನ ... ನಂಬಿ ಜೀವನ ...ುತ್ತಿದ್ದಾರೆ. ಆದ– ...ಮುಖ್ಯವಾಹಿನಿಯ ...ಸ್ಕೃತಿಯಲ್ಲಿ ...ಂಗಳ ಪಾತ್ರ ...ುವಾಗಿದೆ. ಈ ...ಕ್ಕೆ ಜಾಗತೀಕರಣದ ...ರಣೆಗಳು ಕಾರಣ ... ವಿವರಿಸಿದರು.

...ಭಿವೃದ್ಧಿಗೆ ಒಂದು ಉದ್ದೇಶವಿರುತ್ತದೆ. ...ಜವಾದಿ ರಾಜಕೀಯ ಪರಿಸರದಲ್ಲಿ ...ವಾದಿ ಮಾದರಿಯ ಅಭಿವೃದ್ಧಿ ...ರ, ಬಂಡವಾಳಶಾಹಿ ರಾಜಕೀಯ ...ರದಲ್ಲಿ ಬಂಡವಾಳಶಾಹಿ ಮಾದರಿ ...ೃದ್ಧಿ ನಡೆಯುತ್ತದೆ. ಸ್ವಾತಂತ್ರ್ಯ ನಂತರದ ...ತದ ಧೋರಣೆಗಳು ಬಂಡವಾಳ ... ಅಭಿವೃದ್ಧಿ ಮಾದರಿಯನ್ನು ...ಸರಿಸಿದ್ದರಿಂದಾಗಿ ಭಾರತದಲ್ಲಿ ಬಂಡವಾಳ ... ಅಭಿವೃದ್ಧಿಯನ್ನು ಸಾಧಿಸಿತು. ಈ ...ರೆಯನ್ನು ಆಧಾರವಾಗಿಟ್ಟುಕೊಂಡು ... ಸುಧಾರಣಾ ಕಾನೂನುಗಳನ್ನು ...ಮರ್ಶೆಗೆ ಒಳಪಡಿಸಬೇಕಾಗಿದೆ ಎಂದು ...ಾದಿಸಿದರು.

...955 ರ ಇನಾಂ ರದ್ಧತಿ ಕಾಯಿದೆ, ... ರ ಬಿ.ಡಿ. ಜತ್ತಿರವರ ಭೂ ಸುಧಾರಣಾ ...ೂನು ಹಾಗೂ 1974 ರ ದೇವರಾಜು ...ು ಕಾಲದ ಭೂಸುಧಾರಣಾ ಕಾನೂನು ...ಕದಲ್ಲಿ ಜಾರಿಗೆ ತಂದ ಭೂ ...ಯ ಶಾಸನಗಳಾಗಿವೆ. ಇವುಗಳಲ್ಲಿ ...5 ರ ಕಾಯಿದೆ ಭೂಮಾಲೀಕರನ್ನು ...ಷ್ಟು ಬಲಪಡಿಸಿದರೆ, 1961 ರ ಕಾಯಿದೆ ವಾಸ್ತವವಾಗಿ ಗೇಣಿ ಸುಧಾರಣಾ ಕಾನೂನು ಆಗಿ ಜಾರಿಗೆ ಬಂದು, ಈ ಪರಿಣಾಮವಾಗಿ ಶೇ. 80 ರಷ್ಟು ಗೇಣಿದಾರರು ಭೂಮಿ ಕಳೆದುಕೊಂಡರು. ಅಲ್ಪಸ್ವಲ್ಪ ಪ್ರಯೋಜನಕ್ಕೆ ಬಂದ 1974 ರ ಕಾಯಿದೆ ಗೇಣಿದಾರರ



ಚಳುವಳಿ ಬಲವಾಗಿದ್ದ ಅವಿಭಜಿತ ದಕ್ಷಿಣ ಕನ್ನಡ, ಕೋಲಾರ, ಶಿವಮೊಗ್ಗ ಹೊರತು ಪಡಿಸಿ ರಾಜ್ಯದ ಎಲ್ಲೂ ಜಾರಿಗೆ ಬರಲಿಲ್ಲ. ಇದರಲ್ಲೂ ಕೂಡ ಹಲವು ಗಂಭೀರವಾದ ನ್ಯೂನ್ಯತೆಗಳು ಇವೆ. ಹಾಗಾಗಿ ನಮ್ಮ ರಾಜ್ಯದಲ್ಲಿ ಭೂ ಸುಧಾರಣೆ ಅಪೂರ್ಣವಾಗಿ ಉಳಿದಿದೆ. ಆದರೆ ಕೆಲವು ಬುದ್ಧಿಜೀವಿಗಳು ಭೂ ಸುಧಾರಣಾ ಒತ್ತಾಯವನ್ನು ಮೂರ್ಖತನ ಎನ್ನುವುದು ಸರಿ ಅಲ್ಲ ಎಂದು ವಾದಿಸಿದರು.

ಸರ್ಕಾರಿ ವ್ಯಾಖ್ಯಾನದ ಪ್ರಕಾರವೇ ಶೇ. 75 ರಷ್ಟು ಜನ ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರಿದ್ದಾರೆ. ರಾಜ್ಯದಲ್ಲಿ 2/3 ಭಾಗ ಒಣ ಪ್ರದೇಶವಾಗಿದೆ. ಕರ್ನಾಟಕದಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 600 ರಿಂದ 700 ಮಿಲಿ ಮೀಟರ್‌ಗಳು, ಇಡೀ ದೇಶದಲ್ಲಿ ರಾಜಾಸ್ತಾನ ಬಿಟ್ಟರೆ ಕರ್ನಾಟಕವೇ ಅತಿ ಹೆಚ್ಚು ಒಣಭೂಮಿ ಹೊಂದಿರುವ ರಾಜ್ಯ. ಈ ಹಿನ್ನೆಲೆಯಲ್ಲಿ ನೀರಾವರಿ, ವಿದ್ಯುತ್, ಕೃಷಿಗೆ ಬೇಕಾದ ಹಣಕಾಸಿನ ಸೌಲಭ್ಯ ಮುಂತಾದ ಕ್ಷೇತ್ರಗಳಲ್ಲಿ ಸರ್ಕಾರ ಹೂಡಿಕೆ ಮಾಡಬೇಕು. ಒಣಭೂಮಿ ಪ್ರದೇಶದ ಮೇಲೆ ಕೋಟಿಗಟ್ಟಲೆ ಹಣ ಹೂಡಿ ಜನರ ಬದುಕನ್ನು ಉತ್ತಮಗೊಳಿಸಬೇಕು. ಆದರೆ ತದ್ವಿರುದ್ಧವಾಗಿ ಕೆಲವೇ ಕೋಟಿಗಳನ್ನು ವ್ಯಯಿಸಿ ಅಗ್ಗದ ಯೋಜನೆಗಳನ್ನು ಜಾರಿ ಮಾಡಿ ಜನಪ್ರಿಯತೆ ಪಡೆಯುತ್ತಿದ್ದಾರೆ. ಇಂತಹ ಅಭಿವೃದ್ಧಿ ಜನರನ್ನು ಸತತವಾಗಿ ಬಿಕ್ಷುಕರನ್ನಾಗಿಸುವ ಅಭಿವೃದ್ಧಿ. ಬಡತನವನ್ನು ನಿರ್ಮೂಲನೆ ಮಾಡದೇ ಬಡವರ ಬುಡ ಕೀಳುವ ಅಭಿವೃದ್ಧಿ ಎಂದು ವ್ಯಾಖ್ಯಾನಿಸಿ, ಈ ಕುರಿತು ರೈತರ ಜಾಗೃತಿ ಅವಶ್ಯಕ ಎಂದು ಅಭಿಪ್ರಾಯಪಟ್ಟರು.

ಕಂಪನಿ ಕೃಷಿ, ಹಸಿವು, ಆತ್ಮಹತ್ಯೆಗಳ ರಹದಾರಿ– ಜಿ.ವಿ. ಶ್ರೀರಾಮರೆಡ್ಡಿ

ಕಂಪನಿ ಕೃಷಿಗೆ ಅವಕಾಶ ಮಾಡಿಕೊಡುವ ಹಿಂದಿನ ಬಿಜೆಪಿ ಸರ್ಕಾರದ ನೀತಿಯನ್ನೇ ಈಗಿನ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೇಸ್ ಸರ್ಕಾರ ಮುಂದುವರೆಸುತ್ತಿದೆ. ಈ ಉದ್ದೇಶದ ಸಾಧನೆಗಾಗಿ ಜಾಗತಿಕ ಕೃಷಿ ಹೂಡಿಕೆದಾರರ ಸಮಾವೇಶಗಳನ್ನು ನಡೆಸಲಾಗುತ್ತಿದೆ. ಇಂತಹ ಪ್ರಯತ್ನಗಳು ರೈತರ ಪಾಲಿಗೆ ಮರಣಶಾಸನಗಳು ಎಂದು ಜಿ.ವಿ.ಶ್ರೀರಾಮರೆಡ್ಡಿಯವರು ಕಟುವಾಗಿ ಟೀಕಿಸಿದರು.

1936 ರಲ್ಲೇ ಎಐಕೆಎಸ್ ಉಳುವವನಿಗೆ ಭೂಮಿ ನೀಡುವ ಆಗ್ರಹ ಮಾಡಿತ್ತು. ಸ್ವಾತಂತ್ರ್ಯನಂತರ ಅಧಿಕಾರಕ್ಕೆ ಬಂದ ನೆಹರು ಭೂಮಾಲೀಕ ವ್ಯವಸ್ಥೆಯನ್ನು ರದ್ದುಗೊಳಿಸಲಿಲ್ಲ. ಇದರಿಂದ ಆಹಾರದ ಬಿಕ್ಕಟ್ಟು ಉಂಟಾಯಿತು. ಪಿ.ಎಲ್. 480 ಹೆಸರಿನಲ್ಲಿ ಅಮೇರಿಕದಿಂದ ಆಹಾರವನ್ನು ಅಮದು ಮಾಡಿಕೊಳ್ಳಲಾಯಿತು. ಜೊತೆಗೆ ಭೂಮಾಲೀಕರ ಕೈಯಲ್ಲೇ ಭೂಮಿ ಉಳಿಸಿ ವಿಜ್ಞಾನ–ತಂತ್ರಜ್ಞಾನದ ಬಳಕೆಗೆ ಒತ್ತು ನೀಡಿ ಹಸಿರು ಕ್ರಾಂತಿ ಹೆಸರಿನಲ್ಲಿ ಕೃಷಿ ಯಾಂತ್ರಿಕರಣವನ್ನು ಪ್ರೋತ್ಸಾಹಿಸಲಾಯಿತು. ಇದರಿಂದ ಆಹಾರದ ಉತ್ಪಾದನೆ ಹೆಚ್ಚಳಗೊಂಡಿತ್ತಾದರೂ ಹಳೆಯ ಭೂಮಾಲೀಕರನ್ನು ಬಂಡವಾಳ ಶಾಹಿ ಭೂಮಾಲೀಕರಾಗಿ ಪರಿವರ್ತಿಸಿ ಗ್ರಾಮೀಣ ಭಾಗದ ಜನರ ಅಸಮಾನತೆಯನ್ನು ತೀವ್ರವಾಗಿ ಹೆಚ್ಚಿಸಿತು. ಅದು ಇವತ್ತು ಕೃಷಿಯ ಕಂಪನೀಕರಣದ ಸ್ವರೂಪ ಪಡೆಯುತ್ತಿದೆ ಎಂದು ವಿಶ್ಲೇಷಿಸಿದರು.

ಸಾವಿರಾರು ಕೋಟಿ ರೂ.ಗಳ ಬಂಡವಾಳ ಇರುವವರ ಕೈಗೆ ಕೃಷಿ ಒಪ್ಪಿಸಿದರೆ ದೇಶದ ಜನರ ಅಗತ್ಯವನ್ನು ಕಡೆಗಣಿಸಲಾಗುತ್ತದೆ. ಈಗಾಗಲೇ ಕೃಷಿ ರಂಗದ ಉತ್ಪಾದನೆ ತೀವ್ರವವಾದ ಇಳಿಕೆ ಕಂಡಿರುವಾಗ, ಆಹಾರದ ಬೆಲೆಗಳು ವಿಪರೀತವಾಗಿ ಏರುತ್ತಿರುವಾಗ ವಿದೇಶದ ಅಗತ್ಯಕ್ಕಾಗಿ, ದತ್ತು ಉದ್ದೇಶದಿಂದ ಕೃಷಿ ನಡೆಸುವ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಕೃಷಿ ಒಪ್ಪಿಸಿದರೆ ಆಗುವ ಅನಾಹುತ ಊಹಿಸಲು ಕೂಡ ಅಸಾಧ್ಯ. ಇದರಿಂದ ಭಾರತ ಮತ್ತೊಂದು ಸೋಮಾಲಿಯಾ ಆಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮ ಕೃಷಿ ರಂಗದಲ್ಲಿ ಹಲವು ಲೋಪ–ದೋಷಗಳು ರೈತ ವಿರೋಧಿ ನೀತಿಗಳು, ದಲ್ಲಾಳಿ, ವ್ಯಾಪಾರಸ್ಥರ ಲೋಪಗಳು ಇವೆಯಾದರೂ ಇದಕ್ಕೆ ಪರ್ಯಾಯ ಕಂಪನಿ ಕೃಷಿ ಆರಂಭಿಸುವುದಿಲ್ಲ. ಬದಲಾಗಿ ಸಮಗ್ರ ಭೂ ಸುಧಾರಣಾ ಆಧಾರಿತ, ಎಡಪಕ್ಷಗಳು ಪ್ರತಿಪಾದಿಸುವ ಪರ್ಯಾಯ ಕೃಷಿ ನೀತಿ ಎಂದು ಒತ್ತಿ ಹೇಳಿದರು.

ಕಂಪನಿಗೆ ರೈತನ ಸ್ಥಾನಮಾನ ಮಾನ್ಪಡೆ ಕಟು ಟೀಕೆ

ಕಂಪನಿ ಕೃಷಿ ನಡೆಸಲು ಹಾಗೂ ಗುತ್ತಿಗೆಗೆ ಭೂಮಿ ಪಡೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರ 1961 ರ ಕಾಯ್ದೆಯ ಸೆಕ್ಷನ್ 107 ಕ್ಕೆ ತಿದ್ದುಪಡಿ ತರುತ್ತಿದೆ. ಈ ತಿದ್ದುಪಡಿ ಪ್ರಕಾರ ರೈತ ಎಂದರೆ ಯಾರು ಎಂಬ ವ್ಯಾಖ್ಯಾನಕ್ಕೆ ಬ.ರಾ.ಕಂಪನಿಗಳನ್ನು ಕೂಡ ಸೇರ್ಪಡೆ ಮಾಡಲಾಗುತ್ತಿದೆ. ಕೃಷಿ ಆಧಾರದ ಕೈಗಾರಿಕೆಯನ್ನು ಕೃಷಿಕರ ವ್ಯಾಪ್ತಿಗೆ ತರಲಾಗುತ್ತಿದೆ. ಗುತ್ತಿಗೆ ಕೃಷಿ ನಡೆಸಲು ವಾಲ್ ಮಾರ್ಟ್, ಡೌ, ಮಾನ್ಸೆಂಟೋ, ಕಾರ್ಗಿಲ್ ಕಂಪನಿಗಳಿಗೆ ಅವಕಾಶ ನೀಡಲಾಗುತ್ತಿದೆ. ಉಳುವವನಿಗೆ ಭೂಮಿ ಬದಲು ಕಂಪನಿಗಳಿಗೆ ಭೂಮಿ ಎಂದು ಹೇಳಲಾಗುತ್ತಿದೆ. ಫಾರಂ ನಂ. 50, 51 ರಲ್ಲಿ ಅರ್ಜಿ ಹಾಕಿಕೊಂಡ ಸುಮಾರು 16 ಲಕ್ಷ ರೈತರು ತಮ್ಮ ಭೂಮಿ ಮಂಜೂರಾತಿಗಾಗಿ ಬಕಪಕ್ಷಿಯಂತೆ ಕಾಯುತ್ತಿದ್ದಾರೆ. ಆ ರೈತರ ಬಹುದಿನದ ಬೇಡಿಕೆ ನಿರ್ಲಕ್ಷಿಸಿ ರೈತರ ಭೂಮಿಯನ್ನು ಪರದೇಶದ ಕಂಪನಿಗಳಿಗೆ ನೀಡಲಾಗುತ್ತಿದೆ. ಬಡವರ ಒತ್ತುವರಿ ಹಾಗೂ ಭೂಗಳ್ಳರ ಒತ್ತುವರಿ ಎರಡನ್ನು ಒಂದೇ ತಕ್ಕಡಿಯಲ್ಲಿ ಈ ಸರ್ಕಾರ ನೋಡುತ್ತಿದೆ. ಆದುದರಿಂದ ಸಮರಶೀಲ ಹೋರಾಟವನ್ನು ರೈತ ಸಮುದಾಯ ನಡೆಸಿ ತಮ್ಮ ಭೂಮಿ ಹಕ್ಕನ್ನು ಸಂರಕ್ಷಿಸಿಕೊಳ್ಳಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ರೈತರಿಗೆ ಕರೆ ನೀಡಿದರು.

ಈ ಸಂಬಂಧ ರಾಜ್ಯದಾದ್ಯಂತ ನವೆಂಬರ್ 7, 8 ರಂದು 48 ಗಂಟೆಗಳ ಧರಣಿಯನ್ನು ಜಿಲ್ಲಾಧಿಕಾರಿ ಕಛೇರಿ ಎದುರು ಕೆಪಿಆರ್‌ಎಸ್ ಹಮ್ಮಿಕೊಂಡಿದ್ದು, ಬಗರ್‌ಹುಕಂ ಭೂಮಿಯನ್ನು ಸಕ್ರಮಗೊಳಿಸಲು, ಮನೆ–ನಿವೇಶನ ರಹಿತರಿಗೆ ಮನೆ–ನಿವೇಶನ ಒದಗಿಸಲು, ನೆರೆ–ಬರ ಕಾಲು ಬಾಯಿ ರೋಗದಿಂದ ಸಂತ್ರಸ್ತರಾದವರಿಗೆ ಕೂಡಲೇ

ಪುಟ 12 ಕ್ಕೆ

ಭಾಗ -2 ಹೊಸ ಕೃಷಿ ಮಾರುಕಟ್ಟೆ ನೀತಿ ಯಾರಿಗಾಗಿ?


ರೈತರ ಕೃಷಿ ಉತ್ಪನ್ನಗಳಿಗೆ ವಿದೇಶಗಳಲ್ಲಿ ಬಾರಿ ಮಾರುಕಟ್ಟೆ ಹಾಗೂ ಒಳ್ಳೆಯ ಬೆಲೆಗಳು ದೊರೆತು ರೈತರ ಸಂಕಷ್ಟಗಳೆಲ್ಲಾ ಮಾಯವಾಗಲಿವೆ ಮತ್ತು ಆಧುನಿಕ ವಿದೇಶಿ ತಂತ್ರಜ್ಞಾನ-ಕೃಷಿ ಉಪಕರಣಗಳು-ದಾಸ್ತಾನುಗಳು ಗ್ರಾಮಗಳಲ್ಲಿ ಬಂಗಾರದ ಹೊಗೆಯನ್ನು ಎಬ್ಬಿಸಲಿವೆ ಎಂದು ಭಾಜಾ-ಭಜಂತ್ರಿಯನ್ನು ಬಾರಿಸುತ್ತಾ, ಜಾಗತೀಕರಣವನ್ನು ಆಳುವ ವರ್ಗಗಳು ಸ್ವಾಗತಿಸಿದವು. ಎಲ್ಲವು ರಫ್ತಿಗಾಗಿ ಎನ್ನುವುದನ್ನು ಒತ್ತಿ ಹೇಳಿದವು. ಜಾಗತೀಕರಣ ಪ್ರಕ್ರಿಯೆ ಜಾರಿಯಾಗಿ ಎರಡು ದಶಕಗಳನ್ನು ಪೂರೈಸುವ ಸಂದರ್ಭದಲ್ಲಿ ಹೊರಳಿ ನೋಡುವಾಗ ಘಟಿಸಿದ್ದೆಲ್ಲಾ ತದ್ವಿರುದ್ಧವಾಗಿಯೇ.! ಗ್ರಾಮಗಳಲ್ಲಿ ಬಂಗಾರದ ಹೊಗೆ ಏಳುವ ಬದಲು ಹಸಿವಿನ ಸಾವಿಗೀಡಾಗುವ ಕೂಲಿಕಾರರ ಮತ್ತು ತಲಾ ಅರ್ಧ ಗಂಟೆಗೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಹೆಣಗಳ ದುರ್ನಾತ ಏಳುತ್ತಿದೆ.

ಜಾಗತೀಕರಣದ ಪೂರ್ವದಲ್ಲಿ ನೇರವಾಗಿ ದೇಶಿಯ ಮಾರುಕಟ್ಟೆಯ ಶಕ್ತಿಗಳ ಅಥವಾ ದೇಶಿಯ ದೊಡ್ಡ ಬಂಡವಾಳದಾರರ ಶೋಷಣೆಗೆ ತುತ್ತಾಗುತ್ತಿದ್ದ ರೈತಾಪಿ ಜನತೆಯನ್ನು ಜಾಗತೀಕರಣದ ಪ್ರಕ್ರಿಯೆಯು ಮುಕ್ತ ಮಾರುಕಟ್ಟೆಯ ಮೂಲಕ ಜಾಗತಿಕ ಮಾರುಕಟ್ಟೆಯ ದೈತ್ಯ ಶಕ್ತಿಗಳಿಗೆ ಅಥವಾ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಭಾರಿ ಶೋಷಣೆಗೆ ಒಳಪಡಿಸಿತು. ಇದು ರೈತರನ್ನು ಬಾಣಲೆಯಿಂದ ಬೆಂಕಿಗೆ ದೂಡಿದಂತಾಯಿತು.

ಮುಂದುವರೆದ ಹಾಗೂ ಇತರೆ ರಾಷ್ಟ್ರಗಳು ನೀಡುತ್ತಿರುವ ಕೃಷಿ ಸಬ್‌ಸಿಡಿಯು ಭಾರತದಲ್ಲಿ ನೀಡುವ ಕೃಷಿ ಸಬ್‌ಸಿಡಿಗಿಂತ ಬಾರಿ ದೊಡ್ಡದಾಗಿದೆ. ಅಮೇರಿಕಾದಲ್ಲಿ ಶೇ 29, ಯುರೋಪದಲ್ಲಿ ಶೇ 37, ಚೀನಾದಲ್ಲಿ ಶೇ 34, ದಕ್ಷಿಣ ಕೊರಿಯಾದಲ್ಲಿ ಶೇ 61 ಪಕ್ಕದ ಪಾಕಿಸ್ತಾನದಲ್ಲಿ ಶೇ 26 ನೀಡಿದರೆ, ಭಾರತದಲ್ಲಿ ಶೇ 3 ಮಾತ್ರವೇ ನೀಡಲಾಗಿದೆ. ಒಟ್ಟಾರೆ ಗಮನಿಸುವಾಗ, ಮುಂದುವರೆದ ರಾಷ್ಟ್ರಗಳು ಪ್ರತಿ ದಿನ 40 ಸಾವಿರ ಕೋಟಿಗಳಿಗೂ ಅಧಿಕ ಸಬ್‌ಸಿಡಿ ನೀಡುತ್ತಿದ್ದವು. 2002 ರಲ್ಲಿ ಅಮೇರಿಕಾ ಕೃಷಿ ಒಪ್ಪಂದಂತೆ ಮುಂದೆ ಸಬ್‌ಸಿಡಿ ಕಡಿತ ಮಾಡಬೇಕಾದುದನ್ನು ಗಮನದಲ್ಲಿ ಇಟ್ಟುಕೊಂಡು, ಫಾರಂ ಬಿಲ್ ಮೂಲಕ 2008 ರ ಒಳಗೆ ತಾನು ನೀಡುವ ಸಬ್‌ಸಿಡಿ ಮೊತ್ತವನ್ನು 180 ಬಿಲಿಯನ್ ಡಾಲರ್ (72 ಲಕ್ಷ ಕೋಟಿ ರೂಪಾಯಿ) ಗಳಿಗೆ ಹೆಚ್ಚಿಸಲು ಯೋಜಿಸಿತು ಮತ್ತು ವಿದೇಶಿ ದಾಸ್ತಾನುಗಳ ಅಪಾಯದಿಂದ ರಕ್ಷಿಸಿಕೊಳ್ಳಲು ಹಸಿರು, ನೀಲಿ ಹಾಗೂ ಮತ್ತಿತರೇ ಪೆಟ್ಟಿಗೆಗಳನ್ನು ರಚಿಸಿಕೊಂಡಿತಲ್ಲದೇ, ತನ್ನ ದೈತ್ಯ ಕೃಷಿ ಬಂಡವಾಳಿಗರಿಗೆ, ರಫ್ತು ಸಬ್‌ಸಿಡಿತನ್ನು ಮುಂದುರೆಸಿದೆ. ಮಾತ್ರವಲ್ಲ, ಮುಂದುವರೆದ ರಾಷ್ಟ್ರಗಳು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವ ಬ್ಯಾಂಕ್ ನೀಡುವ ಸಾಲದ ಶರತ್ತುಗಳ ಮೂಲಕ, ಭಾರತವು ಸೇರಿದಂತೆ ಮೂರನೇ ಜಗತ್ತಿನ ರಾಷ್ಟ್ರಗಳು ನೀಡುವ ಸಬ್‌ಸಿಡಿಯನ್ನು ಕಡಿತಗೊಳಿಸಲು ಮತ್ತು ಕೃಷಿ ಉತ್ಪನ್ನಗಳ ಆಮದುಗಳ ಮೇಲೆ ಈ ದೇಶಗಳು ಆಮದು ಶುಲ್ಕ ಹೇರದಂತೆ ಯಶಸ್ವಿಯಾಗಿ ತಡೆದಿವೆ. ಅದೇ ರೀತಿ ಭಾರತದ ಇಳುವರಿಯ ಪ್ರಮಾಣ ಜಾಗತಿಕ ಇಳುವರಿಯ ಸರಾಸರಿಯ ಅ ರ್ಧಕ್ಕಿಂತ ಕಡಿಮೆ ಇರುವುದನ್ನ ಕೊಷ್ಟಕ 01-02 ತೋರಿಸುತ್ತವೆ. ಭಾರತದ ಇಳುವರಿಯ ಪ್ರಮಾಣ ಭತ್ತದಲ್ಲಿ ತಲಾ ಹೆಕ್ಟರಿಗೆ ಕೇವಲ 2929 ಕೆ.ಜಿಗಳಾಗಿವೆ. ಅದು ಜಾಗತಿಕ ಸರಾಸರಿ ಇಳುವರಿ ಬೆಳವಣಿಗೆಯ 3845 ಕೆ. ಜಿಗಿಂತಲೂ ತೀರಾ ಕಡಿಮೆಯಾಗಿದೆ. ಅದೇ ಸಂದರ್ಭದಲ್ಲಿ ಅಮೇರಿಕಾದ ಇಳುವರಿ

ಜಾಗತೀಕರಣ ಮಾರುಕಟ್ಟೆ ನೀತಿ, ಜಾಗತಿಕ ಶಕ್ತಿಗಳ ಕೊಳ್ಳೆ ನೀತಿ.

6622 ಕೆ.ಜಿ. ಈ ಆಗಿದೆ ಅದೇ ರೀತಿ ಗೋದಿ, ಕಬ್ಬು, ಮೆಕ್ಕೆಜೋಳದ ಪರಿಸ್ಥಿತಿ ಇದೆ.



ಹೀಗೆ ಒಂದೆಡೆ, ಭಾರಿ ಸಬ್‌ಸಿಡಿ ಪಡೆದ ಅತ್ಯಂತ ಆಧುನಿಕ ಕೃಷಿ ತಂತ್ರಜ್ಞಾನ ಹಾಗೂ ಭಾರಿ ಇಳುವರಿ ನೀಡುವ ಬೀಜ ಹಾಗೂ ರಾಸಾಯನಿಕ ಗೊಬ್ಬರಗಳನ್ನ ಬಳಸಿ ಉತ್ಪಾದಿಸಿದ ಕಡಿಮೆ ಖರ್ಚಿನ ಹಾಗೂ ಅಪಾರ ಇಳುವರಿ ಹೊಂದಿದ ಕೃಷಿ ಉತ್ಪನ್ನಗಳನ್ನು, ಉತ್ಪಾದಿಸಿದ ದೈತ್ಯ ಕೃಷಿ ಉದ್ದಿಮೆಗಳೆದುರು, ಮುಂದುವರೆದ ರಾಷ್ಟ್ರಗಳ ಹಾಗೂ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವಬ್ಯಾಂಕ್ ಷರತ್ತುಗಳಿಗೆ ತಲೆ ಭಾಗುವ, ರೈತರು-ವ್ಯವಸಾಯದ ಹಿತಗಳನ್ನು ಕೈಬಿಟ್ಟ ಕೇಂದ್ರ ಮತ್ತು ರಾಜ್ಯ ಸರ್ಕಾರದ ಬೆಂಬಲವಿಲ್ಲದ ಹಾಗೂ ತಾಂತ್ರಿಕವಾಗಿ ಹಿಂದುಳಿದ ಬೇಸಾಯ ಮಾಡುವ ಸಣ್ಣ ಅತಿ ಸಣ್ಣ, ಮಧ್ಯಮ ಸಣಕಲು ರೈತರುಗಳನ್ನೊಳಗೊಂಡ ಇಡೀ ರೈತಾಪಿ ಜನತೆ ನಿಲ್ಲುವಂತಾಗಿದೆ.

ಕಡಿಮೆ ಬೆಲೆ ವಿದೇಶಿ ವಸ್ತುಗಳ ವ್ಯಾಪಕವಾದ ಆಮದುಗಳಿಂದಾಗಿ, ಅಂದರೆ ಮಲೇಶಿಯಾದಿಂದ ತಂದ ತಾಳೆ ಎಣ್ಣೆಯಿಂದಾಗಿ ಶೇಂಗಾ, ಸೂರ್ಯಕಾಂತಿ, ಎಣ್ಣೆ ಉತ್ಪಾದಕರು ಮತ್ತು ರೇಷ್ಮೆ ಬೆಳೆಗಾರರು, ಚೀನಾ ದೇಶದ ರೇಷ್ಮೆಯಿಂದ, ಅದೇ ರೀತಿ ಪಾಕಿಸ್ತಾನ ಮುಂತಾದ ದೇಶಗಳ ಸಕ್ಕರೆಯಿಂದಾಗಿ ದೇಶಿಯ ಸಕ್ಕರೆ ಕೈಗಾರಿಕೆಗಳು, ಕಬ್ಬು ಬೆಳೆಗಾರರು, ಹಾಗೆ ಖಾಸಗಿ ಹಾಲು ಸಂಗ್ರಹಗಾರರು ಮತ್ತು ಮಾರಾಟಗಾರರ ಸಂಸ್ಥೆಗಳಿಂದ ನಮ್ಮ ಹಾಲು ಉತ್ಪಾದಕರು, ದಶ ಲಕ್ಷಾಂತರ ಸಂಖ್ಯೆಯಲ್ಲಿ ತತ್ತರಿಸಿ ಹೋದರು. ಸಾವಿರಾರು ಉದ್ದೆಮೆಗಳು ಮುಚ್ಚಿಹೋದವು. ರೈತರು ತೀರಿಸಲಾಗದಷ್ಟು ಮತ್ತು ಬದುಕಲಾಗದಷ್ಟು ಸಾಲಗಾರರಾಗಿ ಆತ್ಮಹತ್ಯೆಗಿಳಿದರು.

1993-95 ರಲ್ಲಿನ ಎರಡು ವರ್ಷ
11.34 ಲಕ್ಷ ಟನ್ ಮತ್ತು 1997
2000 ಈ ಮೂರು ವರ್ಷಗಳೊಳಗೆ
ಲಕ್ಷ ಟನ್ ಸಕ್ಕರೆಯನ್ನು ಕೇಂದ್ರ ಸ
ಆಮದು ಮಾಡಿಕೊಂಡಿದೆ ಹಾಗು
ರಿಂದ 1994-95 ರ ಗ್ಯಾಟ್ ಒಪ್
ಅವಧಿಯವರೆಗೆ ಒಟ್ಟು 35 ವರ್ಷ
41 ಲಕ್ಷ ಟನ್ ಅಡುಗೆ ತೈಲ ಆ
ಮಾಡಿಕೊಂಡರೆ, ಆನಂತರ 1996-
ರ ನಡುವಿನ ಏಳು ವರ್ಷಗಳ ಅವಧಿ
44776 ಕೋಟಿ ರೂಪಾಯಿ ಮ
2.32 ಕೋಟಿ ಟನ್ ಅಡುಗೆ ತೈ
ಆಮದು ಮಾಡಿಕೊಳ್ಳಲಾಗಿದೆ. (ಕೊ
4-5 ಗಮನಿಸಿ).

ಕೇವಲ 16 ರೂಗಳಿಗೆ ಲೀಟರ್
ಮಲೇಶಿಯಾ ದೇಶದ ತಾಳೆ ಎಣ್ಣೆ ಬಂ
ಆಗ ಭಾರತದಲ್ಲಿ ಹಾಗೂ ಕರ್ನಾಟ
ಸಾಧಾರಣವಾಗಿ ಅಡುಗೆ ಎಣ್ಣೆ
ಲೀಟರ್‌ಗೆ 28 ರೂಪಾಯಿಗಳಿಂದ
ರೂಪಾಯಿಗಳವರೆಗೆ ಮಾರಾಟವಾಗು
ಇಂತಹ ಸಂದರ್ಭದಲ್ಲಿ ಬೆಲೆ ಏರಿ
ಸುಸ್ತಾಗಿದ್ದ ಜನತೆಗೆ ಕಡಿಮೆ ಬೆಲೆಯ
ಎಣ್ಣೆ ಆಧ್ಯತೆಯಾಗಿ ಬಿಟ್ಟಿತು. ಮಾರ
ಅದರ ಕಡೆ ತಿರುಗಿದಾಗ ಶೇ
ಸೂರ್ಯಕಾಂತಿ ಎಣ್ಣೆ ಉತ್ಪಾದಿಸುವ
ಮಿಲ್ಲುಗಳು, ಕೊಳ್ಳುವ ಮಾರುಕಟ್ಟೆ ಇ
ಮುಚ್ಚುವಂತಾದುವಲ್ಲದೇ, ತಾಳೆ
ಡೀಲರುಗಳಾಗಿ ದೇಶದಾದ್ಯಂತ
ರಾಜ್ಯದಾದ್ಯಂತ ಪರಿವರ್ತಿತವಾಗಿರುವು
ನಾವು ಕಂಡಿದ್ದೇವೆ. ಇದರಿಂದ ಇವು
ನಂಬಿದ್ದ ಲಕ್ಷಾಂತರ ಕಾರ್ಮಿಕರು
ಪಾಲಾದರು. ಶೇಂಗಾ, ಸೂರ್ಯಕಾ
ಬೆಳೆಯುತ್ತಿದ್ದ ದಶಲಕ್ಷ ಗಟ್ಟಲೆ ರೈ
ಬೆಲೆ ಕುಸಿತದಿಂದ ನಲುಗಿ ಹೋ
ಆದಿನಗಳಲ್ಲಿ ಶಿ
ಮಾರುಕಟ್ಟೆಯಲ್ಲಿ ಪ್ರತಿಭಟನೆ
ರೈತರಲ್ಲಿ ಇಬ್ಬರು ಪೋಲಿ
ಗೋಲಿಬಾರ್‌ಗೆ ತುತ್ತಾದರು. ಶಿ
ಎ.ಪಿ.ಎಂ.ಸಿ.ಯು ಪ್ರತಿಭಟನೆ
ದ್ವಂಸಗೊಂಡಿತು.

ದೇಶಿಯ ತೈಲೋ
ಬಿಕ್ಕಟ್ಟಿಗೆ ಸಿಲುಕಿದ ನಂತರ,
ಉತ್ಪಾದನೆ ಕುಸಿತಗೊಂಡ ನ
ತಾಳೆ ಎಣ್ಣೆಯೇ ಮಾರುಕಟ್ಟೆ
ಗುತ್ತಿಗೆ ಹಿಡಿಯುವಂತಾ
ಮತ್ತು ಆನಂತರ ಈಗ
ಬೆಲೆ ತಲಾ ಲೀಟರ್‌ಗೆ 50
70 ರೂಗಳಾಗಿ ಗ್ರಾಹಕರನ್ನ
ಹೊಡೆಯುತ್ತಿದೆ.

ಇಂತಹ ಉತ್ಪನ್ನ
ಮುಂದುವರೆದ ಅಮೇ
ಯುರೋಪ್ ರಾಷ್ಟ್ರಗ
ಭಾರತದ ಮಾರುಕಟ್ಟೆಗೆ ಬ
ಎಂಬ ವದಂತಿಯೇ, ಇಲ್ಲಿನ ಕೃಷಿಯಾದ
ಕೈಗಾರಿಕೆಗಳನ್ನ ದೇಶದ ಲಕ್ಷಾಂತರ ಗ
ನಡುಗುವಂತೆ ಮಾಡುತ್ತಿತ್ತು ಮತ್ತು ಸ
ಮಾಡುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೋಮುವಾದ ಸವಾಲು ಹಾಕಿರುವುದು ಭಾರತೀಯ ನಾಗರಿಕತೆಯ ಸಮ್ಮಿಶ್ರ ಸಂಸ್ಕೃತಿಯ ವಿಕಾಸವನ್ನು, ಇದರ ಸತ್ವವನ್ನೇ ಅದು ನಾಶಮಾಡಬಯಸುತ್ತಿದೆ. ನಿಜ, ದೇಶ ಸ್ವತಂತ್ರವಾದಾಗ ಭಾರತದ ಜನತೆ ನಮ್ಮ ಗಣತಂತ್ರ ಸಂವಿಧಾನವನ್ನು ಅಂಗೀಕರಿಸುವುದರೊಂದಿಗೆ ಅವರ ಈ ಮಹಾಯೋಜನೆಯನ್ನು ಸೋಲಿಸಿದರು. ಆದರೂ ಅವರು ಎದೆಗುಂದಿಲ್ಲ. ಧಾರ್ಮಿಕ ಹಗೆತನ ಮತ್ತು ದ್ವೇಷದ ಹಾನಿಕಾರಕ ತಳಹದಿಯ ಮೇಲೆಯೇ ಈಗ ಕೋಮುವಾದಿ ಧ್ರುವೀಕರಣದ ಪ್ರಯತ್ನವನ್ನು ಈ ಶಕ್ತಿಗಳು ಮುಂದುವರೆಸುತ್ತಿವೆ. ಈ ಸವಾಲನ್ನು ದೇಶಪ್ರೇಮಿ ಭಾರತೀಯರೆಲ್ಲರೂ ಎದುರಿಸಬೇಕಾಗಿದೆ

ಕೋಮುವಾದದ ಸವಾಲಿಗೆ ಜನತೆಯ ಐಕ್ಯತೆಯೇ ಉತ್ತರ

ಸೀತಾರಾಮ್ ಯೆಚೂರಿ

ಉತ್ತರಪ್ರದೇಶ ರಾಜ್ಯದ ಉನ್ನಾವ್‌ನಲ್ಲಿ ನ್ನವನ್ನು ಅಗೆಯುವ ಕೆಲಸ ನಡೆದಿರುವ ಂದರ್ಭದಲ್ಲಿ ಆರೆಸ್ಸೆಸ್/ಬಿಜೆಪಿಯ ಇಬ್ಬಂದಿ. ಭಾವದ ಮತ್ತೊಂದು ನಿದರ್ಶನ ಕಾಣ ಂತು. ಸುಶೋಭನ್ ಸರ್ಕಾರ್ ಎಂಬ ಒಬ್ಬ ರ್ಮಿಕ ಗುರು'ವಿಗೆ ಬಿದ್ದ ಹೂತಿಟ್ಟ ಚಿನ್ನದ ನಸಿನ ಬೆನ್ನಹತ್ತಿ ಭಾರತ ಪುರಾತತ್ವ ಸರ್ವೇಕ್ಷಣೆ ಂಸ್ಥೆ(ಆರ್ಕಿಯೊಲಾಜಿಕಲ್ ಸೊಸೈಟಿ ಆಫ್ ಂಡಿಯಾ–ಎಎಸ್‌ಐ), ಬಹುಶಃ ಸರಕಾರದ ಂಜೂರಾತಿಯಿಂದಲೇ, ಒಂದು ವಿಲಕ್ಷಣ ಗೆತದ ಕಾರ್ಯ ಆರಂಭಿಸಿತು. ಬಿಜೆಪಿಯ ಧಾನಿ ಪಟ್ಟದ ಆಕಾಂಕ್ಷಿ ಆ 'ಗುರು'ವನ್ನು ಗೇಲಿ ಾಡಿದರು. ಅದಾದ ಮೂರೇ ದಿನಗಳಲ್ಲಿ ಂದು ತಿಪ್ಪರಲಾಗ ಹಾಕಿ, ಆ ಗುರುವಿನ ೀಹದಂಡನೆ ಮತ್ತು ಸನ್ಯಾಸ'ಕ್ಕೆ ನಮನ ಲ್ಲಿಸಿದರು. ಈ ನಡುವೆ ಬಿಜೆಪಿ ಆ ಗುರುವಿನ ಶ್ರಮಕ್ಕೆ ಕಾನ್ಪುರದ ತನ್ನ ಶಾಸಕನನ್ನು ಳಿಸಿತು– ಬಹುಶಃ ದೈವನಿಂದೆಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು. ಒಂದು ಕ್ಷಣ ಬಿಜೆಪಿಯ ಪ್ರಧಾನಿ ಪಟ್ಟದ ಆಕಾಂಕ್ಷಿ ಸುಸಂಬದ್ಧವಾಗಿ ಡುತ್ತಿದ್ದಾರೆ ಎಂದು ಅನ್ನಿಸಿತ್ತು. ಆದರೆ ದು ಒಂದು ಕ್ಷಣಕ್ಕೆ ಮಾತ್ರ.

ಇಂತಹ ತಿಪ್ಪರಲಾಗ ಅರ್ಥವಾಗುವಂತದ್ದೇ. ಕೆಂದರೆ ಆರೆಸ್ಸೆಸ್/ಬಿಜೆಪಿ 2014ರ ುನಾವಣೆಗಳಿಗೆ ತಮ್ಮ ಪ್ರಚಾರವನ್ನು ೋಮುವಾದಿ ಧ್ರುವೀಕರಣವನ್ನು ೀಕ್ಷ್ಣಗೊಳಿಸುವ ಆಧಾರದಲ್ಲಿಯೇ ನಡೆಸಲು ರ್ಧರಿಸಿ ಬಿಟ್ಟಿದೆ ಎಂಬುದು ನಿಸ್ಸಂದೇಹ. ಈ ಮೂಲಕ 'ಹಿಂದೂ ವೋಟ್‌ಬ್ಯಾಂಕ'ನ್ನು ್ರೋಡೀಕರಿಸಬಹುದೆಂಬ ನಿರೀಕ್ಷೆ ಅದರದ್ದು. ರಾಮ ಜನ್ಮಭೂಮಿಯಲ್ಲಿ ಒಂದು ೇವಸ್ಥಾನ. ಕಟ್ಟ ಬಯಸುತ್ತೇವೆ. ಈ ಬಗ್ಗೆ ಮ್ಮ ಅಭಿಪ್ರಾಯದ ಮೇಲೆ ಚರ್ಚೆಗೆ ಅವಕಾಶವಿಲ್ಲ" ಎಂದು ಬಿಜೆಪಿ ಚುನಾವಣಾ ಣಾಳಿಕೆ ಸಮಿತಿಯ ಅಧ್ಯಕ್ಷರಾಗಿ ಹೊಸದಾಗಿ ೇಮಕಗೊಂಡವರು ಪತ್ರಿಕಾ ಸಮ್ಮೇಳನದಲ್ಲಿ ಹೇಳಿದರು. ಬಿಜೆಪಿಯ ಮೂಲ ಪ್ರಶ್ನೆಗಳಾದ ಂದು ಭವ್ಯ ರಾಮದೇವಸ್ಥಾನ, ಜಮ್ಮ–ಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕೊಡುವ 37 ಕಲಮಿನ ರದ್ದತಿ, ಒಂದು ಸಮಾನ ನಾಗರಿಕ ಸಂಹಿತೆಯ ಹೇರಿಕೆ, ಗೋರಕ್ಷಣೆ, ರಾಮಸೇತು ಮತ್ತು ಗಂಗಾ ಶುದ್ಧೀಕರಣ ಇವುಗಳಲ್ಲಿ ಯಾವುದೇ ರಾಜಿಯಿಲ್ಲ ಎಂದೂ ಅವರು ಹೇಳಿದರು.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬಿಜೆಪಿ ಮತ್ತೆ ಆರೆಸ್ಸೆಸ್‌ನ ಮೂಲ ಅಜೆ–ಂಡಾಕ್ಕೆ ಮರಳುತ್ತಿದೆ–ಜಾತ್ಯಾತೀತ, ಪ್ರಜಾಸತ್ತಾತ್ಮಕ ಆಧುನಿಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಅಜೆಂಡಾಕ್ಕೆ ಮರಳುತ್ತಿದೆ. ನಿಜ, ದೇಶ ಸ್ವತಂತ್ರವಾದಾಗ ಭಾರತದ ಜನತೆ ನಮ್ಮ ಗಣತಂತ್ರ ಸಂವಿಧಾನವನ್ನು ಅಂಗೀಕರಿಸುವುದರೊಂದಿಗೆ ಅವರ ಈ ಮಹಾಯೋಜನೆಯನ್ನು ಸೋಲಿಸಿದರು. ಆದರೂ ಅವರು ಎದೆಗುಂದಿಲ್ಲ. ತಮ್ಮ ಈ ಯೋಜನೆಯನ್ನು ಸಾಧಿಸಿಕೊಳ್ಳಲು ಅವರು ಕೋಮುವಿಷವನ್ನು ಹರಡುತ್ತಾರೆ, ಆಮೂಲಕ ವ್ಯಾಪಕ ಪ್ರಮಾಣದಲ್ಲಿ ಸಾವು–ನೋವು, ವಿನಾಶಕ್ಕೆ ಹಾದಿ ಮಾಡಿಕೊಡುತ್ತಿದ್ದಾರೆ.

ವ್ಯತಿರಿಕ್ತ ಕಣ್ನೋಟ

ಅವರ ಈ ಕಣ್ನೋಟ ನಮ್ಮ ದೇಶದ ನಾಗರಿಕತೆಯ ಮುನ್ನಡೆಗೆ, ಭಾರತ ಎಂಬ ಭಾವನೆ ಮುಂದೆಯೂ ಅನಾವರಣಗೊಳ್ಳುವುದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಬ್ರಿಟಿಶರು ತಮ್ಮ ವಸಾಹತುಶಾಹೀ ಕೊಳ್ಳೆಗೆ ಈ ಪ್ರದೇಶಗಳನ್ನು ಒಂದುಗೂಡಿಸಿದರೆ, ಅಸಂಖ್ಯ ತ್ಯಾಗ–ಬಲಿದಾನಗಳನ್ನು ಪಡೆದು ದೀರ್ಘಕಾಲ ನಡೆದ ಸ್ವಾತಂತ್ರ್ಯ ಹೋರಾಟ ನಮ್ಮ ಜನತೆಯ ಪ್ರಜ್ಞೆಯನ್ನು, ನಮ್ಮ ದೇಶದ ಐಕ್ಯತೆಯನ್ನು ಬೆಸೆದಿದೆ. ಸ್ವಾತಂತ್ರ್ಯ ಹೋರಾಟದ ಯಶಸ್ಸು ಮತ್ತು ಅದರಿಂದಾಗಿ ಸಾಮಂತಶಾಹೀ ಅರಸೊತ್ತಿಗೆಗಳು ಭಾರತೀಯ ಗಣತಂತ್ರದಲ್ಲಿ ಸಮಗ್ರಗೊಂಡು ಬಹುದೇಶೀಯವಾದ, ಭಾರತೀಯತೆಯ ಪ್ರಜ್ಞೆಯಿಂದ ಒಗ್ಗೂಡಿದ ಒಂದು ರಾಷ್ಟ್ರ ನಿರ್ಮಾಣಗೊಂಡಿತು. ಭಾರತೀಯ ನಾಗರಿಕತೆಯೇ ಈ ನೆಲದಲ್ಲಿ ಓಡಾಡಿದ ವಿಭಿನ್ನ ಪ್ರವೃತ್ತಿಗಳ ಒಂದು ಸಮ್ಮಿಶ್ರ ವಿಕಾಸದ ಉತ್ಪನ್ನ. ಜವಹರ್‌ಲಾಲ್ ನೆಹರು ತಮ್ಮ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ವರ್ಣಿಸಿರುವಂತೆ "ಭಾರತ ಒಂದು ಪ್ರಾಚೀನ ಫಲಕ, ಅದರಲ್ಲಿ ಒಂದರ ಮೇಲೆ ಒಂದರಂತೆ ಚಿಂತನೆ, ಕಲ್ಪನಾ ಲಹರಿಗಳ ಹಲವು ಪದರಗಳು ಕೆತ್ತಲ್ಪಟ್ಟಿವೆ, ಆದರೂ ಯಾವುದೂ ಅದರ ಹಿಂದಿನ ಪದರವನ್ನು ಸಂಪೂರ್ಣವಾಗಿ ಮರೆ ಮಾಡಿಲ್ಲ ಅಥವ ಅಳಿಸಿ ಹಾಕಿಲ್ಲ."

ಅಲ್ಲದೆ, ರವೀಂದ್ರನಾಥ್ ಟಾಗೋರರು ಹೇಳುತ್ತಾರೆ: "ಆರ್ಯರು ಮತ್ತು ಆರ್ಯೇತರರು, ದ್ರಾವಿಡರು ಮತ್ತು ಚೀನೀಯರು, ಸಿದಿಯನ್ನರು, ಹೂಣರು, ಪಠಾಣರು ಮತ್ತು ಮೊಗಲರು, ಎಲ್ಲರೂ ಒಂದೇ ಕಾಯದಲ್ಲಿ ವಿಲೀನಗೊಂಡಿದ್ದಾರೆ". ಆ ಕಾಯವೇ ಭಾರತ.

ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳ ಒಂದು ಶ್ರೀಮಂತ ಬಹುಳತೆಯನ್ನು ಸ್ವೀಕರಿಸಿದ್ದು ಮಾತ್ರವೇ ಅಲ್ಲ, ಜತೆಗೆ ಅವುಗಳ ನಡುವೆ ಒಂದು ಸಕ್ರಿಯ ಸಂವಾದದ ಮೂಲಕ ಈ ಶ್ರೀಮಂತ ವಿಭಿನ್ನತೆಯ ನಡುವೆ ಒಂದು ಮಟ್ಟದ ಸಾಮಾಜಿಕ ಸಾಮರಸ್ಯ ಬೆಳೆದು ಬಂದಿರುವುದು ಕೂಡ ಇಂತಹ ಒಂದು ಸಮ್ಮಿಶ್ರ ನಾಗರಿಕತೆಯ ಮುನ್ನಡೆಯ ಕೇಂದ್ರ ಬಿಂದು.

ತದ್ವಿರುದ್ಧವಾಗಿ ಆರೆಸ್ಸೆಸ್ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ಗೈರು ಹಾಜರಾಗಿತ್ತು ಮಾತ್ರವೇ ಅಲ್ಲ, ಅದು ಈ ಮಹಾ ಹೋರಾಟದಿಂದ ದೂರವೇ ಉಳಿದಿತ್ತು. ಅದು ಹೇಳಿಕೊಳ್ಳಬಹುದಾದ ಸ್ವಾತಂತ್ರ್ಯ ಹೋರಾಟದೊಂದಿಗಿನ ಅದರ ಏಕೈಕ ಕೊಂಡಿಯೆಂದರೆ ವಿ.ಡಿ.ಸಾವರ್ಕರ್. ಹಿಂದುತ್ವ ಪ್ರವೃತ್ತಿಗಳ ಬಗ್ಗೆ ಸಹಾನುಭೂತಿ ಹೊಂದಿರುವ ಪ್ರಖ್ಯಾತ ಇತಿಹಾಸಕಾರರಾದ ಆರ್ ಸಿ ಮಜುಂದಾರ್ ಅಂಡಮಾನ್‌ನಲ್ಲಿ ಶಿಕ್ಷೆಗೊಳಗಾಗಿ ಅಲ್ಲೇ ನೆಲೆಸಿದವರನ್ನು ಕುರಿತಾದ ತಮ್ಮ ಕೃತಿಯಲ್ಲಿ ಸಾವರ್ಕರ್ 'ಕರಿನೀರಿನ' ಶಿಕ್ಷೆಯಿಂದ ಬಿಡುಗಡೆಯ ಮಾತುಕತೆ ನಡೆಸಿದ್ದ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದಾರೆ. ಭಾರತದಲ್ಲಿ ಎರಡು ರಾಷ್ಟ್ರಗಳಿವೆ– ಹಿಂದೂ ಮತ್ತು ಇಸ್ಲಾಮಿಕ್ ಎಂದು ಮೊತ್ತ ಮೊದಲ ಬಾರಿಗೆ ಮಂಡಿಸಿದವರು ಸಾವರ್ಕರ್, ಹಿಂದೂ ಮಹಾಸಭಾದ ಅಧ್ಯಕ್ಷೀಯ ಭಾಷಣದಲ್ಲಿ ಅವರು ಇದನ್ನು ಹೇಳಿದ್ದರು. ಇದು ಮಹಮ್ಮದ್ ಅಲಿ ಜಿನ್ನಾ ತನ್ನ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಮುಂದಿಟ್ಟು, ಭಾರತದ ವಿಭಜನೆಯ ಪ್ರಕ್ರಿಯೆಯನ್ನು, ಬ್ರಿಟಿಶರ ಸಮರ್ಥ ನೆರವು ಮತ್ತು ಉತ್ತೇಜನೆಯೊಂದಿಗೆ ಆರಂಭಿಸಿದ ಪೂರ್ಣ ಎರಡು ವರ್ಷಗಳ ಮೊದಲು. 'ಹಿಂದುತ್ವ' ಎಂಬ ಪದವನ್ನು ಮೊದಲು ಬಳಸಿದವರೂ ಅವರೇ. ಹಿಂದುತ್ವಕ್ಕೂ ಹಿಂದೂ ಧರ್ಮಕ್ಕೂ ಹೆಚ್ಚೇನು ಸಂಬಂಧವಿಲ್ಲ ಎಂದವರು ಹೇಳಿದ್ದರು. ಒಂದು ಹಿಂದೂರಾಷ್ಟ್ರದ ನಿರ್ಮಾಣಕ್ಕೆ ಅವರು ಕೊಟ್ಟ ಘೋಷಣೆ: "ಮಿಲಿಟರಿಯ ಹಿಂದೂಕರಣ, ಹಿಂದುತ್ವದ ಮಿಲಿಟರೀಕರಣ"– ಈ ಸ್ಫೂರ್ತಿಯನ್ನೇ ಇತ್ತೀಚಿನ ಹಿಂದುತ್ವ ಭಯೋತ್ಪಾದನೆಯ ಘಟನೆಗಳಲ್ಲಿ ಕಾಣಬಹುದು

ಹೀಗೆ ರಾಷ್ಟ್ರೀಯ ಮುಖ್ಯಧಾರೆ ಎಲ್ಲರನ್ನೂ ಒಳಗೊಳ್ಳುವ ಒಂದು ಆಧುನಿಕ ಗಣ–ತಂತ್ರದ ಸ್ಥಾಪನೆಯತ್ತ ವಿಕಾಸಗೊಳ್ಳುತ್ತಿದ್ದರೆ, ಆರೆಸ್ಸೆಸ್ ಮತ್ತು ಹಿಂದುತ್ವ ಶಕ್ತಿಗಳು ಒಂದು 'ಹಿಂದೂರಾಷ್ಟ್ರ'ದ ಸ್ಥಾಪನೆಯ ಸಿದ್ಧತೆಯನ್ನು ಮಾಡುತ್ತಿವೆ. ಇದು ಯಶಸ್ವಿಯಾಗಬೇಕಾದರೆ ಧಾರ್ಮಿಕ ಹಗೆತನ ಮತ್ತು ದ್ವೇಷದ ಆಧಾರದಲ್ಲಿ ಮಾತ್ರಸಾಧ್ಯ. ಈ ಹಾನಿಕಾರಕ ತಳಹದಿಯ ಮೇಲೆಯೇ ಈಗ ಕೋಮುವಾದಿ ಧ್ರುವೀಕರಣವನ್ನು ಗಲಭೆಗಳು ಮತ್ತು ದ್ವೇಷದ ಆಧಾರದಲ್ಲಿ ಈ ಶಕ್ತಿಗಳು ಮುಂದುವರೆಸುತ್ತಿವೆ.


ಎರಡು ನಿದರ್ಶನಗಳು

ಇಂದಿನ ಸಂದರ್ಭದಲ್ಲಿ ಇದನ್ನು ಕೋಮುವಾದಿ ಹಿಂಸಾಚಾರ ಮಸೂದೆಯ ವಿರುದ್ಧ ಬಿಜೆಪಿ ವಕ್ತಾರರ ಇತ್ತೀಚಿನ ಒದರಾಟದಲ್ಲಿ ಕಾಣಬಹುದು. ಈ ಮಸೂದೆ ಯುಪಿಎ–1 ಕಾಲದಿಂದಲೇ ಸಂಸತ್ತಿನ ಮುಂದಿದೆ. ಗುಜರಾತಿನ ಕೋಮುವಾದಿ ಹತ್ಯಾಕಾಂಡದ ನಂತರ ಇದನ್ನು ಕಾನೂನಿನಲ್ಲಿನ ಗಂಭೀರ ಕೊರತೆಗಳನ್ನು ತುಂಬಲು ತರಲಾಯಿತು. ಕೋಮುವಾದಿ ಗಲಭೆಗಳಿಗೆ ಬಲಿಯಾದವರಿಗೆ ತ್ವರಿತ ಪರಿಹಾರ ಮತ್ತು ಮರುವಸತಿಗೆ ಅನುಕೂಲವಾಗಲೆಂದು ಈ 'ಕೋಮುವಾದಿ ಮತ್ತು ಗುರಿಯಿಟ್ಟ ಹಿಂಸಾಚಾರ ತಡೆ(ನ್ಯಾಯನೀಡಿಕೆ ಮತ್ತು ನಷ್ಟಭರ್ತಿ) ಮಸೂದೆ 2001ನ್ನು ಸಂಸತ್ತಿನ ಮುಂದೆ ತರಲಾಯಿತು. ಅದನ್ನು ತಂದಿದ್ದು ರಾಜಕೀಯ ಪಕ್ಷಗಳ ನಡುವೆ ದೀರ್ಘ ಸಮಾಲೋಚನೆಗಳ ನಂತರ.


ಈ ಮಸೂದೆಯಲ್ಲಿ ಕೆಲವು ಗಂಭೀರ ಆತಂಕದ ಪ್ರಶ್ನೆಗಳಿವೆ. ಈ ಬಗ್ಗೆ ಸಿಪಿಐ(ಎಂ) ಸಂಸತ್ತಿನಲ್ಲಿ ಕೆಲವು ನಿರ್ದಿಷ್ಟ ತಿದ್ದುಪಡಿಗಳನ್ನು ಸೂಚಿಸಲಿದೆ. ಆದರೆ ಬಿಜೆಪಿ ಇದು ಒಂದು ಕೋಮುವಾದೀ ಗುರಿಯ ವೋಟ್ ಮಸೂದೆ ಎಂದು ತನ್ನ ಸಂಪೂರ್ಣ ವಿರೋಧವನ್ನು ಸಾರಿದೆ. ಅವರು ಮುಂದುವರೆದು, ಇದು ಸಮಾಜವನ್ನು ಕೋಮುಆಧಾರದಲ್ಲಿ ವಿಭಜಿಸುವ ಒಂದು ಪ್ರಯತ್ನ ಎಂದು ಹೇಳಿರುವುದು ಅನುಮಾನಕ್ಕೆ ಆಸ್ಪದ ಕೊಡುತ್ತದೆ. ಕೋಮುವಾದಿ ಹಿಂಸಾಚಾರಕ್ಕೆ ಬಲಿಯಾದವರಿಗೆ ಯಾವುದೇ ಪರಿಹಾರ, ಮರುವಸತಿ ಅಥವ ನ್ಯಾಯ ಒದಗಿಸಬಾರದು ಎಂದು ಯಾವುದೇ ಹಿಂಜರಿಕೆಯಿಲ್ಲದೆ ಹೇಳುತ್ತ ತಾನು ನಡೆಸುವ ಕೋಮುವಾದಿ ಹಿಂಸಾಚಾರವನ್ನು ಅದು ಸಮರ್ಥಿಸಿಕೊಳ್ಳುತ್ತಿದೆ ಎಂಬುದು ಸ್ಪಷ್ಟ.

ಅಲಹಾಬಾದಿನಲ್ಲಿ ಕ್ರೈಸ್ತ ಮಿಶನರಿಗಳು ಸಂಘಟಿಸಿರುವ ಐದು ದಿನಗಳ ಉತ್ಸವದ ವಿರುದ್ಧ ವಿಶ್ವ ಹಿಂದೂ ಪರಿಷದ್ ಸ್ಥಳೀಯ ಬಿಜೆಪಿಯ ಬೆಂಬಲದೊಂದಿಗೆ

ಪುಟ 12 ಕೆ



ಕೃಪೆ: ಮಂಜುಲ್, ಡಿಎನ್‌ಎ



ಎದ್ದೇಳಯ್ಯಾ, ಇದು ಚುನಾವಣೆಯ ಸಮಯ!

ಏನೇನು ನಡೆಯಬಹುದು ಅಲ್ಲಿ ! ಆ 'ಧರ್ಮಸ್ಥಳ' ಎಂಬಲ್ಲಿ ?

ಎಷ್ಟೋ ಮುಗ್ಧ ಜನರು 'ಧರ್ಮಸ್ಥಳ' ಎಂಬ ಹೆಸರಿಟ್ಟುಕೊಂಡ ಆ ಪವಿತ್ರ ಜಾಗದಲ್ಲಿ ನ್ಯಾಯ, ನೀತಿ, ಧರ್ಮಗಳಷ್ಟೆ ನೆಲೆಸಿವೆ. ಅವಲ್ಲದೇ ಅಲ್ಲಿ ಬೇರೇನೂ ನೆಲೆಯೂರಲು ಸಾಧ್ಯವಿಲ್ಲ ಎಂದು ನಂಬಿಕೊಡಿದ್ದಾರೆ. ಇಂತಹ ನಂಬಿಕೆಯ ಮಂಜಿನ ಮರೆಯಲ್ಲಿ ಅಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಇದು ಮುಗ್ಧ ಜನರನ್ನು ವಂಚಿಸಲೆಂದೇ ಹರಡಲಾದ ಮೂಢ ನಂಬಿಕೆ ಎಂದು ತಿಳಿಯುತ್ತದೆ. ನಿಜಕ್ಕೂ ಏನು ನಡೆಯುತ್ತಿದೆ ಆ 'ಧರ್ಮಸ್ಥಳ' ಎಂಬಲ್ಲಿ. ಒಂದು ನೋಟ.




ಧರ್ಮಸ್ಥಳದ ಅಮಾಯಕ ಹುಡುಗಿ, ವಿದ್ಯಾರ್ಥಿನಿ 'ಸೌಜನ್ಯ' ಸತ್ತು ಭರ್ತಿ ಒಂದು ವರ್ಷ ತುಂಬಿದ ದಿನದಿಂದ ದೊಡ್ಡ ಸುದ್ದಿಯಾಗ ತೊಡಗಿದ್ದಾಳೆ. ರಾಜ್ಯದೆಲ್ಲೆಡೆ ಈಗ ಸೌಜನ್ಯಳದ್ದೇ ಚರ್ಚೆ. ದ.ಕ., ಉಡುಪಿಯ ಮನೆ ಮನೆಯಲ್ಲೂ ಸೌಜನ್ಯ ಮನೆಯ ಮಗಳೇನೋ ಎಂಬಂತೆ ಅನುಕಂಪ ಗಿಟ್ಟಿಸಿ ಬಿಟ್ಟಿದ್ದಾಳೆ. ಅವಳಿಗೀಗ ಜಿಲ್ಲೆಯಿಡೀ ಎಲ್ಲರೂ ಅಣ್ಣಂದಿರೇ, ಅವಳೀಗ ಪ್ರತಿ ಮನೆಯ ಮಗಳು. ಅವಳು ಹುಟ್ಟಿಸುತ್ತಿರುವ ಸದ್ದಿಗೆ ಜಿಲ್ಲೆಯ ಧಣಿಗಳ ಸಾಮ್ರಾಜ್ಯ ಕಂಪಿಸತೊಡಗಿದೆ. ಸೌಜನ್ಯ ಹೆಸರು ಜನತೆಯಲ್ಲಿ ಹೋರಾಟದ ಕೆಚ್ಚನ್ನು ಹುಟ್ಟಿಸುತ್ತಿದೆ. ಬಲಾಢ್ಯ, ಪ್ರಶ್ನಾತೀತ ಶಕ್ತಿಗಳನ್ನು ಎದುರಿಸುವ, ಪ್ರಶ್ನಿಸುವ ಶಕ್ತಿಯನ್ನು ತುಂಬುತ್ತಿದೆ. ಅವಳಿಂದಾಗಿ ಜಿಲ್ಲೆಯಲ್ಲಿ ಹೋರಾಟದ, ಚಳುವಳಿಯ ಹೊಸ ಪರ್ವ ಆರಂಭವಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ಸೌಜನ್ಯ ಈಗ ಹೋರಾಟದ ಸಂಕೇತ.

ಕಳೆದ ವರ್ಷ ಅಕ್ಟೋಬರ್ 9 ರಂದು ಸೌಜನ್ಯ ಉಜಿರೆಯ ಎಸ್‌ಡಿಎಂ ಪಿ.ಯು. ಕಾಲೇಜಿನಿಂದ ವಾಪಾಸಾಗುವಾಗ ಧರ್ಮಸ್ಥಳದಲ್ಲಿ ಸಾಮೂಹಿಕ ಅತ್ಯಾಚಾರಕ್ಕೀಡಾಗಿ ಕೊಲೆಗೀಡಾಗಿದ್ದಾಗಲೂ ಇಡೀ ಬೆಳ್ತಂಗಡಿ ಸೇರಿದಂತೆ ಜಿಲ್ಲೆ ಆಕ್ರೋಶಗೊಂಡಿತ್ತು. ಮಾನಸಿಕ ಅಸ್ವಸ್ಥನೊಬ್ಬನನ್ನು ಬಂಧಿಸಿ, ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಿ ಬಿಜೆಪಿ ಸರಕಾರ ಜನತೆಯ ಆಕ್ರೋಶವನ್ನು ತಣಿಸುವ ಪ್ರಯತ್ನ ನಡೆಸಿತು. ಜೊತೆಗೆ ಕಳೆದ ಮೂರು ದಶಕಗಳಿಂದ ಇಂತಹ ಅನೇಕ ಘಟನೆಗಳನ್ನು ನೋಡಿರುವ ಇಲ್ಲಿನ ಜನತೆ ದೊಡ್ಡವರನ್ನು, ದೈವಾಂಶ ಸಂಭೂತರನ್ನು ಪ್ರಶ್ನಿಸುವ ಧೈರ್ಯ ಸಾಲದೆ ಸುಮ್ಮನಾದರು. ಮತೀಯ ಶಕ್ತಿಗಳ ಬಿಗಿ ಹಿಡಿತದಲ್ಲಿರುವ ವಿದ್ಯಾರ್ಥಿ ಸಮುದಾಯವು ಧಣಿಗಳ ಹಿತ ಕಾಯುವ ತಮ್ಮ ನಾಯಕರ ಅಣತಿಯಂತೆ ಸುಮ್ಮನಾಯಿತು. ಆದರೆ ಜನತೆಯ ಒಡಲೊಳಗೆ ಒಂದು ಆಕ್ರೋಶ ಮಾತ್ರ ಕೆಂಡದಂತೆ ನಿಗಿ ನಿಗಿ ಅನ್ನುತ್ತಿತ್ತು. ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನದೆ ಧರ್ಮಸ್ಥಳದ ಧಣಿಗಳ ಪಾದಸೇವೆ ಮಾಡುವ ರಾಜಕೀಯ ಪಕ್ಷಗಳ ಮಧ್ಯೆಯೇ ಬೆಳ್ತಂಗಡಿಯ ಸಿಪಿಐ(ಎಂ) ಪಕ್ಷ, ಜನವಾದಿ ಮಹಿಳಾ ಮತ್ತು ಡಿವೈಎಫ್‌ಐ ಸಂಘಟನೆಗಳು ಮಾತ್ರ ಹೋರಾಟವನ್ನು ಮಾಡುತ್ತಾ ಸಿಬಿಐ ತನಿಖೆಗೆ ಒತ್ತಾಯಿಸುತ್ತಾ ಬಂದಿದ್ದವು. ಇದೇ ಬೆಳ್ತಂಗಡಿಯ ಅಸಹಾಯಕ ಜನತೆಗೆ ಆಶಾಕಿರಣವಾಗಿತ್ತು. ಆದರೂ ಧೈರ್ಯ ಸಾಲದ ಜನತೆ ಬೀದಿಗಿಳಿಯಲು ಹಿಂಜ-ರಿಯುತ್ತಿದ್ದರು.

ಹೊಸದಲ್ಲ ... ಲೆಕ್ಕವಿಟ್ಟವರಿಲ್ಲ...

ಧರ್ಮಸ್ಥಳದಲ್ಲಿ ಇಂತಹ ಅತ್ಯಾಚಾರ, ಕೊಲೆಗಳು ಹೊಸದಲ್ಲ. 30 ವರ್ಷದ ಹಿಂದೆ ಧರ್ಮಸ್ಥಳ ಶಾಲೆಯಲ್ಲಿ ತನಗೆ ನ್ಯಾಯಬದ್ಧವಾಗಿ ದೊರಬೇಕಾದ ಮುಖ್ಯೋಪಾಧ್ಯಾಯಿನಿ ಸ್ಥಾನ ಸಿಗಬೇಕು ಎಂದು ಹಠ ಹಿಡಿದಿದ್ದಕ್ಕೆ, ಧಣಿಗಳನ್ನು ಪ್ರಶ್ನಿಸಿದ್ದಕ್ಕೆ ವೇದವಲ್ಲಿ ಎಂಬ ಶಿಕ್ಷಕಿಯನ್ನು ಸೀಮೆ ಎಣ್ಣೆ ಹಾಕಿ ಸುಟ್ಟು ಕೊಂದು ಹಾಕಿ ಆತ್ಮಹತ್ಯೆ ಎಂದು ಕಥೆ ಕಟ್ಟಿದ್ದನ್ನು ಇಲ್ಲಿಯ ಜನ ಅಸಹಾಯಕರಂತೆ ನೋಡಿದ್ದಾ-ರೆ. ಆ ಕಥೆಯನ್ನು ಹೇಳಲಿಕ್ಕಾಗಿಯೇ ವೇದವಲ್ಲಿಯವರ ಪತಿ ಡಾಕ್ಟರ್ ಹರಳೆ ಇನ್ನೂ ಉಜಿರೆಯಲ್ಲಿ ಬದುಕಿದ್ದಾರೆ. ಇನ್ನು 1987ರಲ್ಲಿ 'ಧರ್ಮಸ್ಥಳದಲ್ಲಿ ಚುನಾವಣೆ ನಡೆಯುವಂತಿಲ್ಲ' ಎಂಬ ಧಣಿಗಳ ಮಾತನ್ನು ಮೀರಿ ಮಂಡಲ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಹಾಗೂ ಗೇಣಿದಾರರ ಪರವಾಗಿ ಹೋರಾಡಿದ ಕಾರಣ-ಕ್ಕೆ ಕಮ್ಯೂನಿಸ್ಟ್ ಪಕ್ಷದ ನಾಯಕರು ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲ್ಲೂಕು ಉಪಾಧ್ಯಕ್ಷರಾಗಿದ್ದ ದೇವಾನಂದರ ಮಗಳು, ಉಜಿರೆಯ ಪಿಯುಸಿ ವಿದ್ಯಾರ್ಥಿನಿ ಪದ್ಮಲತಾ ಅಪಹರಣಗೊಂಡು ಅತ್ಯಾಚಾರ-ಕ್ಕೆ ಗುರಿಯಾಗಿ ಕೊಲೆಗೀಡಾದದ್ದನ್ನು ಈ ನಾಡು ಎಂದಾದರೂ ಮರೆಯಲು ಸಾಧ್ಯವೇ? ಅಂದು ಕಮ್ಯುನಿಸ್ಟರ ಅಷ್ಟೆಲ್ಲಾ ಹೋರಾಟದ ನಂತರ ಜನತಾ ಸರಕಾರ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಿತು. ವರ್ಷಗಳ ತನಿಖೆಯ ನಂತರ ಸಿಐಡಿ 'ಪತ್ತೆ-ಯಾಗದ ಪ್ರಕರಣ' ಎಂದು ವರದಿ ಬರೆದು ಕೇಸು ಮುಗಿಸಿತ್ತು. ಅಷ್ಟು ಹೋರಾಟಗಳನ್ನು ಮಾಡಿದ್ದಕ್ಕೆ ಅಲ್ಲಿನ ಆಗಿನ ಕಮ್ಯುನಿಸ್ಟ್ ನಾಯಕ ಕಾಮ್ರೇಡ್ ಎಳಚಿತ್ತಾಯ ಮತ್ತವರ ಸಂಗಾತಿಗಳು ಅನುಭವಿಸಿದ ಕಿರುಕುಳ, ಹಿಂಸೆ ಅಪಾರ.



ಅದನ್ನು ನೋಡಿದ ನಂತರವಂತೂ ಬಹಿರಂಗವಾಗಿ ಧಣಿಗಳನ್ನು ಪ್ರಶ್ನಿಸುವ, ಮಾತಾಡುವ, 'ದೇವರನ್ನು ಬಹಿರಂಗವಾಗಿ ಎದುರು ಹಾಕಿಕೊಳ್ಳುವ' ಧೈರ್ಯವನ್ನು ಯಾರೂ ತೋರಿಸಲಿಲ್ಲ. ಅನಂತರ ಧರ್ಮಸ್ಥಳದ ಸ್ನಾನ ಘಟ್ಟದಲ್ಲಿ ತೇಲಿ ಹೋದ ಮಹಿಳೆಯರ ಮೃತದೇಹಗಳ ಲೆಕ್ಕವಿಟ್ಟವರಿಲ್ಲ. ಎಲ್ಲವೂ ಅಸಹಜ ಸಾವು, ಪತ್ತೆಯಾಗದ ಪ್ರಕರಣ ಎಂದು ಪೊಲೀಸ್ ವರದಿ. ಜೊತೆಗೆ ಇದರ ಒಳಮಮ ಅರಿತ ಸ್ಥಳೀಯ ಜನತೆಯ ಒಂದ ನಿಟ್ಟುಸಿರು- ಅಲ್ಲಿಗೆ ಪ್ರಕರಣ ಮುಕ್ತಾಯ ಕಳೆದ 11 ವರ್ಷಗಳಲ್ಲಿ 450ಕ್ಕೂ ಹೆಚ ಅಸಹಜ ಸಾವು, 16 ಅಧಿಕೃತ ಕೊಲೆಗಳ ಧರ್ಮಸ್ಥಳ, ಉಜಿರೆ ಗ್ರಾಮಗಳಲ್ಲಿ ನಡೆದಿ ಮತ್ತು ಅವುಗಳ ಕಾರಣ ತಿಳಿದಿಲ್ಲ. ಅದ ದರೆ ಅಂದಾಜಿಸಿ, ಯಾವುದೇ ತೆಲುಗ ಸಿನಿಮಾದಲ್ಲಾದರೂ ಇಂತಹ ಊರ ನೋಡಲು ಸಿಕ್ಕೀತೇ?

ಮೊನ್ನೆ ತಾನೆ – ಆನೆ ಮಾವುತ ಮತ್ತು ಆತ ಸಹೋದರಿ

ಸೌಜನ್ಯ ಹತ್ಯೆಗಿಂತ 20 ದಿನಗ ಮೊದಲು ಧರ್ಮಸ್ಥಳ ಕ್ಷೇತ್ರದಲ್ಲೇ ಆ ಮಾವುತನಾಗಿ ಜೀವನ ಪೂರ್ತಿ ದುಡಿ ಒಬ್ಬ ವೃದ್ಧ ಮತ್ತು ಆತನ ಸಹೋದರಿಯ ಕೊಲೆಯಾಯಿತು. ಅನಾಥರಾಗಿದ್ದ ತೀರಾ ಬಡವರಾಗಿದ್ದ, ಯಾರೊಂದಿಗೂ ವೈರತ್ವವನ್ನು ಹೊಂದಿರದ ಇವರ ಕೊಲೆಯ ಆರೋಪಿಗಳ ಬಂಧನ ಇನ್ನೂ ಆಗಿಲ್ಲ ಕಾರಣ ತಿಳಿದಿಲ್ಲ ಎಂದರೆ ನೀವೇ ಊಹಿಸಿ ಈಗ ಜನತೆ ಕ್ಷೇತ್ರದತ್ತ, ಒಡೆ ಕೈ ತೋರಿಸುವುದರಲ್ಲಿ ತಪ್ಪೇನಿದೆ. ಆ ಕುಟುಂಬ ಧರ್ಮಸ್ಥಳ ಗ್ರಾಮದ ಆಯಕಟ್ಟಿನ ಜಾಗದಲ್ಲಿ ಒಂದಿಷ್ಟು ಭೂಮಿ ಹೊಂದಿದ್ದಕ್ಕೆ ಮತ್ತು ಅದನ್ನು ಬಿಟ್ಟು ಕೊಡದ ಕಾರಣ-ಕ್ಕೆ ಅನಾಥ ಹೆಣವಾಗಬೇಕಾಯಿತು ಎಂದು ಜನ ಆಡಿಕೊಳ್ಳುವುದಕ್ಕೆ ಕಾರಣವಂತೂ ಇದೆ.

ಸಹನೆಯ ಕಟ್ಟೆ ಒಡೆಯಿತು

ಇಷ್ಟೆಲ್ಲಾ ಹಿನ್ನೆಲೆಯಲ್ಲಿ ಸೌಜನ ಪ್ರಕರಣ ಜನತೆಯ ಸಹನೆಯ ಕಟ್ಟೆಯನು ಒಡೆಯಲು ಒಂದು ಕಾರಣವಾಯಿತು ಸದನದಲ್ಲಿ ಸ್ಥಳೀಯ ಶಾಸಕರಿಗೆ ಪ್ರಕರಣದ ಸಿಬಿಐ ತನಿಖೆ ಇಲ್ಲ ಎಂದು ಸರಕಾರ ಹೇಳಿಕೆ ನೀಡಿದ್ದು ಡಿವೈಎಫ್‌ಐ ಎಸ್‌ಎಫ್‌ಐ, ಜೆಎಂಎಸ್, ಮತ್ತ ಹೋರಾಟಕ್ಕಾಗಿ ಬೀದಿಗಿಳಿದಿದ್ದು ಜನತ ಪ್ರಶ್ನಿಸಲು ಪ್ರೇರಣೆಯನ್ನು ಒದಗಿಸಿತು ಸೌಜನ್ಯ ಹತ್ಯೆಗೆ ಒಂದು ವರ್ಷ ತುಂಬಿದ ಅಕ್ಟೋಬರ್ 9 ರಂದು ಸಿಪಿಐ(ಎಂ), ಡಿವೈಎಫ್ ಎಸ್‌ಎಫ್‌ಐ, ಜೆಎಂಎಸ್ ಸೇ ಮಂಗಳೂರಿನಲ್ಲಿ ಬೃಹತ್ ರ್‍ಯಾ ಏರ್ಪಡಿಸಿ ಸಿಬಿಐ ತನಿಖೆ ಆಗ್ರಹಿಸುವ ಹೋರಾಟವನು ಹಮ್ಮಿಕೊಂಡಾಗ ಜ ಬೀದಿಗಿಳಿಯ ತೊಡಗಿದರು ಪ್ರತಿಭಟನೆಯ ಪೂರ್ವದಲ್ಲೆ ಬೆಳ್ತಂಗಡಿಯ ಗ್ರಾಮೀಣ ಭಾಗದ ದೊರಕಿದ ಉತ್ತಮ ಪ್ರತಿಕ್ರಿಯೆ ಸಾವಿರಾರು ಜನ ಮಂಗಳೂರಿ ರ್‍ಯಾಲಿ ಹೊರಡುವಂತೆ ಪ್ರೇರೇಪಿಸಿತು ಅಂದಿನ ಪ್ರತಿಭಟನಾ ಸಭೆಗೆ ದೊರಕಿ ಅಭೂತ ಪೂರ್ವ ಬೆಂಬಲ ಮುಂದಿ ಎಲ್ಲಾ ಐತಿಹಾಸಿಕ ಬೆಳವಣಿಗೆಗಳಿ ಮುನ್ನುಡಿ ಬರೆಯಿತು. ಆ ಸಮಾವೇ ಹುಟ್ಟಿಸಿದ ಧೈರ್ಯದಿಂದ ಸೌ ಕುಟುಂಬಸ್ಥರು ಧರ್ಮಸ್ಥಳದ ಧಣಿಗ ಕೈ ತೋರಿಸಿದರು. ಭೂ ಹಗರಣಗ ವಿರುದ್ಧ ಹೋರಾಡುತ್ತಿರುವ ಸಾಮಾಜಿ

– ಸಂಜಯ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾರ್ಯಕರ್ತರಾದ ಸೋಮನಾಥ್ ನಾಯಕ್, ಅಲ್ಲದೇ ಮಹೇಶ್ ಶೆಟ್ಟಿ ತಿಮರೋಡಿರಂತವರು ಧಣಿಗಳ ವಿರುದ್ಧ ಧ್ವನಿ ಎತ್ತಿದರು. ಧರ್ಮಸ್ಥಳ ಸೇವೆಯ ಮರೆಯಲ್ಲಿ ನಡೆಯುವ ಸ್ವಸಹಾಯ ಗುಂಪುಗಳ ಶೋಷಣೆ, ಭೂಹಗರಣ, ದಲಿತರ ಭೂಮಿ ನುಂಗಿದ ಕಥೆಗಳೆಲ್ಲಾ ಹೊರ ಬರತೊಡಗಿತು. ಜನ ಧೈರ್ಯದಿಂದ ಬೀದಿಗಿಳಿಯುವುದನ್ನು ನೋಡಿ ಧಣಿಗಳೂ ಪ್ರತಿ ಸಮಾವೇಶ ಹಮ್ಮಿಕೊಂಡರೂ ಸ್ವಸಹಾಯ ಗುಂಪಿನ ಮಹಿಳೆಯರನ್ನು ಬಲವಂತವಾಗಿ ಕರೆ ತರಲಾಯಿತು ಎಂಬ ಆರೋಪಕ್ಕೊಳಗಾದ ಆ ಸಭೆಯಲ್ಲಿ ಸರಕಾರದ ಮೂವರು ಸಚಿವರು, ಕಾಂಗ್ರೆಸ್ ಬಿಜೆಪಿಯ ಮುಖಂಡರು, ಜಿಲ್ಲೆಯ ಶಿಕ್ಷಣದ ಕಳ್ಳ ವ್ಯಾಪಾರ ನಡೆಸುವ 'ಸಜ್ಜನ'ರು, ಸಣ್ಣ ಮಟ್ಟ ಧಣಿಗಳು ಭಾಗವಹಿಸಿ ಧಣಿಗಳ ಸುದ್ಧಿಗೆ ಬಂದರೆ ಹುಷಾರ್ ಎಂದು ತಮ್ಮ ವರ್ಗ ಗುಣವನ್ನು ಜಾಹೀರು ಪಡಿಸಿದರು. ಇದಾಗಿ ಎರಡು ದಿನದ ನಂತರ ಸೌಜನ್ಯ ಹುಟ್ಟಿದ ದಿನ!

ಹೋರಾಟದ ಹೊಸ ಚರಿತ್ರೆಗೆ ಮುನ್ನುಡಿ

ಸೌಜನ್ಯಳ ಹುಟ್ಟಿನ ದಿನ ಡಿವೈಎಫ್ಐ, ಎಸ್‌ಎಫ್ಐ, ಜೆಎಂಎಸ್, ಹಮ್ಮಿಕೊಂಡ ಉಪವಾಸ ಸತ್ಯಾಗ್ರಹದಲ್ಲಿ ಸಾವಿರಾರು ಜನ ಸ್ವಯಂಸ್ಫೂರ್ತಿಯಿಂದ ಬೆಳ್ತಂಗಡಿಯ ಗ್ರಾಮಗಳಿಂದ ಎದ್ದು ಬಂದು ಭಾಗವಹಿಸುವ ಮುಖಾಂತರ ಹೋರಾಟದ ಹೊಸ ಚರಿತ್ರೆಗೆ ಮುನ್ನುಡಿ ಬರೆದಿದ್ದಾರೆ. ಇದು ಧಣಿಗಳಿಗೆ ಅವರನ್ನು ಪಕ್ಷ ಬೇಧ ಮರೆತು ಬೆಂಬಲಿಸುತ್ತಿರುವ ರಾಜಕಾರಣಿಗಳಿಗೆ ಆತಂಕವನ್ನು ಉಂಟು ಮಾಡಿದೆ. ಇದಕ್ಕೆ ಪ್ರತಿ ಸಮಾವೇಶಗಳನ್ನು ಹಮ್ಮಿಕೊಳ್ಳಲು ಸ್ವಸಹಾಯ ಗುಂಪಿನ ಮಹಿಳೆಯರನ್ನು ಬಲವಂತವಾಗಿ ಕರೆ ತರುವ ಯತ್ನಗಳು ನಡೆಯುತ್ತಿದೆ. ಇದರಲ್ಲಿ ಸರ್ವಧರ್ಮದ ಕೆಲ ಗುರುಗಳು, ಬಿಜೆಪಿಯ ಕೋಮುವಾದಿಗಳು, ಕಾಂಗ್ರೆಸ್‌ನ 'ಜಾತ್ಯಾತೀತವಾದಿ'ಗಳು ಭಾಗವಹಿಸಿ ಜನತೆಯ ಮುಂದೆ ಬೆತ್ತಲಾಗುತ್ತಿದ್ದಾರೆ. ಕೇಸರಿ ಪಡೆಯ ನಾಯಕತ್ವ ಧರ್ಮಸ್ಥಳದ ಧಣಿಗಳ ಕಾವಲಿಗೆ ನಿಂತಿದೆ. ಸಾಮಾನ್ಯ ಜನ ಮಾತ್ರ ಇವರ ಬೇಲಿಗಳನ್ನು ದಾಟಿ ಬಂದು ನ್ಯಾಯಕ್ಕಾಗಿ ಕೈ ಎತ್ತಿದ್ದಾರೆ. ಅವರ ಬೇಡಿಕೆ ಒಂದೇ ಸೌಜನ್ಯ ಮಾತ್ರ ಅಲ್ಲ ಪದ್ಮಲತಾ, ವೇದವಲ್ಲಿ, ಮಾವುತ ಮತ್ತಾತನ ಸಹೋದರಿ ಸೇರಿದಂತೆ ಕಳೆದ 25 ವರ್ಷಗಳ ಎಲ್ಲಾ ಪ್ರಕರಣಗಳನ್ನು ಸಿಬಿಐಗೆ ವಹಿಸಬೇಕು. ಅವರಿಗೆ ಸೌಜನ್ಯ ಒಂದು ಸಂಕೇತ, ಒಂದು ಸ್ಫೂರ್ತಿ ಮಾತ್ರ, ಈಗಿನ ವಾತಾವರಣ ಕಾಣುವಾಗ ಈ ಹೋರಾಟ ಒಂದು ತಾರ್ಕಿಕ ಅಂತ್ಯ ಕಾಣದೆ ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಈ ಹೋರಾಟ ಜಿಲ್ಲೆಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುವುದಂತೂ ಖಂಡಿತ. ಬನ್ನಿ ಎಲ್ಲರೂ ಕೈ ಜೋಡಿಸಿ, ನಮಗೆ ಜಾತಿ, ಧರ್ಮ ಬೇಧ ಬೇಡ. ನಾವೆಲ್ಲರೂ ಅಣ್ಣ ತಮ್ಮಂದಿರು, ಸೌಜನ್ಯ ನಮ್ಮ ಸಹೋದರಿ. ಇದು ಹೋರಾಟಕ್ಕಿಳಿದ ಜನತೆಯ ಬಾಯಿಯಿಂದ ಬರುತ್ತಿರುವ ಮಾತು. ಎಷ್ಟು ಅರ್ಥಪೂರ್ಣ ಅಲ್ಲವೇ....

ಸೌಜನ್ಯಾ ಕೊಲೆ : ಸಿಬಿಐ ತನಿಖೆಯಾಗಲಿ

ನ್ಯಾಯ ಸಿಗುವವರೆಗೂ ಹೋರಾಟ : ಶ್ರೀರಾಮರೆಡ್ಡಿ
ಬೆದರಿಕೆಗೆ ಬಗ್ಗುವುದಿಲ್ಲ : ಕೇಮಾರು ಶ್ರೀ

ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯಾಳ ಅತ್ಯಾಚಾರ, ಕಗ್ಗೊಲೆ ಪ್ರಕರಣ ಇದೀಗ ತೀವ್ರ ರೂಪವನ್ನು ಪಡೆದುಕೊಂಡಿದೆ. ಅಕ್ಟೋಬರ್ 18 ರಂದು ಬೆಳಗ್ಗೆ ಬೆಳ್ತಂಗಡಿಯಲ್ಲಿ ಸೇರಿದ ಸಹಸ್ರಾರು ಪ್ರತಿಭಟನಕಾರರು ದಿನವಿಡೀ ಉಪವಾಸ ಸತ್ಯಾಗ್ರಹದ ಮೂಲಕ ಸಿಬಿಐ ತನಿಖೆಗೆ ಒತ್ತಾಯಿಸಿದರು. ಮೃತಪಟ್ಟ ಸೌಜನ್ಯಾಳ ಹುಟ್ಟಿದ ದಿನವೂ ಅಂದೇ ಆಗಿದ್ದು, ವಿವಿಧ ರಾಜಕೀಯ ಮುಖಂಡರು, ಸ್ವಾಮೀಜಿಗಳು ಈ ಉಪವಾಸದಲ್ಲಿ ಭಾಗಿಯಾಗಿದ್ದಾರೆ. ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಎಂ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ, ಈ ಹಿಂದೆ ಧರ್ಮಸ್ಥಳದಲ್ಲಿ ಪದ್ಮಲತಾರನ್ನು ಅತ್ಯಾಚಾರಗೈದು ಕೊಲೆಗೈಯಲಾಗಿತ್ತು. ಇದೀಗ ಸೌಜನ್ಯಾಳ ಅತ್ಯಾಚಾರ–ಕೊಲೆಯಾಗಿದೆ. ಇದು ಇಲ್ಲಿಗೇ ನಿಲ್ಲಬೇಕು. ಅದಕ್ಕಾಗಿ ಈ ಹೋರಾಟ. ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿ ನ್ಯಾಯ ಸಿಗುವವರೆಗೂ ಈ ಹೋರಾಟ ಮುಂದುವರಿಯಲಿದೆ ಎಂದು ಘೋಷಿಸಿದರು.

ಈ ಹೋರಾಟ ಯಾವುದೇ ಧರ್ಮ ಅಥವಾ ವ್ಯಕ್ತಿಯ ವಿರುದ್ಧವಲ್ಲ. ಇದು ವ್ಯವಸ್ಥೆಯ ವಿರುದ್ಧದ ಹೋರಾಟವಾಗಿದೆ.ಸೌಜನ್ಯಾ ಪ್ರಕರಣದ ತನಿಖೆ ನಡೆಸುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ. ಪೊಲೀಸರು ಕೊಲೆಗಾರರನ್ನು ಬಂಧಿಸುವ ಬದಲು ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವವರನ್ನು ದಮನಿಸಲು ಹೊರಟಿದ್ದಾರೆ. ನೊಂದವರ



ಪರವಾಗಿ ನಿಲ್ಲಬೇಕಾಗಿದ್ದ ಸರಕಾರ ಇದೀಗ ಶೋಷಕರ ಪರ ನಿಂತಿದೆ.

ಸಚಿವರಾದ ವಿನಯ ಕುಮಾರ್ ಸೊರಕೆ, ಅಭಯಚಂದ್ರ ಜೈನ್, ಸಂಸದ ನಳಿನ್ ಕುಮಾರ್ ಕಟೀಲರು, ಮಾಜಿ ಸಚಿವ ಜನಾರ್ದನ ಪೂಜಾರಿ ನ್ಯಾಯ ಕೇಳುವವರ ವಿರುದ್ಧ ಕ್ರಮ ಕೈಗೊಳ್ಳುವ ಬೆದರಿಕೆಯೊಡ್ಡುತ್ತಿದ್ದಾರೆ. ಸೌಜನ್ಯಾಳ ಕೊಲೆಯಾದಾಗ ಕ್ರಮ ಕೈಗೊಳ್ಳಲು ಇವರೇಕೆ ಮುಂದಾಗಲಿಲ್ಲ ಎಂದು ಶ್ರೀರಾಮ ರೆಡ್ಡಿ ಪ್ರಶ್ನಿಸಿದರು.ಧರ್ಮದ ಮುಖವಾಡ



ಹಾಕಿಕೊಂಡವರು ಧರ್ಮವನ್ನು ಕೆಡಿಸುವ ಕಾರ್ಯ ಮಾಡುತ್ತಿದ್ದಾರೆ.

ಇಂಥವರ ವಿರುದ್ಧ ಜನ ಎಚ್ಚರಗೊಳ್ಳಬೇಕಾದ ಅಗತ್ಯವಿದೆ ಎಂದ ಅವರು, ಸೌಜನ್ಯಾ ಪ್ರಕರಣದಲ್ಲಿ ಧ್ವನಿ ಎತ್ತಿದವರ ವಿರುದ್ಧ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಬಿಜೆಪಿಗರು ಒಂದಾಗಿದ್ದರು. ಅವರಿಗೆ ಸೌಜನ್ಯಾಳ ನೋವಿಗಿಂತಲೂ ದೊಡ್ಡವರಿಗಾಗಿರುವ ಅಪಮಾನವೇ ಮುಖ್ಯ ವಿಷಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅನ್ಯಾಯದ ವಿರುದ್ಧ ಮಹಿಳೆಯರು ಧ್ವನಿಯೆತ್ತಲಿ : ಕೇಮಾರು ಶ್ರೀ

ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಕೇಮಾರು ಈಶ ವಿಠ್ಠಲದಾಸ ಸ್ವಾಮೀಜಿ, ಸೌಜನ್ಯಾಳಿಗೆ ನ್ಯಾಯ ಕೊಡಿಸಲು ಜಾತಿ, ಧರ್ಮ, ಪಕ್ಷ, ಭೇದ ಮರೆತು ಎಲ್ಲರೂ ಒಂದಾಗಿ ನ್ಯಾಯಕ್ಕಾಗಿ ಹೋರಾಡಬೇಕಾಗಿದೆ. ತಮ್ಮ ಮಗಳಿಗಾದ ಅನ್ಯಾಯ ಎಂದು ಭಾವಿಸಿ ಮಹಿಳೆಯರೆಲ್ಲರೂ ಧ್ವನಿಯೆತ್ತುವಂತಾಗಬೇಕು. ಇದು ಯಾವುದೇ ಧಾರ್ಮಿಕ ಕೇಂದ್ರ ಅಥವಾ ವ್ಯಕ್ತಿಯ ವಿರುದ್ಧದ ಹೋರಾಟವಲ್ಲ. ಸೌಜನ್ಯಾಳ ಸಾವಿಗೆ ಕಾರಣರಾದವರಿಗೆ ಶಿಕ್ಷೆಯಾಗಬೇಕು ಎಂಬ ಗುರಿಯೊಂದಿಗೆ ಹೋರಾಟ. ಇದರಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು. ತನಿಖೆಯ ದಾರಿ ತಪ್ಪಿಸುವವರು ಯಾರು ಎಂದು ಅನ್ಯಾಯಕ್ಕೊಳಗಾದ ಸೌಜನ್ಯಾಳ ಮನೆಯವರು ಹೇಳಲಿ.


ಸೌಜನ್ಯಾಳ ಪರ ಮಾತನಾಡಿದರೆ ಖಾವಿ ಬಿಚ್ಚಿಸುವ ಹಾಗೂ ದೌರ್ಜನ್ಯ ನಡೆಸುವ ಮಾತನ್ನಾಡಿದ್ದಾರೆ. ಆದರೆ ಯಾವುದೇ ಬೆದರಿಕೆಯಿಂದಲೂ ಈ ಹೋರಾಟ ನಿಲ್ಲುವುದಿಲ್ಲ ಎಂದು ಕೇಮಾರು ಶ್ರೀ ಸ್ಪಷ್ಟಪಡಿಸಿದರು.ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಜಿಲ್ಲೆಯ ಜನ ನಾಯಕರೆನಿಸಿಕೊಂಡವರೆಲ್ಲ ನ್ಯಾಯದ ಪರ ನಿಲ್ಲದೆ ಯಾರದೋ ಬೆಂಬಲಕ್ಕೆ ಮುಂದಾಗುತ್ತಿದ್ದಾರೆ. ಜನತೆಯ ಮನಸ್ಸಿನಲ್ಲೇನಿದೆ ಎಂಬುದನ್ನು ಅರಿತು ಈ ನಾಯಕರು ವರ್ತಿಸಲಿ. ಸಚಿವ ವಿನಯ

ಪುಟ 10 ಕ್ಕೆ

ಸೌಜನ್ಯ ಪ್ರಕರಣ ರಾಜ್ಯದ್ಯಂತ ಪ್ರತಿಭಟನೆಗಳು



ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿ ಅಕ್ಟೋಬರ್ 23 ರಂದು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಬೇಕು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದ ಮೇರೆಗೆ, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದವು. ಅತ್ಯಲ್ಪ ಕಾಲಾವಧಿಯಲ್ಲಿ ಎರಡೂ ಕಡೆ ಇನ್ನೂರಕ್ಕೂ ಮೀರಿದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಮಂಗಳೂರಿನಲ್ಲಿ ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ಹಿರಿಯ ನಾಯಕರೂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕೆ.ಆರ್,ಶ್ರೀಯಾನ್ ಮಾತನಾಡಿದರು. ಸಿಪಿಐ(ಎಂ) ಪಕ್ಷದ ಹೋರಾಟ ಸೌಜನ್ಯ ಕುಟುಂಬಕ್ಕೆ ನ್ಯಾಯ ಒದಗಿಸುವುದರ ಬಗ್ಗೆಯೇ ಹೊರತು, ಆ ಪ್ರದೇಶದ ಧರ್ಮಕ್ಷೇತ್ರದ ವಿರುದ್ಧವಲ್ಲ, ದೆಹಲಿ, ಮಣಿಪಾಲ ಅತ್ಯಾಚಾರ ಪ್ರಕರಣಗಳನ್ನು ಶೀಘ್ರ ಪತ್ತೆ ಮಾಡಲು ಪೋಲೀಸರಿಗೆ ಸಾಧ್ಯವಾಗಿದ್ದರೆ, ಧರ್ಮಸ್ಥಳದ ಬಾಲಕಿಯ ಅತ್ಯಾಚಾರ ಕೊಲೆ ಪ್ರಕರಣದ ರಹಸ್ಯ ಬಹಿರಂಗಗೊಳಿಸಲು ತಡೆಯೊಡ್ಡಿದ ಪ್ರಭಾವಿ ಶಕ್ತಿಗಳು ಯಾವುವು ಎಂಬುದು ಸಾರ್ವಜನಿಕರಿಗೆ ತಿಳಿಯಬೇಕಾಗಿದೆ; ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಳೆಯಗಾರಿ ಶಕ್ತಿಗಳಿಗೆ ಸ್ಥಾನವಿಲ್ಲ ಎಂಬುದಾಗಿ ಕೆ.ಆರ್.ಶ್ರೀಯಾನ್ ರಾಜ್ಯಾಡಳಿತವನ್ನು ತರಾಟೆಗೆ ತೆಗೆದು-ಕೊಂಡರು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಯಾದವ ಶೆಟ್ಟಿ, ವಸಂತ ಆಚಾರಿ ಕೂಡಾ ಮಾತನಾಡಿದರು. ಸಾರ್ವಜನಿಕರು ಕೂಡಾ ಕದಲದೆ ಭಾಷಣಕಾರರ ಮಾತುಗಳನ್ನು ಕೊನೆಯವರೆಗೂ ಆಲಿಸಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವು ಉಡುಪಿ ನಗರ ಸರ್ವಿಸ್ ಬಸ್ ನಿಲ್ದಾಣದ ಎದುರು ನಡೆಯಿತು. ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಸರ್ಕಾರ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಬೇಕು, ಇಲ್ಲದಿದ್ದರೆ ಸಿಪಿಐ(ಎಂ) ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಿದೆ ಎಂಬುದಾಗಿ ಎಚ್ಚರಿಕೆ ನೀಡಲಾಯಿತು. ಕುಂದಾಪುರದಿಂದಲೂ ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಭಾಗವಹಿಸಿದ್ದರು. ಪಕ್ಷದ ಮುಖಂಡರಾದ ದೋಗು ಸುವರ್ಣ, ನರಸಿಂಹ, ಡಿವೈಎಫ್ಐ ಮುಖಂಡರಾದ ಸುರೇಶ ಕಲ್ಲಾಗರ ಮತ್ತಿತರರು ಭಾಗವಹಿಸಿದ್ದರು.

ಅಲ್ಲಲ್ಲಿ ಸ್ವಯಂ ಪ್ರೇರಿತ ಪ್ರತಿಭಟನೆಗಳು:

ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಯಾವುದೋ ಪ್ರಭಾವಿಗಳ ಹಿತಾಸಕ್ತಿಗೊಳಗಾಗಿ ಮುಚ್ಚಿ ಹಾಕಲು ಪ್ರಯತ್ನಿಸಲಾಗುತ್ತಿದೆ ಎಂಬ ಭಾವನೆ ಕರಾವಳಿ ಜಿಲ್ಲೆಗಳ ಸಾಮಾನ್ಯ ಜನರ ಅನುಭವಕ್ಕೆ ಬರುತ್ತಿದ್ದು, ಅಲ್ಲಲ್ಲಿ ಜನರು ಸ್ವಯಂ ಪ್ರೇರಿತವಾಗಿಯೇ ಸಂಘಟಿ-ತರಾಗಿ ಪ್ರತಿಭಟನೆಗಳನ್ನು ಪದೇ ಪದೇ ನಡೆಸುತ್ತಿದ್ದಾರೆ. ಬೆಳ್ತಂಗಡಿ ತಾಲೂಕಿನಲ್ಲಿ ಇಂತಹ ಹಲವು ಪ್ರತಿಭಟನೆಗಳಾಗಿವೆ. ಸಾರ್ವಜನಿಕರು ಕೆಲವೆಡೆ ಇಂಥ ಪ್ರತಿಭಟನೆಗಳಲ್ಲಿ ಮಾತನಾಡಲು ಸಿಪಿಐ(ಎಂ) ಮತ್ತು ಡಿವೈಎಫ್ಐ ಮುಖಂಡರನ್ನೇ ಆಹ್ವಾನಿಸುತ್ತಿರುವುದೂ ಇದೆ.

ಅಕ್ಟೋಬರ್ 19 ರಂದು ಉಪ್ಪಿನಂಗಡಿಯ ನಾಗರಿಕರು ಸಂಘಟಿಸಿದ ಪ್ರತಿಭಟನೆಯಲ್ಲಿ ಬೆಳ್ತಂಗಡಿ ತಾಲೂಕು ಸಿಪಿಐ(ಎಂ) ಮುಖಂಡರನ್ನು ಆಹ್ವಾನಿಸಿದ್ದರು. ಉಪ್ಪಿನಂಗಡಿ ಪೇಟೆಯ ಮಧ್ಯೆ ನಡೆದ ಈ ಪ್ರತಿಭಟನೆಯಲ್ಲಿ ಬೆಳ್ತಂಗಡಿಯ ಪಕ್ಷ ಮುಖಂಡರಾದ ಎಸ್.ಎಂ.ಶಿವಕುಮಾರ್, ಬಿ.ಎಂ.ಭಟ್, ಶೇಖರ ಲಾಯಿಲ ಭಾಗವಹಿಸಿದ್ದರು. ಬಿ.ಎಂ.ಭಟ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ಅಕ್ಟೋಬರ್ 21 ರಂದು ಕುಂದಾಪುರದ ಶಾಸ್ತ್ರಿ ವೃತ್ತದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿತ್ತು. ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ತಾಲೂಕು ಸಮಿತಿ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು. ಡಿವೈಎಫ್ಐ ಕಾರ್ಯಕರ್ತರ ಈ ಪ್ರತಿಭಟನಾ ಪ್ರದರ್ಶನ ವೇಳೆ ಸಾರ್ವಜನಿಕರೂ ಹೆಚ್ಚಿನ ಕಾತರದಿಂದ ಭಾಷಣವನ್ನು ಆಲಿಸಿದರು.

ಈ ಪ್ರಕರಣ ಮುಚ್ಚಿಹೋಗಬೇಕು ಎಂದು ಬಯಸುವ ಸಂಘ ಪರಿವಾರದ ಸಂಘಟನೆಗಳಾದ ಎಬಿವಿಪಿ, ಹಿಂದೂ ಜಾಗರಣಾ ವೇದಿಕೆ, ಸಂಘಪರಿವಾರದ ನಾಯಕನ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಲ್ ಕಾಲೇಜ್ ಸ್ಟೂಡೆಂಟ್ಸ್ ಯೂನಿಯನ್ ಇತ್ಯಾದಿ ಸಂಘಟನೆಗಳು ಸಿಪಿಐ(ಎಂ) ಹಾಗೂ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ಹಿಂದೂ ಧರ್ಮಕ್ಕೆ ಅವ ಮರ್ಯಾದೆ ಮಾಡಲು ಪ್ರತ್ನಿಸುತ್ತಿವೆಯೆಂದು ತಮ್ಮ ಪ್ರತಿಭಟನಾ ಸಭೆಗಳಲ್ಲಿ ಅಪಪ್ರಚಾರದಲ್ಲಿ ತೊಡಗಿವೆ. ಆದ-ರೆ ಅವರೂ ಕೂಡಾ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಒತ್ತಾಯಿಸುತ್ತಿರುವುದು ವಿಪರ್ಯಾಸ.

ನವದೆಹಲಿ
ಅಕ್ಟೋಬರ್ 30, 2013
ಕೋಮುವಾದ ವಿರೋಧಿಸಿ
ರಾಷ್ಟ್ರೀಯ ಸಮಾವೇಶ



ಸೌಜನ್ಯಾ ಕೊಲೆ

ಪುಟ 8 ರಿಂದ

ಕುಮಾರ್ ಸೊರಕೆ ಬಹಿರಂಗವಾಗಿಯೇ ಸರಕಾರ ಯಾರ ಪರ ಇದೆ ಎಂದು ಹೇಳಿಕೊಂಡಿದ್ದಾರೆ. ಸಮಾಜವಾದಿ ನಾಯಕ ಸಿದ್ದರಾಮಯ್ಯ ಈಗಲಾದರೂ ಎಚ್ಚೆತ್ತುಕೊಳ್ಳಲಿ ಎಂದರು.

ಜನಪರ ಹೋರಾಟಗಾರ್ತಿ ಅಮೃತಾ ಶೆಟ್ಟಿ ಆತ್ರಾಡಿ ಮಾತನಾಡಿ, ಯಾವುದೇ ಕಾರಣಕ್ಕೂ ಇಂತಹ ದೌರ್ಜನ್ಯವನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ. ಇಂತಹ ಕ್ರೌರ್ಯವನ್ನು ಮೆರೆದವರು ಯಾರೇ ಆಗಲಿ, ಅವರನ್ನು ಕಾನೂನಿನ ಮುಂದೆ ತಂದು ತಕ್ಕ ಶಿಕ್ಷೆ ಕೊಡಿಸಬೇಕಾಗಿದೆ. ಅದಕ್ಕಾಗಿ ಸಂಘಟಿತ ಹೋರಾಟ ಅಗತ್ಯವಿದೆ ಎಂದು ಹೇಳಿದರು.

ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್‌ವಾದ) ಜಿಲ್ಲಾ ಸಂಚಾಲಕ ಚಂದು ಎಲ್., ದಸಂಸ(ಕೃಷ್ಣಪ್ಪ ಸ್ಥಾಪಿತ) ಜಿಲ್ಲಾ ಸಂಚಾಲಕ ರಘು ಜಿ.ಎಕ್ಕಾರ್, ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣಾನಂದ ಡಿ., ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯ ದಯಾನಂದ ಶೆಟ್ಟಿ, ಡಿವೈಎಫ್ಐ ಮಂಗಳೂರು ನಗರಾಧ್ಯಕ್ಷ ಇಮ್ತಿಯಾರ್ಝ್, 'ಜೈಕನ್ನಡಮ್ಮ' ಸಂಪಾದಕ ದೇವಿಪ್ರಸಾದ್, ಎಸ್ಎಫ್ಐ ಮುಖಂಡ ನಿತಿನ್ ಕುಮಾರ್, ಸಿಪಿಎಂ ತಾಲೂಕು ಕಾರ್ಯದರ್ಶಿ ಶಿವಕುಮಾರ್, ಬಿ.ಎಂ.ಭಟ್, ಹರಿದಾಸ್ ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಪ್ರತಿಭಟನೆಯಲ್ಲಿ ಸೌಜನ್ಯಾಳ ತಂದೆ ಚಂದಪ್ಪ ಗೌಡ, ತಾಯಿ ಕುಸುಮಾವತಿ, ವಿಠ್ಠಲ ಗೌಡ ಹಾಗೂ ಮನೆಯವರು ಉಪಸ್ಥಿತರಿದ್ದರು. ವಿವಿಧ ಸಂಘಟನೆಗಳ ಮುಖಂಡರಾದ ಜೀವನ್‌ರಾಜ್ ಕುತ್ಯಾರ್, ನ್ಯಾಯವಾದಿ ವಸಂತ ಮರಕಡ, ವೆಂಕಪ್ಪ ಕೋಟ್ಯಾನ್ ಇಂದಬೆಟ್ಟು, ಡಾ.ಹರಳೆ, ದಿನೇಶ್ ಗೌಡ ಮಲವಂತಿಗೆ, ಬಿ.ಕೆ. ವಸಂತ್, ದಾಮೋದರ ಭಟ್, ಸಂಜೀವ ಆರ್., ಜನಾರ್ದನ ಬಂಗೇರ, ಸಂತೋಷ್ ಮಜಲು, ಲಕ್ಷ್ಮಣ ಗೌಡ ಪಾಂಗಳ, ಶೈಲೇಶ್ ಆರ್. ಜೆ., ರವಿರಾಜ್, ಶೇಖರ್ ಎಲ್., ನೀಲೇಶ್, ಕಿರಣಪ್ರಭಾ, ಮಧುಸೂದನ್, ಪ್ರಶಾಂತ್, ಸುಕನ್ಯಾ, ಪುಷ್ಪರಾಜ್ ಮೊದಲಾದವರು ಪಾಲ್ಗೊಂಡಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆ ಕುರಿತು


ಅಖಿಲ ಭಾರತ ಕಾರ್ಯಾಗಾರ

ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆ ಜಾರಿ ಕುರಿತು ಅಖಿಲ ಭಾರತ ಕಾರ್ಯಗಾರವನ್ನು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಅಕ್ಟೋಬರ್-1 2013ರಂದು ನವದೆಹಲಿಯಲ್ಲಿ ಆಯೋಜಿಸಿತ್ತು. ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆಗೆ ತಿದ್ದುಪಡಿ ತರುತ್ತಿದ್ದು. ಈ ಕಾಯಿದೆಗೆ ಸಿಪಿಐ(ಎಂ) ಕೆಲವು ಅಗತ್ಯ ತಿದ್ದುಪಡಿ ಸಲಹೆಗಳನ್ನು ನೀಡಿ ಅವುಗಳನ್ನು ಅಳವಡಿಸಲು ಕೇಂದ್ರಸರ್ಕಾರವನ್ನು ಒತ್ತಾಯಿಸಿದೆ.

ಈ ಕಾರ್ಯಾಗಾರದಲ್ಲಿ 3ಜನ ಮಹಿಳೆಯರು ಸೇರಿದಂತೆ 49 ಸದಸ್ಯರುಗಳು, 15 ರಾಜ್ಯಗಳಿಂದ ಭಾಗವಹಿಸಿದ್ದರು. ಈ ಕಾರ್ಯಗಾರ ಅಧ್ಯಕ್ಷತೆಯನ್ನು ಕೆ. ರಾಧಾಕೃಷ್ಣನ್ (ಕೇರಳ) ವಹಿಸಿ ನಡೆಸಿಕೊಟ್ಟರು. ಮುಖ್ಯ ಅತಿಥಿಗಳಾಗಿ ಉದ್ಘಾಟನಾ ಸಮಾರಂಭದಲ್ಲಿ ಪ್ರಖ್ಯಾತ ಲೇಖಕರಾದ ಕನ್ಸಲ್ ಭಾರತಿ, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರುಗಳಾದ ಬೃಂದಾಕಾರಟ್ ಮತ್ತು ಕೆ. ವರದರಾಜನ್ ಈ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

ಈ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿದ ಕನ್ಸಲ್ ಭಾರತಿಯವರು ದೇಶದ ಪ್ರಭುತ್ವ ಮತ್ತು ಸರ್ಕಾರಗಳು ದಲಿತರನ್ನು ದೇಶದ ಇತರೆ ನಾಗರಿಕರಂತೆ ಸಮಾನತೆಯಿಂದ ಕಾಣುತ್ತಿಲ್ಲ. ಕೆಲವು ಸಮಾಜ ಕಲ್ಯಾಣ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರೂ ಅವು ತಾತ್ಕಾಲಿಕವಾಗಿ ಮಾತ್ರ ಸಹಾಯಕವಾಗಿವೆ ಮತ್ತು ದಲಿತರಿಂದ ಪ್ರತಿಭಟನೆಗಳು ಬರುವುದನ್ನು ತಡೆಯುವ ಪ್ರಯತ್ನ ಆಗಿದೆ. ಜಾತಿರಹಿತ ಮತ್ತು ವರ್ಗರಹಿತ ಸಮಾಜವನ್ನು ಕಟ್ಟುವುದರಲ್ಲಿ ಆಸಕ್ತಿ ಇಲ್ಲ. ದಲಿತರು ಸಂವಿಧಾನದ ಆಶಯಗಳನ್ನು ಉಪಯೋಗಿಸಲು ಸಾಧ್ಯವಾದಲ್ಲಿ, ಅವರಿಗೆ ಶಿಕ್ಷಣ ಮತ್ತು ಉದ್ಯೋಗ ಸಿಕ್ಕರೆ ದಲಿತರು ದೌರ್ಜ್ಯನ್ಯಗಳ ವಿರುದ್ದ ದ್ವನಿ ಎತ್ತುತ್ತಾರೆ. ಇಂತಹ ಪರಿಸ್ಥಿತಿಯನ್ನು ಮೇಲ್ಜಾತಿ ಮೇಲ್ವರ್ಗಗಳ ಜನ ಸಹಿಸುವುದಿಲ್ಲ, ದಲಿತರ ಮೇಲೆ ತೀವ್ರವಾದ ದೌರ್ಜ್ಯನ್ಯ ನಡೆಸುತ್ತಾರೆ. ದಲಿತರು ತಮ್ಮ ಕಾಲ ಮೇಲೆ ನಿಲ್ಲಬಾರದು ಮತ್ತು ಅವರು ಆಸ್ತಿವಂತ ಮೇಲ್ಜಾತಿಯವರ ಮೇಲೆ ಅವಲಂಭಿತರಾಗಿರಬೇಕೆನ್ನುವುದು ಅವರ ಆಶಯವಾಗಿದೆ.

ಭಾರತಿ ಮಾತು ಮುಂದುವರಿಸಿ ನಾವು ಇಂದು ಇಬ್ಬರು ಪ್ರಮುಖ ವಿರೋಧಿಗಳನ್ನು ಎದುರಿಸಬೇಕಾಗಿದೆ. ಒಂದು ಪುರೋಹಿತಶಾಹಿ ಮತ್ತು ಬಂಡವಾಳಶಾಹಿ. ಸಮಾಜದಲ್ಲಿ ಇವರಿಬ್ಬರು ಪ್ರಬಲರಾಗಿದ್ದಾರೆ. ಪುರೋಹಿತಶಾಹಿ ವಿರುದ್ದ ಬೃಹತ್ ಚಳುವಳಿ ನಡೆಸಬೇಕು. ಪುರೋಹಿತಶಾಹಿ ನಾಶವಾಗಬೇಕು ಎಂದು ಹೇಳುತ್ತಾ ಬ್ರಾಹ್ಮಣವಾದದ ವಿರುದ್ದ ಹೋರಾಟವೇ ವಿನಹ ಬ್ರಾಹ್ಮಣರ ವಿರುದ್ದ ಅಲ್ಲ ಎಂದು ಸ್ಪಷ್ಟಪಡಿಸಿದರು. ಪುರೋಹಿತಶಾಹಿ ಸಿದ್ದಾಂತ ಯಜಮಾನಿ ವ್ಯವಸ್ಥೆಯಾಗಿದೆ. ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಶೋಷಿಸುವ, ಕೀಳಾಗಿಕಾಣುವ ವ್ಯವಸ್ಥೆಯಾಗಿದೆ. ಇದರಿಂದ ಅದು ಅಮಾನವೀಯ ವ್ಯವಸ್ಥೆಯಾಗಿದೆ. ಬಂಡವಾಳಶಾಹಿ ವ್ಯವಸ್ಥೆ ಕೆಳಗೆ ಖಾಸಗೀಕರಣ, ಉದಾರೀಕರಣ ನೀತಿಗಳಿಂದಾಗಿ ದಲಿತರಿಗೆ ಉದ್ಯೋಗ ಕ್ಷೀಣಗೊಳ್ಳುತ್ತಿದೆ. ದಲಿತರಿಗೆ ಶಿಕ್ಷಣ ಸಿಗದಂತಾಗುತ್ತಿದೆ. ಇದು ಹೆಚ್ಚಾಗುತ್ತಿದ್ದು ಹೆಚ್ಚಿನ ದಲಿತರು, ಬಡವರು ಈ ಬಂಡವಾಳಶಾಹಿ ವ್ಯವಸ್ಥೆಯಿಂದ ಸಂಕಷ್ಟಕ್ಕೀಳಾಗಿದ್ದಾರೆ. ದಲಿತ ವಿಭಾಗ ಇದನ್ನು ಸಾಕಷ್ಟು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಿಲ್ಲ. ದಲಿತರ ಭೂಮಿ ಪ್ರಶ್ನೆ, ಉದ್ಯೋಗದ ಪ್ರಶ್ನೆ ಮೂಲಭೂತ ಸೌಕರ್ಯ ಇತ್ಯಾದಿಗಳನ್ನು ಇತ್ಯರ್ಥಪಡಿಸಲು ಪ್ರಬಲವಾದ ಪ್ರಜಾಸತ್ತಾತ್ಮಕ ಹೋರಾಟಗಳು ನಡೆಯಬೇಕು ಎಂದರು. ಭಾರತಿ ಮಾತು ಸಮಾಪ್ತಿಗೊಳಿಸುತ್ತಾ ಕ್ರಾಂತಿಕಾರಿ ಚಳುವಳಿಯನ್ನು ಮುಂದುವರಿಸಲು ಸಾಮಾಜಿಕ ದೌರ್ಜನ್ಯಗಳ ವಿರುದ್ದವೂ ಚಳುವಳಿ ಕಟ್ಟಬೇಕು. ಆ ಮೂಲಕ ದಲಿತರನ್ನು ಇತರ ಶೋಷಿತರಿಂದ ಪ್ರತ್ಯೇಕಿಸುವ ಅನನ್ಯತೆ (ಐಡೆಂಟಿಟಿ) ರಾಜಕಾರಣವನ್ನೂ ಎದುರಿಸಲು ಸಹಾಯವಾಗುತ್ತದೆ ಎಂದರು.



ಕಾಂ। ಬೃಂದಾಕಾರಟ್ ಮಾತನಾಡುತ್ತಿರುವುದು.

ಬೃಂದಾ ಕಾರಾಟ್ ಮಾತನಾಡಿ ಜಾತಿವಾದ ವಿರುದ್ದ ಹೋರಾಟ ನಡೆಸದೆ ಯಾವುದೇ ಸಾಮಾಜಿಕ ಪರಿವರ್ತನೆ ಯಶಸ್ವಿಗೊಳಿಸಲು ಸಾಧ್ಯವಿಲ್ಲವೆಂದರು. ಸಾಮಾಜಿಕ ದೌರ್ಜನ್ಯಗಳನ್ನು ಎದುರಿಸದೆ ಸಾಮಾಜಿಕ ಬದಲಾವಣೆ ಸುಮ್ಮನೆ ಬರುವುದಿಲ್ಲ. ಜಾತಿ ವಿರುದ್ದ ಹೋರಾಟ ಬಂಡವಾಳಶಾಹಿ ವಿರುದ್ದ ಹೋರಾಟದ ಭಾಗ ಆಗಿದೆ. ಬಂಡವಾಳಶಾಹಿ ರಾಜಕೀಯ ಪಕ್ಷಗಳು ಬಂಡವಾಳಶಾಹಿ ಮಾನೋಭವವಿರುವ ದಲಿತ ಹಿರೋಗಳನ್ನು ತಂದಿದೆ. ಅವರಿಗೆ ಸಹಕಾರಿವಾಗುವಂತೆ ಸೇರಿಸಿಕೊಂಡಿದ್ದಾರೆ. ಮಿಸಾಲಾತಿ ಬಿಟ್ಟು ಮುಂದಕ್ಕೆ ಹೋಗಲಿಲ್ಲ. ಭಾರತದಲ್ಲಿ ಜಾತಿ ಪ್ರಶ್ನೆ ಸಾಮಾಜಿಕ ದಮನಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಶೋಷಣೆಯೊಳಗೆ ಅಂತರ್ಗತವಾಗಿದೆ. ವಿಶಾಲವಾದ ದುಡಿಯುವ ವರ್ಗವಾದ ದಲಿತರಿಂದ ಮಿಗುತಾಯ ಮೌಲ್ಯವನ್ನು ಹೀರಲು ಜಾತಿ ಮುಖ್ಯ ಸಾಧನವಾಗಿದೆ.

ಬೃಂದಾ ವಿವರಿಸುತ್ತಾ ಜಾತಿಪದ್ದತಿ ವಿರುದ್ದ ಎಲ್ಲರನ್ನೂ ಒಳಗೊಳ್ಳುವ ವಿಶಾಲವಾದ ಹೋರಾಟಗಳ ಕಣವಾಗಬೇಕು ಎಂದು ಹೇಳಿದರು. ಒಂದು ಕಡೆ ದೌರ್ಜನ್ಯ ತಡೆ ಕಾಯಿದೆ ಬಲಪಡಿಸುವುದನ್ನು ನೋಡಬೇಕಿದೆ. ದಲಿತರ ಮೇಲೆ ದೌರ್ಜನ್ಯ ತಡೆಯುವ ಕಾಯ್ದೆಗೆ ಬಲಯುತವಾದ ಸೂಕ್ತ ತಿದ್ದುಪಡಿ ತರಬೇಕು. ಮತ್ತೊಂದು ಕಡೆ ದೌರ್ಜನ್ಯ ತಡೆ ಕಾಯಿದೆಯನ್ನು ಸರಿಯಾಗಿ ಜಾರಿಗೆ ತರುವುದನ್ನು ಕೂಡ ನೋಡಬೇಕಾಗಿದೆ. ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವ ಬಗ್ಗೆ, ಅಪರಾಧಗಳನ್ನು ಸಾಭೀತುಪಡಿಸುವುದರ ಪ್ರಮಾಣದಲ್ಲಿ ಕುಗ್ಗುವಿಕೆ ಮತ್ತು ಪ್ರಕರಣ ಬಾಕಿ ಇರುವುದರ ಬಗ್ಗೆಯೂ ಮತ್ತು ಆ ರೀತಿಯ ಪ್ರಕರಣಗಳನ್ನು ಅತಿ ವೇಗದ ವಿಚಾರಣೆ ನಡೆಸುವ ಕ್ರಮಗಳಿಗೆ ಒತ್ತಾಯಪಡಿಸಬೇಕು..

ಪಕ್ಷದ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಶ್ರೀನಿವಾಸರಾವ್‌ರವರು ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆ ಜಾರಿ ಬಗ್ಗೆ ವರದಿ ಮಂಡಿಸಿ ಮಾತನಾಡುತ್ತಾ ದೌರ್ಜನ್ಯ ನಡೆಸಿ ಅಪರಾಧಿಗಳಾಗಿ ಎಸ್/ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆ ಅಡಿಯಲ್ಲಿ ಅಪರಾಧಿಗಳೆಂದು ಗುರುತಿಸಲ್ಪಟ್ಟಿರುವ ಪ್ರಮಾಣ ಖಚಿತ ಪ್ರಕಾರ ಬಹಳ ಕೆಳಮಟ್ಟದ್ದಾಗಿದೆ. ಯಾವ ಕಾರಣಕ್ಕಾಗಿ ಈ ಕಾಯಿದೆ ಮಾಡಲಾಗಿದೆಯೋ ಅದರ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಯಲು ದೌರ್ಜನ್ಯ ತಡೆ ಕಾನೂನನ್ನು ಅಗತ್ಯವಾದ ತಿದ್ದುಪಡಿ ತಂದು ಬಲಪಡಿಸಬೇಕು ಮತ್ತು ದಲಿತರನ್ನು ಆರ್ಥಿಕವಾಗಿ ಬಲಪಡಿಸಿದರೆ ಮಾತ್ರ ಈ ಸವಾಲುಗಳನ್ನು ದೃಢವಾಗಿ ಎದುರಿಸಲು ಸಾಧ್ಯ ಅವರಿಗೆ ಭೂಮಿ ಒದಗಿಸಬೇಕು, ಉದ್ಯೋಗ ಅವಕಾಶಗಳು ಹೆಚ್ಚಾಗಿ ನೀಡಬೇಕು ದೌರ್ಜನ್ಯ ಎಸಗುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಆಗ ಮಾತ್ರ ದಲಿತರು ಮೇಲ್‌ಜಾತಿಯ ಶ್ರೀಮಂತರನ್ನು ಶಕ್ತಿಯುತವಾಗಿ ಎದುರಿಸಬಹುದು. ಊಳಿಗಮಾನ್ಯ ಶಕ್ತಿಯ ಬಲಯುತವಾದ ಹಿಡಿತವನ್ನು ನಾಶಮಾಡಿದರೆ ಮಾತ್ರ ದಲಿತರ ಮೇಲಿನ ಸಾಮಾಜಿಕ ಶೋಷಣೆ ಮತ್ತು ದೌರ್ಜನ್ಯಗಳನ್ನು ತಡೆಗಟ್ಟಬಹುದು.

ಅನಂತರ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಇಮದು ಸಮಾಜದಲ್ಲಿ ದಲಿತರು ಅನುಭವಿಸುತ್ತಿರುವ ಅಸಮಾನತೆ, ಅವಮಾನ, ದಮನ ದೌರ್ಜನ್ಯಗಳ ಕುರಿತು ವರದಿಮಾಡಿದರು.

ಚರ್ಚೆಯ ನಂತರ ಶ್ರೀನಿವಾಸರಾವ್ ಚರ್ಚೆಯ ಆಧಾರದಲ್ಲಿ ಬೇಡಿಕೆಗಳನ್ನು ಕಾರ್ಯಗಾರದಲ್ಲಿ ಮಂಡಿಸಿದರು. ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆಯಲ್ಲಿರುವ ದೋಷಗಳನ್ನು ತೆಗೆದುಹಾಕಲು ಮಾಡಬೇಕಾದ ತಿದ್ದುಪಡಿಗಳ ಆಧಾರದಲ್ಲಿ ಈ ಬೇಡಿಕೆಗಳನ್ನು ರೂಪಿಸಲಾಗಿದೆ.

ಬೇಡಿಕೆಗಳು:

1. ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆಗೆ ತಿದ್ದುಪಡಿಗಳನ್ನು ಪಾರ್ಲಿಮೆಂಟ್ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಬೇಕು. ಇದುವರೆಗೆ ಕಾಯ್ದೆಯಲ್ಲಿ ಗುರುತಿಸದ ಹೊಸ ಅಪರಾಧಗಳನ್ನು ಸ್ಪಷ್ಟವಾಗಿ ಈ ಕಾಯಿದೆಯೊಳಗೆ ಸೇರಿಸಬೇಕು. ಎಸ್.ಸಿ/ಎಸ್.ಟಿ ಮೇಲಿನ ದೌರ್ಜನ್ಯ ಮತ್ತು ದಾಳಿಗಳಿಗೆ ಶಿಕ್ಷೆಯನ್ನು ಮತ್ತಷ್ಟು ತೀವ್ರಗೊಳಿಸಬೇಕು.
2. ದೌರ್ಜನ್ಯಕ್ಕೊಳಗಾದವರಿಗೆ ಪರಿಹಾರವನ್ನು ಹೆಚ್ಚಿಸಬೇಕು. ಘಟನೆ ನಡೆದ ತಕ್ಷಣ ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಬೇಕು.
3. ಹೆಚ್ಚು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಕಾಲ ಮಿತಿಯೊಳಗೆ ಕೇಸುಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಶೇಷ ಸಾರ್ವಜನಿಕ ಅಭಿಯೋಜಕರನ್ನು (ಪಬ್ಲಿಕ್ ಪ್ರಾಸಿಕ್ಯೂಟರ್) ನೇಮಿಸಬೇಕು.
4. ಎಲ್ಲಾ ಜಾತಿ ತಾರತಮ್ಯ ಮಾಡುವುದನ್ನು ನಾಗರಿಕ ಅಪರಾಧವೆಂದು ಪರಿಗಣಿಸಬೇಕು ಮತ್ತು ಅದಕ್ಕೆ ಅನುಗುಣವಾಗಿ ವಿಚಾರಣೆ ನಡೆಸಬೇಕು.
5. ದೌರ್ಜನ್ಯಕ್ಕೊಳಗಾದವರು ಮತ್ತು ಸಾಕ್ಷಿದಾರ ಹಕ್ಕುಗಳನ್ನು ಕಾಯಿದೆಯಲ್ಲಿ ವಿವರಿಸಬೇಕು.
6. ದಲಿತರ, ಮೇಲೆ ದೌರ್ಜನ್ಯ ಒಳಗಾದ ನಡೆಯುವುದನ್ನು ತಡೆಯುವಲ್ಲಿ

ಪುಟ 12 ಕ್ಕೆ

ಭೂ ಸಂಬಂಧಗಳು......

ಪುಟ 5 ರಿಂದ

ಪರಿಹಾರ ವಿತರಿಸಲು ಒತ್ತಾಯಿಸಿ, ಸರ್ಕಾರದ ರೈತ ವಿರೋಧಿ ಭೂನೀತಿಯನ್ನು ಕೈಬಿಡಬೇಕೆಂದು ಆಗ್ರಹಿಸಲಾಗುವುದು ಎಂದು ಅವರು ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು.ಬಸವರಾಜುರವರು ಪ್ರಾಸ್ತಾವಿಕ ಮಾತನಾಡುತ್ತಾ, ಮೊದಲು ಸರ್ಕಾರಗಳು ಆಹಾರಕ್ಕಾಗಿ ಕೃಷಿ ಮಾಡಿ ಎಂದು ಕರೆಕೊಟ್ಟವು. ನಂತರ ರಫ್ತಿಗಾಗಿ ಕೃಷಿ ಮಾಡಿ ಎಂದು ತಿಳಿಸಿದವು. ಈಗ ನೀವು ವ್ಯವಸಾಯವನ್ನು ಮಾಡಬೇಡಿ, ಕಂಪನಿಗಳು ಮಾಡುತ್ತವೆ ಎಂದು ತಿಳಿಸುತ್ತಿವೆ. ಸರ್ಕಾರದ ಧೋರಣೆಗಳು ಈ ರೀತಿ ಆದ-ರೆ ಕೃಷಿ ನಂಬಿರುವವರ ಪಾಡೇನು ಎಂದು ಪ್ರಶ್ನಿಸಿದರು.

ಕೆಪಿಆರ್‌ಎಸ್ ರಾಜ್ಯ ಸಮಿತಿ ಸದಸ್ಯರಾದ ವನಜ ಸ್ವಾಗತಿಸಿದರೆ ರಾಜ್ಯ ಉಪಾಧ್ಯಕ್ಷರಾದ ಗೋಪಿನಾಥ್ ಕಾರ್ಯಕ್ರಮ ನಿರೂಪಿಸಿದರು. ಯಾದವಶೆಟ್ಟಿ-ರಾಜ್ಯ ಉಪಾಧ್ಯಕ್ಷರು ಎಲ್ಲರಿಗೂ ವಂದಿಸಿದರು. ಕಾರ್ಯಕ್ರಮದಲ್ಲಿ ಸಂಘಟನೆಯ ಉಪಾಧ್ಯಕ್ಷರುಗಳಾದ ನಿತ್ಯಾನಂದಸ್ವಾಮಿ, ಜಿ.ಎನ್. ನಾಗರಾಜ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

'ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿ ಮಾಡಿ'- ವರದರಾಜನ್ ಆಗ್ರಹ

ರೈತರು ಬೆಳೆದ ಬೆಳೆಗೆ ಉತ್ಪಾದನಾ ವೆಚ್ಚ ಜೊತೆಗೆ ಶೇ. 50 ರಷ್ಟು ಹೆಚ್ಚುವರಿ ಸೇರಿಸಿ ಬೆಲೆ ನಿಗದಿ ಮಾಡುವಂತೆ ಶಿಫಾರಸ್ಸು ಮಾಡಿರುವ ಎಂ.ಎಸ್.ಸ್ವಾಮಿನಾಥನ್ ವರದಿಯನ್ನು ಜಾರಿ ಮಾಡುವಂತೆ ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರಾದ ಕಾಂ. ಕೆ. ವರದರಾಜನ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಲಕ್ಷ ಕೋಟಿಗಳಲ್ಲಿ ಭ್ರಷ್ಟಾಚಾರ ನಡೆಸುತ್ತಿರುವ ಪ್ರಧಾನಮಂತ್ರಿ ಮನಮೋಹನ ಸಿಂಗ್ ನೇತೃತ್ವದ ಯುಪಿಎ-2 ಸರ್ಕಾರ ಏನೂ ನಡದೇ ಇಲ್ಲವೆಂಬಂತೆ ಮೌನವಾಗಿದೆ. ಅವರು ರೈತರ ಸಂಕಷ್ಟಗಳಿಗೆ ಕುರುಡರಾಗಿದ್ದಾರೆ. ಒಂದು ಲಕ್ಷದ 76 ಸಾವಿರದ ಕೋಟಿ ರೂ.ಗಳ 2ಜಿ ಹಗರಣದ ಬಗ್ಗೆ ಮಾತನಾಡದ ಅವರು ತಮಗೆ ಸೋನಿಯಾಜೀ, ರಾಹುಲ್‌ಜೀ ಈ ಎರಡು 'ಜಿ' ಗಳು ಮಾತ್ರ ಗೊತ್ತು ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಕಟಕಿಯಾಡಿದರು.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಪ್ರಕಾರವೇ ಗಂಟೆಗೆ ಎರಡು ರೈತ ಆತ್ಮಹತ್ಯೆಗಳು ನಡೆಯುತ್ತಿವೆ. ರೈತ ವ್ಯವಸಾಯ ಮಾಡಲು ಬಳಸುವ ಹೂಡಿಕೆ ವೆಚ್ಚಗಳು ನಾಗಲೋಟದಲ್ಲಿ ಏರುತ್ತಿವೆ. ಉದಾಹರಣೆಗೆ ರಸಗೊಬ್ಬರ, ಕೀಟನಾಶಕ, ಬೀಜ, ಡೀಸೆಲ್ ಮತ್ತಿತರ ವೆಚ್ಚಗಳು. ಆದರೆ ಅದೇ ಪ್ರಮಾಣದಲ್ಲಿ ರೈತರ ಬೆಳೆಗಳ ಬೆಲೆ ಏರುತ್ತಿಲ್ಲ. ಇದೇ ಸಂದರ್ಭದಲ್ಲಿ ಹೂಡಿಕೆಗೆ ಬೇಕಾದ ಹಣವನ್ನು ಸರ್ಕಾರ ಒದಗಿಸದೇ ಇರುವುದರಿಂದ ಅನಿವಾರ್ಯವಾಗಿ ಖಾಸಗಿ ಲೇವಾದೇವಿಗಾರರ ಬಳಿ ವಾರ್ಷಿಕ ಶೇ. 36 ರಿಂದ 120 ರ ತನಕ ದುಬಾರಿ ಬಡ್ಡಿ ಪಡೆಯುವಂತಾಗಿದೆ. ಇದರಿಂದ ಸಹಜವಾಗಿ ಸಾಲದ ಸುಳಿಗೆ ಸಿಲುಕುವ ರೈತ ದಾರಿಕಾಣದೇ ಗೌರವವನ್ನು ಕಾಪಾಡಿಕೊಳ್ಳಲು ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಈ ರೀತಿ ಆಗಲು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳೇ ಕಾರಣ ಎಂದು ಹಾರಿಹಾಯ್ದರು.

1991 ರ ಸಂದರ್ಭದಲ್ಲಿ ಈ ನೀತಿ ವಿರೋಧಿಸಿ ಚಳುವಳಿ ನಡೆಸಿದಾಗ ಮತ್ತು ಆ ಕುರಿತು ಪತ್ರ ಬರೆದಿದ್ದಾಗ, ಇದೇ ಮನಮೋಹನ್ ಸಿಂಗ್ ಮತ್ತು ಚಿದಂಬರಂ ರವರುಗಳು ಕಮ್ಯುನಿಸ್ಟರು ಹಳೇ ವಿಚಾರಗಳಿಗೆ ಜೋತು ಬೀಳುವವರು. ಅವರಿಗೆ ಹೊಸ ವಿಷಯಗಳಿಗೆ ತೆರೆದುಕೊಳ್ಳುವುದು ತಿಳಿದಿಲ್ಲ ಎಂದು ಟೀಕಿಸಿ ಭಾರತವನ್ನು ಅಮೇರಿಕಾ ಮಾಡುತ್ತೇವೆ ಎಂದು ಪ್ರತಿಕ್ರಿಯಿಸಿದ್ದರು. ಈಗ ಅಮೇರಿಕದಲ್ಲೇ ಆರ್ಥಿಕ ಬಿಕ್ಕಟ್ಟು ಉಂಟಾಗಿ ಎಡಪಕ್ಷಗಳ ಒತ್ತಡದಿಂದ ತಂದ ಗ್ರಾಮೀಣ ಉದ್ಯೋಗ ಖಾತರಿ ಮಾದರಿಯಲ್ಲಿ ಖಾತರಿ ಉದ್ಯೋಗಕ್ಕಾಗಿ 'ವಾಲ್‌ಸ್ಟ್ರೀಟ್' ಚಳುವಳಿ ನಡೆಸಲಾಗುತ್ತಿದೆ. ಈಗ ಅಮೇರಿಕವೇ ಭಾರತದಂತಾಗಿದೆ ಎಂದು ಹಾಸ್ಯವಾಡಿದ ಅವರು ಈ ದಿವಾಳಿಕೋರ ಆರ್ಥಿಕ ನೀತಿಗಳನ್ನು ಬದಲಾಯಿಸಲು ಒತ್ತಡ ಹೇರಬೇಕು ಎಂದರು.

ಕೋಮುವಾದದ ಸವಾಲಿಗೆ

ಪುಟ 7 ರಿಂದ

ಪ್ರತಿಭಟನೆಯನ್ನು ಆರಂಭಿಸಿದೆ. ಈ ವಾರ ನಡೆಯಲಿರುವ ಈ ಮೈತ್ರಿ ಉತ್ಸವ "ಒಂದು ಧರ್ಮ ಇನ್ನೊಂದಕ್ಕಿಂತ ಉತ್ತಮ ಎಂದು ಹೇಳಲಿಕ್ಕಲ್ಲ" ಎಂದು ಸಂಘಟಕರು ಮತ್ತೆ-ಮತ್ತೆ ಸ್ಪಷ್ಟಪಡಿಸಿದರೂ ಇದನ್ನು ಸಾಮೂಹಿಕ ಮತಾಂತರಕ್ಕೆ ಬಳಸಲಾಗುವುದು ಎನ್ನುತ್ತ ಅದನ್ನು ಬುಡಮೇಲುಗೊಳಿಸುವ ಅಪಾಯವಿದೆ.

ಇವು ಕೇವಲ ಎರಡು ನಿದರ್ಶನಗಳು. ಚುನಾವಣೆಗಳು ಸಮೀಪಿಸಿದಂತೆ ಇಂತಹ ಘಟನೆಗಳು ತ್ವರಿತವಾಗಿ ಹೆಚ್ಚಲಿವೆ. ಧಾರ್ಮಿಕ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲಿಕ್ಕಾಗಿ ಮತ್ತು ಕೋಮುವಾದಿ ಸೆಳೆತಗಳನ್ನು ಬಡಿದೆಬ್ಬಿಸುವ ಗುರಿ ಹೊಂದಿರುವ ಇಂತಹ ಧಾರ್ಮಿಕ ಹಗೆತನದ ಪ್ರದರ್ಶನ ಸಮ್ಮಿಶ್ರ ಸಂಸ್ಕೃತಿಯ ಭಾರತದ ವಿಕಾಸದ ಹಂದರಕ್ಕೇ ವಿರುದ್ಧವಾದದ್ದು. ಇಂತಹ ಪ್ರವೃತ್ತಿಗಳನ್ನು ಖಂಡಿಸುತ್ತ ಪ್ರಸಿದ್ಧ ದೇಶಪ್ರೇಮೀ ಲೇಖಕ ಸುಬ್ರಮಣ್ಯ ಭಾರತಿ ಹೇಳುತ್ತಾರೆ:

ಎಲೈ ಮೂರ್ಖರೇ,
ದ್ವೇಷದ ಬೆಂಕಿಗೆ ತುಪ್ಪ ಸುರಿಯಲು
ದೇವರ ಹೆಸರುಗಳ ಬಳಸುವರು
ಎಲ್ಲ ಅಸ್ತಿತ್ವಗಳಲ್ಲಿ ಅವು ಇವೆ
ಮತ್ತು ಎಲ್ಲದರಲ್ಲೂ ಒಂದೇ- ಅದು ದೇವರು
ಬೆಂಕಿಯನ್ನು ಪೂಜಿಸುವ ಹಿಂದೂಗಳು
ಪವಿತ್ರ ಸ್ಥಳದತ್ತ ಮುಖಮಾಡಿ
ಪ್ರಾರ್ಥಿಸುವ ಮುಸ್ಲಿಮರು
ಪವಿತ್ರ ಶಿಲುಬೆಯ ಮುಂದೆ
ಮೊಣಕಾಲೂರುವ ಕ್ರೈಸ್ತರು
ಎಲ್ಲರೂ ಪೂಜಿಸುವ ದೇವರು
ಎಲ್ಲದರೊಳಗೂ ಇರುವ ದೇವರು
ಸಮಸ್ತ ಭೂಮಿಗೆ ಒಬ್ಬನೇ ಆದ ದೇವರು
ಆ ಹೆಸರಲ್ಲಿ ನಮ್ಮೊಳಗೇ
ಹೊಡೆದಾಡಲು ಕಾರಣವೇನಿಲ್ಲ

ಸ್ವಾಮಿ ವಿವೇಕಾನಂದರು, ಸಪ್ಟಂಬರ್ 27, 1893ರಂದು ಧರ್ಮಗಳ ಸಂಸತ್ತಿನ ಅಂತಿಮ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಜಾಗೃತಗೊಳಿಸುವ ತನ್ನ ಭಾಷಣದ ಕೊನೆಯಲ್ಲಿ ಹೀಗೆ ಹೇಳುತ್ತಾರೆ: "ಈ ಧರ್ಮಗಳ ಸಂಸತ್ತು ಜಗತ್ತಿಗೆ ಏನಾದರೂ ತೋರಿಸಿದ್ದರೆ ಅದು: ಪಾವಿತ್ರ್ಯ, ಶುದ್ಧತೆ ಮತ್ತು ದಾನಶೀಲತೆ ಕೇವಲ ಜಗತ್ತಿನ ಯಾವುದೇ ಚರ್ಚಿನ ಬಳಿ ಮಾತ್ರವೇ ಇರುವಂತದ್ದಲ್ಲ. ಪ್ರತಿಯೊಂದು ಧಾರ್ಮಿಕ ವ್ಯವಸ್ಥೆಯೂ ಅತ್ಯುನ್ನತ ಚಾರಿತ್ರ್ಯದ ಪುರುಷರನ್ನು, ಮಹಿಳೆಯರನ್ನು ಉಂಟು ಮಾಡಿದೆ. ಈ ಸಾಕ್ಷ್ಯದ ಎದುರು, ಯಾರಾದರೂ ಕೇವಲ ತನ್ನ ಧರ್ಮ ಮಾತ್ರವೇ ಬದುಕುಳಿಯಬೇಕು, ಉಳಿದವೆಲ್ಲ ನಾಶವಾಗಬೇಕು ಎಂದು ಕನಸು ಕಾಣುವುದಾದರೆ, ಅಂತವರ ಬಗ್ಗೆ ನಾನು ಹೃದಯಾಂತರಾಳದಿಂದ ಕನಿಕರ ಪಡುತ್ತೇನೆ, ಮತ್ತು ಬೇಗನೇ, ಪ್ರತಿರೋಧದ ನಡುವೆಯೂ, ಪ್ರತಿಯೊಂದು ಧರ್ಮದ ಪತಾಕೆಯ ಮೇಲೂ ಬರೆದಿರುತ್ತದೆ: 'ನೆರವು, ಹೊಡೆದಾಟ ಅಲ್ಲ', 'ಸಮ್ಮಿಲನ, ನಾಶ ಅಲ್ಲ', 'ಸಾಮರಸ್ಯ ಮತ್ತು ಶಾಂತಿ, ವೈಮನಸ್ಯ ಅಲ್ಲ' ಎಂದು ಬೊಟ್ಟು ಮಾಡಿ ಅಂತವರಿಗೆ ತೋರಿಸುತ್ತೇನೆ."

ಕೋಮುವಾದ ಸವಾಲು ಹಾಕಿರುವುದು ಭಾರತೀಯ ನಾಗರಿಕತೆಯ ಈ ಸಮ್ಮಿಶ್ರ ಭಾವದ ವಿಕಾಸವನ್ನು, ಇದರ ಸತ್ವವನ್ನೇ ಅದು ನಾಶಮಾಡಬಯಸುತ್ತಿದೆ. ಇಂತಹ ಸಂದರ್ಭದಲ್ಲಿ ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ನೆಚ್ಚಿರುವ ಎಲ್ಲ ದೇಶಪ್ರೇಮಿ ಭಾರತೀಯರು ಈ ಸವಾಲನ್ನು ಎದುರಿಸಲು ಒಂದುಗೂಡಬೇಕಾಗಿದೆ. ಕೋಮುವಾದದ ವಿರುದ್ಧ ಜನತೆಯ ಐಕ್ಯತೆಗೆ ಕರೆ ಕೊಡುವ ಸಮಾವೇಶ ಈ ದಿಕ್ಕಿನಲ್ಲಿ ಒಂದು ಪ್ರಯತ್ನ. ಮುಂಬರುವ ದಿನಗಳಲ್ಲಿ ಇದನ್ನು ಮತ್ತಷ್ಟು ಬಲಪಡಿಸುವ ಅಗತ್ಯ ಇದೆ.

ಎಸ್.ಸಿ/ಎಸ್.ಟಿ ದೌರ್ಜನ್ಯ

ಪುಟ 11 ರಿಂದ

ವಿಫಲವಾದ ಪೊಲೀಸ್ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಎಸ್.ಸಿ/ಎಸ್.ಟಿ ಕೇಸುಗಳನ್ನು ರಾಜಿ ಮಾಡಲು ಒತ್ತಾಯಿಸುವ ಅಧಿಕಾರಿಗಳ ಮೇಲೆ ಕೂಡ ಕ್ರಮ ಜರುಗಿಸಬೇಕು.

7. ಎಲ್ಲಾ ದಲಿತರಿಗೆ ಮತ್ತು ಬುಡಕಟ್ಟು ಜನಾಂಗದವರಿಗೂ ಅವರು ಯಾವ ಧರ್ಮಕ್ಕೆ ಸೇರಿದವರು ಆಗಿದ್ದರೂ, ದೌರ್ಜನ್ಯ ತಡೆ ಕಾಯ್ದೆಯನ್ನು ಅವರಿಗೆ ಅನ್ವಯಿಸತಕ್ಕದ್ದು.
8. ಎಸ್.ಸಿ.ಎಸ್.ಪಿ(ವಿಶೇಷ ಘಟಕ ಯೋಜನೆ) ಮತ್ತು ಟಿ.ಎಸ್.ಪಿ ಬುಡಕಟ್ಟು ವಿಶೇಷ ಯೋಜನೆಗೆ ಶಾಸನಬದ್ಧ ಸ್ಥಾನ ನೀಡಬೇಕು. ಇವುಗಳಿಗಾಗಿ ಭಾರತ ಸರ್ಕಾರ ಆದಷ್ಟು ಬೇಗ ಶಾಸನವೊಂದನ್ನು ತರಬೇಕು.
9. ಎಸ್.ಸಿ/ಎಸ್.ಟಿ ಆರ್ಥಿಕ ಸಬಲೀಕರಣವನ್ನು ಖಾತ್ರಿಪಡಿಸಬೇಕು. ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಖಾಸಗೀಕ್ಷೇತ್ರಕ್ಕೂ ಮೀಸಲಾತಿ ವಿಸ್ತರಿಸಿ ಜಾರಿಗೊಳಿಸಬೇಕು. ಭೂಮಿ ಇಲ್ಲದ ಪ್ರತಿಯೊಂದು ಎಸ್.ಸಿ/ಎಸ್.ಟಿ ಕುಟುಂಬಕ್ಕೆ ಮತ್ತು ಭೂಮಿ ಇಲ್ಲದ ಇತರೆ ಬಡವರಿಗೆ ಭೂಮಿ ನೀಡಬೇಕು.
10. ವಿವಿಧ ಪರಿವೀಕ್ಷಣ (ಮಾನೀಟರಿ ಕಮಿಟಿ)ಸಮಿತಿಗಳು ಪರಸ್ಪರ ಸಮನ್ವಯತೆಯಿಂದ ಕೆಲಸ ನಿರ್ವಹಿಸಬೇಕು ಮತ್ತು ಹೆಚ್ಚುತ್ತಿರುವ ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆಗಟ್ಟಲು ಸೂಕ್ತ ಸಲಹೆ ಮಾಡಬೇಕು. ಇದನ್ನು ಪರಿವೀಕ್ಷಣ(ಮಾನಿಟರಿ ಕಮಿಟಿ) ಸಮಿತಿ ಸಭೆಗಳನ್ನು ಕಡ್ಡಾಯ ಗೊಳಿಸಬೇಕು.
11. ಅಂತರ್‌ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಬೇಕು. ಅವರಿಗೆ ಆರ್ಥಿಕ ಸಹಾಯ ನೀಡಬೇಕು ಮಾತ್ರವಲ್ಲ ಅವರಿಗೆ ರಕ್ಷಣೆ ನೀಡಬೇಕು. ಅವರ ಮಕ್ಕಳಿಗೆ ಶಿಕ್ಷಣ ಹಾಗೂ ಉದ್ಯೋಗ ಒದಗಿಸಬೇಕು. ಯಾವುದೇ ಸಂದರ್ಭದಲ್ಲಿ ಮಹಿಳೆಯನ್ನು ಎಸ್.ಸಿ. ಎಂದು ಪರಿಗಣಿಸಬೇಕು.
12. ಜಾತಿ ತಾರತಮ್ಯ ಅಸ್ಪೃಶ್ಯತೆ ಆಚರಣೆ ಮತ್ತು ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಸರ್ಕಾರ ವಿಶಾಲವಾದ ಪ್ರಚಾರಾಂದೋಲನದ ನಡೆಸಬೇಕು. ದೌರ್ಜನ್ಯ ತಡೆ ಕಾಯಿದೆ ಬಗ್ಗೆ ದಲಿತರಲ್ಲಿ ತಿಳುವಳಿಕೆ ಮೂಡಿಸಲು ಅಭಿಯಾನ ನಡೆಸಬೇಕು.

ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕೆ. ವರದರಾಜನ್ ಕಾರ್ಯಗಾರದ ಸಮಾರೋಪದಲ್ಲಿ ಮಾತನಾಡಿ ಸಂಗಾತಿಗಳು ತಾವು ತಮ್ಮ ವ್ಯಾಪ್ತಿಯಲ್ಲಿ ದಲಿತರ ಪರಿಸ್ಥಿತಿಗಳ ಬಗ್ಗೆ ಅಭ್ಯಾಸ ಮಾಡಬೇಕು. ದಲಿತರು ಸ್ಥಳೀಯವಾಗಿ ಎದುರಿಸುತ್ತಿರುವ ದೌರ್ಜನ್ಯ, ಸಮಸ್ಯೆಗಳಿಗಾಗಿ ಹೋರಾಟಗಳನ್ನು ಸಂಘಟಿಸಬೇಕು. ಇಲ್ಲವಾದರೆ ನಾವು ಕ್ರಾಂತಿಕಾರಿ ಚಳುವಳಿ ಮುಂದುವರಿಸಲು ಸಾಧ್ಯವಾಗುವುದಿಲ್ಲ. ನಾವು ಎಲ್ಲಾ ಪ್ರಗತಿಪರ ವಿಭಾಗಗಳನ್ನು ಈ ಚಳುವಳಿ ಜೊತೆ ಬೆರೆಸಬೇಕು. ಎಲ್ಲಾ ಕೈಗಳು ಒಟ್ಟಿಗೆ ಸೇರಿ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸಬೇಕಾಗಿದೆ. ಮೇಲಿನ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಡಿಸೆಂಬರ್ ಒಳಗೆ ಜಿಲ್ಲಾ, ತಾಲೂಕ್ ಮಟ್ಟದಲ್ಲಿ ಕಾರ್ಯಗಾರಗಳನ್ನು, ಸಮಾವೇಶಗಳನ್ನು ನಡೆಸಿ ಸಹಿಸಂಗ್ರಹ ಆಂದೋಲನ ನಡೆಸಬೇಕು ಎದ್ದರು.

ವರದಿ : ಗೋಪಾಲಕೃಷ್ಣ ಅರಳಹಳ್ಳಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ನಮ್ಮ ಆಹಾರಭದ್ರತಾ ಕಾನೂನಿಗೆ ಡಬ್ಲ್ಯುಟಿಒದ ಆಕ್ಷೇಪ: ಸಾರ್ವಭೌಮತೆಗೆ ಸವಾಲು ಬಂದರೂ ಪ್ರತಿಕ್ರಿಯಿಸಲಾರದ ಸರಕಾರ

ಎನ್.ಕೆ. ವೇದರಾಜ

ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಯ ಮಹಾನಿರ್ದೇಶಕ ಭಾರತದ ಆಹಾರ ಭದ್ರತಾ ಕಾನೂನಿನ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. ವಾಸ್ತವವಾಗಿ ಅವರು ಸಬ್ಸಿಡಿ ದರಗಳಲ್ಲಿ ಆಹಾರ ಧಾನ್ಯಗಳ ವಿತರಣೆ ಮತ್ತು ಅದಕ್ಕಾಗಿ ಧಾನ್ಯ ಖರೀದಿಯ ಬಗ್ಗೆ ಅಮೆರಿಕಾ ಮತ್ತು ಇತರ ಮುಂದುವರೆದ ಪಾಶ್ಚಿಮಾತ್ಯ ದೇಶಗಳ ಆಳರಸರ ಆಕ್ಷೇಪವನ್ನು ಆತಂಕದ ರೂಪದಲ್ಲಿ ವ್ಯಕ್ತಪಡಿಸಿದ್ದಾರಷ್ಟೇ. ಅವರು ಭಾರತದ ದೊಡ್ಡ ಕಾರ್ಪೊರೇಟುಗಳ ಸಂಸ್ಥೆ ಸಿಐಐ ಹಾಗೂ ಫಿಕಿ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ಈ 'ಆತಂಕ' ವ್ಯಕ್ತಪಡಿಸಿದರು.

ಭಾರತ ತನ್ನ ಬಡಜನರಿಗೆ ಆಹಾರ ಭದ್ರತೆಯನ್ನು ಒದಗಿಸಲು ಸಬ್ಸಿಡಿ ದರಗಳಲ್ಲಿ ಆಹಾರ ಖರೀದಿಸಿ ವಿತರಿಸಿದರೆ ವಿದೇಶೀಯರಿಗೇಕೆ ಆಕ್ಷೇಪ, ಆತಂಕ? ನಮ್ಮ ದೇಶದೊಳಗೆ ನಮಗೆ ಸರಿಯೆನಿಸಿದ ಕಾನೂನು ತರಲು ಇವರ ಅಪ್ಪಣೆ ಬೇಕೆ? ಇದು ನಮ್ಮ ಸಾರ್ವಭೌಮತೆಯ ಮೇಲೆ ನಡೆಸಿರುವ ಆಕ್ರಮಣವಲ್ಲವೇ? ಆದರೂ ಇದಕ್ಕೆ ಯುಪಿಎ–2 ಸರಕಾರ ಪ್ರತ್ಯುತ್ತರ ನೀಡಲಿಲ್ಲ. ಬದಲಿಗೆ ಈ ಬಗ್ಗೆ 'ಮಾತುಕಕತೆ' ನಡೆಸಲು ಮುಂದಾಗಿದೆ ಎಂದು ವರದಿಯಾಗಿದೆ.

ಹೌದು, ಎರಡು ದಶಕಗಳ ಹಿಂದೆ ನಮ್ಮ ಆಳರಸರು ಸಹಿ ಹಾಕಿದ ಗ್ಯಾಟ್ ಒಪ್ಪಂದದ ಪ್ರಕಾರ ಅಪ್ಪಣೆ ಬೇಕು. ಡಬ್ಲ್ಯುಟಿಒ ಸ್ಥಾಪನೆಗೊಂಡದ್ದು ಈ ಒಪ್ಪಂದದ ಅಡಿಯಲ್ಲಿ. ಇದರ ಭಾಗವಾಗಿ 'ಕೃಷಿ ಒಪ್ಪಂದ' ಎಂಬುದಿದೆ.

ಇದರಲ್ಲಿ ಕೃಷಿ ಸಬ್ಸಿಡಿಗಳನ್ನು ಎರಡು ವಿಭಾಗಗಳಾಗಿ ಮಾಡಲಾಗಿದೆ, ಒಂದು, ವ್ಯಾಪಾರವನ್ನು ವಿರೂಪಗೊಳಿಸುವಂತದ್ದು ಮತ್ತು ಎರಡು, ವಿರೂಪಗೊಳಿಸದಂತದ್ದು. ಮೊದಲನೆ ವಿಧದ ಸಬ್ಸಿಡಿಗಳನ್ನು ಕಡಿಮೆ ಮಾಡುತ್ತ ಕ್ರಮೇಣ ಇಲ್ಲದಂತೆ ಮಾಡಬೇಕು, ಆದರೆ ಎರಡನೇ ವಿಧದ ಸಬ್ಸಿಡಿಗಳನ್ನು 'ಹಸಿರು ಪೆಟ್ಟಿಗೆ'ಗೆ ಸೇರಿದ್ದರೆ ಅವನ್ನು ಮುಂದುವರೆಸಬಹುದು. ಈ 'ಹಸಿರು ಪೆಟ್ಟಿಗೆ'ಯಲ್ಲಿ ಇಂತಹ ಸಬ್ಸಿಡಿಗಳ ಪಟ್ಟಿ ಮಾಡಲಾಗಿದೆ. ಪಾಶ್ಚಿಮಾತ್ಯ ಮುಂದುವರೆದ ದೇಶಗಳು ಇದರಲ್ಲಿ ಎಂತಹ ಕೈಚಳಕ ನಡೆಸಿದವೆಂದರೆ ಅಭಿವೃದ್ಧಿಶೀಲ ದೇಶಗಳ ಕೃಷಿ ಸಬ್ಸಿಡಿಗಳಲ್ಲಿ ಬಹುಪಾಲು ಮೊದಲ ವಿಧಕ್ಕೆ ಸೇರುತ್ತವೆ, ಅಭಿವೃದ್ಧಿ ಹೊಂದಿರುವ ಅಮೆರಿಕಾದ ಮತ್ತು ಯುರೋಪಿನ ದೇಶಗಳ ಕೃಷಿ ಸಬ್ಸಿಡಿಗಳಲ್ಲಿ ಹೆಚ್ಚಿನವು ಎರಡನೆ ವಿಧ–ಕ್ಕೆ ಸೇರುತ್ತವೆ. ಈ ನಗ್ನ ಪಕ್ಷಪಾತವನ್ನೇ ಎಡಪಕ್ಷಗಳು ಬಲವಾಗಿ ವಿರೋಧಿಸಿದ್ದು. ಆದರೆ ನಮ್ಮ ಆಳುವ ವರ್ಗಗಳು ಅದ–ಕ್ಕೆ ಒಪ್ಪಿಕೊಂಡು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಒಪ್ಪಂದದಲ್ಲಿ ನಮ್ಮಂತಹ ದೇಶಗಳು ಕೃಷಿಗೆ ಕೊಡುವ ಸಬ್ಸಿಡಿಗಳ ಮೊತ್ತದ ಮೇಲೆ ಮಿತಿ ಹಾಕಲಾಯಿತು. ಸರಕಾರ ಕೊಡುವ ಬೆಂಬಲ ಬೆಲೆಯ ಮೊತ್ತವನ್ನು 'ಒಟ್ಟು ಬೆಂಬಲದ ಅಳತೆ(ಎಎಂಎಸ್)' ಎಂದು ಹೇಳಲಾಗಿದ್ದು ಭಾರತದಂತಹ ದೇಶಗಳ ಎಎಂಎಸ್ ಒಟ್ಟು ಉತ್ಪಾದನೆಯ 10ಶೇ. ಮೀರುವಂತಿಲ್ಲ.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಈ ಸಬ್ಸಿಡಿ ಮೊತ್ತವನ್ನು ಲೆಕ್ಕ ಹಾಕುವುದು ಈಗಿನ ಮಾರುಕಟ್ಟೆ ದರಗಳ ಆಧಾರದಲ್ಲಿ ಅಲ್ಲ, ಬದಲಿಗೆ ಒಪ್ಪಂದದಲ್ಲಿ ಹೇಳಿರುವ 'ಬಾಹ್ಯ ಆಧಾರ ಬೆಲೆ'(ಇಆರ್‌ಎಫ್)ಗಳ ಆಧಾರದಲ್ಲಿ. ಈ ಇಆರ್‌ಎಫ್ 1986–87ರ ಅಂತರ್ರಾಷ್ಟ್ರೀಯ ಬೆಲೆಗಳ ಆಧಾರದಲ್ಲಿದೆ.

ಇದರ ಪರಿಣಾಮವಾಗಿಯೇ ಈಗ ನಮ್ಮ ಆಹಾರ ಭದ್ರತಾ ಕಾನೂನು ಡಬ್ಲ್ಯುಟಿಒ ನಿಯಮಗಳನ್ನು ಉಲ್ಲಂಘಿಸುತ್ತಿರುವುದಕ್ಕೆ ಶಿಕ್ಷೆ ಅನುಭವಿಸಬೇಕಾಗಬಹುದು ಎಂಬುದು ಡಬ್ಲ್ಯುಟಿಒ ಮಹಾನಿರ್ದೇಶಕರ 'ಆತಂಕ'!ಪಾಪ!


'ಕೃಷಿ ಒಪ್ಪಂದ'ದಲ್ಲಿನ ಈಗ ಹಳಸಲಾಗಿರುವ ಅಂಶಕ್ಕೆ ತಿದ್ದುಪಡಿ ತರಲು ಭಾರತವೂ ಸೇರಿದಂತೆ 33 ದೇಶಗಳು ಆಗಲೇ ಪ್ರಯತ್ನ ನಡೆಸಿದ್ದವು. ಆಹಾರ ಭದ್ರತೆಗಾಗಿ ಧಾನ್ಯ ಖರೀದಿಗೆ ಖರ್ಚು ಮಾಡಬೇಕಾದ ಹೆಚ್ಚಿನ ಮೊತ್ತವನ್ನು 'ವ್ಯಾಪಾರವನ್ನು ವಿರೂಪಗೊಳಿಸುವ ' ವಿಧ'ದಿಂದ ಹೊರಗಿಡಬೇಕೆಂಬ ತಿದ್ದುಪಡಿ ತರುವುದು ಅವರ ಆಶಯ. ಆದರೆ ಮುಂದುವರೆದ ಬಂಡವಾಳಶಾಹಿ ದೇಶಗಳು ಅದಕ್ಕೆ ಒಪ್ಪಿಲ್ಲ.

ಈಗ ಭಾರತದ ಡಬ್ಲ್ಯುಟಿಒ ಪ್ರತಿನಿಧಿಗಳು ಸಬ್ಸಿಡಿ ಲೆಕ್ಕ ಹಾಕುವಾಗ 1986–87ರ ಬೆಲೆಗಳ ಬದಲು ಪ್ರಸಕ್ತ ಮಾರುಕಟ್ಟೆ ಬೆಲೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ. ಆದರೆ ಯುಪಿಎ–2 ಸರಕಾರ ಈ 'ಸಮಸ್ಯೆ'ಯಿಂದ ಸದ್ಯಕ್ಕೆ ಹೊರಬರಲು ಈ ಒಪ್ಪಂದದಲ್ಲಿನ 'ಶಾಂತಿ ಪರಿಚ್ಛೇದ'ವನ್ನು ಬಳಸುವ ಸಲಹೆಯನ್ನು ಅನುಸರಿಸುವಂತೆ ಕಾಣುತ್ತದೆ. ಅಂದರೆ ಅಭಿವೃದ್ಧಿಶೀಲ ದೇಶಗಳ ಸಮಸ್ಯೆಯನ್ನು ಪರಿಹಾರಕ್ಕೆ ಐಕ್ಯ ಪ್ರಯತ್ನ ನಡೆಸುವ ಬದಲು ಭಾರತದ ಮಟ್ಟಿಗೆ ಮಾತ್ರ ಅಮೆರಿಕಾದೊಂದಿಗೆ ರಾಜಿ ಮಾಡಿಕೊಂಡು ಸದ್ಯಕ್ಕೆ ಪರಿಹರಿಸಿಕೊಳ್ಳುವ ಮಾರ್ಗ ಎಂಬುದು ಕೆಲವು ವಿಶ್ಲೇಷಕರ ಆತಂಕ.

ಇದಕ್ಕೆ ಕೂಡ ಒಪ್ಪಲು ಅಮೆರಿಕಾ ಶರತ್ತು ಹಾಕುತ್ತಿದೆ– ಅಂದರೆ ಭಾರತದ ಮಾರುಕಟ್ಟೆಯಲ್ಲಿ ಅಮೆರಿಕಾಕ್ಕೆ ಇನ್ನಷ್ಟು ಅವಕಾಶಗಳನ್ನು ತೆರೆದು ಕೊಡಬೇಕು ಎಂಬುದು. ಇದಕ್ಕೆ ಯುಪಿಎ–2 ಸರಕಾರದ ತಕರಾರು ಏನೂ ಇಲ್ಲ ಎಂದು ವಾಣಿಜ್ಯ ಮಂತ್ರಿಗಳ ಹೇಳಿಕೆ ಸೂಚಿಸಿದೆ.

ಒಟ್ಟಿನಲ್ಲಿ ವಿಶ್ಲೇಷಕರ ಪ್ರಕಾರ, 2014ರ ಚುನಾವಣೆಗಳ ಮೇಲೆ ಕಣ್ಣಿಟ್ಟು ಈ ಕಾನೂನು ತಂದ ಯುಪಿಎ–2 ಸರಕಾರದ ಗುರಿ ಸದ್ಯಕ್ಕೆ ಇದಕ್ಕಿರುವ ಅಡ್ಡಿ–ಆತಂಕಗಳನ್ನು 2014ರ ಚುನಾವಣೆಗಳು ಮುಗಿಯುವ ವರೆಗೆ ತಾತ್ಕಾಲಿಕವಾಗಿ ನಿವಾರಿಸಿಕೊಳ್ಳುವುದು. ಹಾಗೆ ಮಾಡುವಾಗ ತಮ್ಮ ದೇಶದ ಬಡವರಿಗೆ ಆಹಾರ ಭದ್ರತೆ ಒದಗಿಸುವ ಅಭಿವೃದ್ಧಿಶೀಲ ದೇಶಗಳ ಸಾರ್ವಭೌಮ ಅಧಿಕಾರವನ್ನು ಬಲಿಕೊಟ್ಟರೂ ಪರವಾಗಿಲ್ಲ! ಅಮೆರಿಕಾ ತನ್ನ ವ್ಯಾಪಾರಕ್ಕೆ ಇನ್ನಷ್ಟು ರಿಯಾಯ್ತಿಗಳನ್ನು ಕಿತ್ತುಕೊಳ್ಳಲು ಈ ಅವಕಾಶವನ್ನು ಬಳಸಿಕೊಳ್ಳುತ್ತದೆ ಎಂಬ ಬಗ್ಗೆಯಂತೂ ಈ ನವ–ಉದಾರವಾದಿ ಧೋರಣೆಯ ಸರಕಾರಕ್ಕೆ ಯಾವ ತಕರಾರೂ ಇಲ್ಲ.

ಈ ಬಗ್ಗೆ 'ಪ್ರಮುಖ ಪ್ರತಿಪಕ್ಷಕ್ಕೆ ಮತ್ತು ಅದರ ಪ್ರಧಾನಿ ಪಟ್ಟಾಕಾಂಕ್ಷಿಗೆ ಕೂಡಾ ಯಾವುದೇ ಆತಂಕ ಅಥವ ತಕರಾರು ಏನೂ ಇದ್ದಂತಿಲ್ಲ!



ಕಲ್ಲಿದ್ದಲು ಹಗರಣ: ಅಧಿಕಾರಿ,ಉದ್ಯಮಿಯ ಮೇಲೆ ಎಫ್‌ಐಆರ್ ಆಳುವ ವರ್ಗಗಳ ರಾಜಕಾರಣಿಗಳಿಗೆ ಕಸಿವಿಸಿ!

ಸಿಬಿಐ ಸುಪ್ರಿಂ ಕೋರ್ಟ್ ನಿರ್ದೇಶನದ ಪ್ರಕಾರ ಕಲ್ಲಿದ್ದಲು ಬ್ಲಾಕ್ ನೀಡಿಕೆಯ ಬಗ್ಗೆ ತನ್ನ ತನಿಖೆಗಳು ಯಾವ ಹಂತದಲ್ಲಿವೆ ಎಂಬುದರ ವರದಿಯನ್ನು ಮೊಹರಾದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದೆ. ಅದರಲ್ಲಿ ಅದು ಇತ್ತೀಚೆಗೆ ಸಲ್ಲಿಸಿದ 14ನೇ ಎಫ್‌ಐಆರ್‌ನ ವಿವರಗಳನ್ನು ಮತ್ತು ಉಳಿದ ತನಿಖೆಗಳಲ್ಲಿ ಆಗಿರುವ ಪ್ರಗತಿಯನ್ನು ಪ್ರಸ್ತುತ ಪಡಿಸಿರುವ ನಿರೀಕ್ಷೆಯಿದೆ. ಇದಕ್ಕೆ ಮೊದಲು ಆಗಸ್ಟ್ 29ರಂದು ನಡೆದ ವಿಚಾರಣೆಯ ವೇಳೆ ಈ ತನಿಖೆ ಬಹಳ ನಿಧಾನ ಗತಿಯಲ್ಲಿ 'ಮೊದಲ ಗೇರಿನಲ್ಲೇ' ಸಾಗುತ್ತಿದೆ ಎಂದು ನ್ಯಾಯಾಲಯ ತೀಕ್ಷ್ಣವಾಗಿ ಟೀಕೆ ಮಾಡಿತ್ತು.

ಈ ಹಿನ್ನೆಲೆಯಲ್ಲಿ ಸಿಬಿಐ ಮಾಜಿ ಕಲ್ಲಿದ್ದಲು ಇಲಾಖೆಯ ಮಾಜಿ ಕಾರ್ಯದರ್ಶಿ ಪರಖ್ ಮತ್ತು ಪ್ರಮುಖ ಉದ್ಯಮಿ ಕುಮಾರಮಂಗಲಂ ಬಿರ್ಲಾ ಮತ್ತು ಆತನ ಕಲ್ಲಿದ್ದಲು ಕಂಪನಿ ಹಿಂದಾಲ್ಕೊ ವಿರುದ್ಧ ದಾಖಲಿಸಿದ ಎಫ್‌ಐಆರ್ ಕಳೆದ ವಾರ ಭಾರೀ ಕೋಲಾಹಲ ಉಂಟು ಮಾಡಿತ್ತು. ಕಾರ್ಪೊರೇಟ್ ಜಗತ್ತು ಮತ್ತು ಉನ್ನತ ಸರಕಾರೀ ಅಧಿಕಾರಿಗಳ ಆಕ್ರೋಶ ಉಕ್ಕಿ ಹರಿಯಿತು.

ಮಾಜಿ ಕಲ್ಲಿದ್ದಲು ಕಾರ್ಯದರ್ಶಿಗಳು ಹಿಂದಾಲ್ಕೊಗೆ ಕಲಿದ್ದಲು ಬ್ಲಾಕ್ ನೀಡಿಕೆಯ ನಿರ್ಧಾರದಲ್ಲಿ ತಪ್ಪೇನೂ ಇಲ್ಲ, ಆದರೆ ತಪ್ಪು ಇದೆಯೆಂದಾದ್ದಲ್ಲಿ, ಪಿತೂರಿ ಇದೆಯೆಂದಾದಲ್ಲಿ ಅದಕ್ಕೆ ಮಂಜೂರಾತಿ ನೀಡಿದ ಪ್ರಧಾನ ಮಂತ್ರಿಗಳೂ ಒಬ್ಬ ಪಿತೂರಿಗಾರರಾಗುತ್ತಾರೆ ಎಂದು ಪ್ರತಿಕ್ರಿಯಿಸಿದ್ದಾರೆ.


ಅವರ ಪರವಾಗಿ ನಿಂತ ಐಎಎಸ್ ಅಧಿಕಾರಿಗಳು ಮತ್ತು ಬಿರ್ಲಾ ಅವರ ಪರವಾಗಿ ಆಕ್ರೋಶ ವ್ಯಕ್ತಪಡಿಸಿದ ಕಾರ್ಪೊರೇಟ್ ಮಂದಿ ಪ್ರಧಾನ ಮಂತ್ರಿಗಳ ಪಾತ್ರ ಬಗ್ಗೆ ಮೌನವಾಗಿದ್ದಾರೆ, ಬದಲಿಗೆ ಸಿಬಿಐ ಅನವಶ್ಯಕವಾಗಿ ಕಾರ್ಪೊರೇಟ್ ಜಗತ್ತಿನ, ಅಧಿಕಾರಿಗಳ ಬೆನ್ನತ್ತಿದೆ ಎಂದು ಟೀಕಿಸಿದ್ದಾರೆ. ಇದು ದೇಶದ ಅಭಿವೃದ್ಧಿಯಲ್ಲಿ ಬಂಡವಾಳಧ ಹೂಡಿಕೆಗೆ ಮುಂದೆ ಬರದಂತೆ ಮಾಡುತ್ತಿದೆ ಎಂಬ ಬೆದರಿಕೆಯ ಮಾತುಗಳೂ ಬಂದಿವೆ.

ವಿಶೇಷವೆಂದರೆ ಸುಪ್ರಿಂ ಕೋರ್ಟ್ ನಿರ್ದೇಶನದಲ್ಲಿ ಕೆಲಸ ಮಾಡುತ್ತಿರುವ ಸಿಬಿಐ ಕ್ರಮದ ಬಗ್ಗೆ ಸ್ವತಃ ಯುಪಿಎ–2 ಮಂತ್ರಿಗಳೂ 'ಆಶ್ಚರ್ಯ' ಮತ್ತು 'ಆಘಾತ' ವ್ಯಕ್ತಪಡಿಸಿದ್ದಾರೆ.' ಬಿಜೆಪಿಯ ಮುಖಂಡರುಗಳೂ ಅದೇ ರಾಗ ಹಾಡಿದ್ದಾರೆ. ಒಬ್ಬ ಸಂಪುಟ ದರ್ಜೆಯ ಮಂತ್ರಿ, ಸಿಬಿಐ ಈಗ ಅಂಕೆ ಮೀರಿ ವರ್ತಿಸುತ್ತಿದೆ, ಇದು ಯಾವುದೇ ಸರಕಾರ–ಕ್ಕೆ ಸಮಸ್ಯೆಯಾಗುತ್ತದೆ ಎಂದರೆ, ಇನ್ನೊಬ್ಬ ಮಂತ್ರಿಗಳು ಈ ರೀತಿಯ 'ಬೇಟೆ'ಯಾಟ ಲಾಭ ಎಂಬುದನ್ನು ಒಂದು ಕೆಟ್ಟ ಪದವಾಗಿ ಮಾಡುತ್ತಿದೆ ಎಂದು ಟಿಪ್ಪಣಿ ಮಾಡಿದರು! ವಾಣಿಜ್ಯ ಮಂತ್ರಿಗಳಂತೂ ಬಿರ್ಲಾರವರು ಅಮಾಯಕರು ಎಂದು ಸರ್ಟಿಫಿಕೇಟ್ ನೀಡಿದ್ದಾರೆ. ನಂತರ ಪ್ರಧಾನ ಮಂತ್ರಿಗಳೂ ಈ ಬಗ್ಗೆ ಆತಂಕಕ್ಕೆ ದನಿಗೂಡಿಸಿದ್ದಾರೆ.

ಇದೆಲ್ಲ ಸಿಬಿಐ ತನಿಖೆಯ ಮೇಲೆ ಪ್ರಭಾವ ಹೇರುವ, ಅದನ್ನು ಬೆದರಿಸುವ ಕ್ರಮಗಳು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಈ ಎಲ್ಲ ಹಗರಣದ ಮೂಲವಾದ ಕಲ್ಲಿದ್ದಲು ಉದ್ದಿಮೆಯ ಖಾಸಗೀಕರಣವನ್ನು ಪರೋಕ್ಷವಾಗಿ ಸಮರ್ಥಿಸುವ ಪ್ರಯತ್ನಗಳಿವು ಎಂದು ಸಿಪಿಐ(ಎಂ) ಹೇಳಿದೆ.

ಅತ್ತ ಕೊನೆಗೂ ಪ್ರಧಾನ ಮಂತ್ರಿಗಳು ಮೌನ ಮುರಿದು, ಅವರ ಕಚೇರಿಯಿಂದ ಹಿಂದಾಲ್ಕೋಗೆ ನೀಡಿಕೆಯನ್ನು ಸಮರ್ಥಿಸಿಕೊಳ್ಳುತ್ತಲೇ 14ನೇ ಎಫ್‌ಐಆರ್‌ಗೆ ಬೇರೆ ಕಾರಣಗಳೂ ಇರಬಹುದು ಎಂದು ಸೂಚಿಸುವ ಹೇಳಿಕೆ ಬಂತು. ಇದಕ್ಕೆ ಪ್ರತಿಕ್ರಿಯಿಸುತ್ತ ಈ ಕೇಸಿನ ಅರ್ಜಿದಾರ ಮನೋಹರಲಾಲ್ ಶರ್ಮ, ಈ ಕೇಸು, ಮತ್ತು ಉಳಿದ 140 ಕಲ್ಲಿದ್ದಲು ಬ್ಲಾಕ್ ನೀಡಿಕೆಗಳನ್ನೂ ವಿವರಿಸುವ ಅಫಿಡವಿಟ್ ಸಲ್ಲಿಸುವಂತೆ ಪ್ರಧಾನ ಮಂತ್ರಿಗಳನ್ನು ಕೇಳಬೇಕು ಎಂದು ಸುಪ್ರಿಂಕೋರ್ಟಿನಲ್ಲಿ ಒಂದು ಅರ್ಜಿ ಸಲ್ಲಿಸಿದ್ದಾರೆ.

ಕಲ್ಲಿದ್ದಲು ಕಾರ್ಯದರ್ಶಿಗಳು ತಪಾಸಣಾ ಸಮಿತಿ(ಸ್ಕ್ರೀನಿಂಗ್ ಕಮಿಟಿ)ಯ ನೀಡಿಕೆಯನ್ನು ಬದಲಿಸಿದ್ದಾರೆ ಎಂಬ ಸಿಬಿಐ ಹೇಳಿಕೆ ಸರಿಯಲ್ಲ, ಏಕೆಂದರೆ ಬ್ಲಾಕ್ ನೀಡಿಕೆ ಆ ಸಮಿತಿಯ ಕೈಗಳಲ್ಲಿರಲಿಲ್ಲ ಎಂದಿರುವ ಅರ್ಜಿದಾರರು ಬಿರ್ಲಾ ಮತ್ತು ಪರಖ್ ವಿರುದ್ಧ ಒಂದು ದೋಷಪೂರ್ಣ ಎಫ್‌ಐಆರ್ ಸಲ್ಲಿಸಿ, ಅವರು ಆ ಎಫ್‌ಐಆರ್‌ನ್ನು ರದ್ದು ಮಾಡಿಸಲು ಸಾಧ್ಯವಾಗುವಂತೆ ಪ್ರಧಾನ ಮಂತ್ರಿಗಳು ನಿರ್ದೇಶನ ನೀಡಿರಬಹುದು ಎಂದೂ ಅವರು ಶಂಕೆಯನ್ನೂ ವ್ಯಕ್ತಪಡಿಸಿದ್ದಾರೆ.



ಬಾಬಾಜಿ ಚಿನ್ನವಿರುವ ಸ್ಥಳಗಳ ಹೊಸ ಪಟ್ಟಿ ಕೊಟ್ಟಿದ್ದಾರೆ– ನಾವೀಗ ಇನ್ನಷ್ಟು ಸ್ಥಳಗಳಲ್ಲಿ ಅಗೆಯಬೇಕಾಗಿದೆ– ಸಂಸದ್ ಮಾರ್ಗ, ರಾಜಪಥ, ಯಮುನಾ ಎಕ್ಸ್‌ಪ್ರೆಸ್‌ವೇ, ಚಿಂಚಪೋಕಲಿ, ಹವಾಮಹಲ್...... ಡೆಕ್ಕನ್ ಕ್ರಾನಿಕಲ್‌ನಲ್ಲಿ ಸುಧೀರ್ ತೈಲಂಗ್ ವ್ಯಂಗ್ಯ

ಜಗದಗಲ

ಶರತ್‌ಚಂದ್ರ

ಜಿಂಬಾಬ್ವೆ : ಮುಗಾಬೆ ಗೆಲುವು: ಭೂಸುಧಾರಣೆ ಜನರ ಒಲವು

ಜುಲೈನಲ್ಲಿ ನಡೆದ ಚುನಾವಣೆಯಲ್ಲಿ ಜಿಂಬಾಬ್ವೆಯನ್ನು 1980 ರಿಂದ ಆಳುತ್ತಾ ಬಂದಿರುವ 'ಜಾನು-ಪಿ.ಎಫ್' (ಜಿಂಬಾಬ್ವೆ ಆಫ್ರಿಕನ್ ರಾಷ್ಟ್ರೀಯ ಒಕ್ಕೂಟ-ದೇಶಾಭಿಮಾನಿ ರಂಗ) ಭಾರೀ ಜಯ ಗಳಿಸಿದೆ. ಅಧ್ಯಕ್ಷೀಯ ಚುನಾವಣೆಯಲ್ಲಿ ರಾಬರ್ಟ್ ಮುಗಾಬೆ ಶೇ. 61 ಮತ ಗಳಿಸಿದರು. ಪ್ರಮುಖ ವಿರೋಧ ಪಕ್ಷ 'ಎಂ.ಡಿ.ಸಿ.' (ಪ್ರಜಾಸತ್ತಾತ್ಮಕ ಬದಲಾವಣೆಗೆ ಚಳುವಳಿ) ಅಭ್ಯರ್ಥಿ ತ್ಸವಿಂಗರಾಯ್ ಶೆ. 35 ಮತ ಗಳಿಸಿದರು. ಅದರ ಜತೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಜಾನು-ಪಿ.ಎಫ್ 210 ರಲ್ಲಿ 160 ಸೀಟುಗಳನ್ನು ಗಳಿಸಿದೆ. ಜಾನು-ಪಿ.ಎಫ್ ಸ್ವತಂತ್ರವಾಗಿ ಸರ್ಕಾರ ರಚಿಸಬಹುದು. ಮಾತ್ರವಲ್ಲ, ಮೂರನೇ ಎರಡು ಭಾಗಕ್ಕಿಂತಲೂ ಹೆಚ್ಚು ಸೀಟು ಗಳಿಸಿರುವುದರಿಂದ ಸಂವಿಧಾನ ಬದಲಾವಣೆಯನ್ನೂ ಮಾಡಬಹುದು. ಎಂ.ಡಿ.ಸಿ. 49 ಸೀಟು ಗಳಿಸಿದೆ. ಜಾನು-ಪಿ.ಎಫ್ ಜಿಂಬಾಬ್ವೆಯನ್ನು ಬ್ರಿಟಿಶ್ ವಸಾಹತುಶಾಹಿಯ ಕಪಿಮುಷ್ಟಿಯಿಂದ ರಾಬರ್ಟ್ ಮುಗಾಬೆಯವರ ನಾಯಕತ್ವದಲ್ಲಿ ದೀರ್ಘ ಸಶಸ್ತ್ರ ಗೆರಿಲ್ಲಾ ಹೋರಾಟದ ಮೂಲಕ ವಿಮೋಚನೆ ಮಾಡಿದ ಸಂಘಟನೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಚುನಾವಣೆ 'ಸ್ವತಂತ್ರ, ನ್ಯಾಯಯುತ'

ಚುನಾವಣಾ ಫಲಿತಾಂಶ ಪ್ರಕಟವಾಗುತ್ತಲೇ ಎಂ.ಡಿ.ಸಿ. ನಾಯಕ ತ್ಸವಿಂಗರಾಯ್ ಚುನಾವಣೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂದು ದೂರಿದ್ದಾರೆ. ಅವರ ಆದ-ರೆ ಚುನಾವಣೆಯಲ್ಲಿ ಸ್ವತಂತ್ರ ವೀಕ್ಷಕರಾಗಿ ಭಾಗವಹಿಸಿದ್ದ ಆಫ್ರಿಕನ್ ಒಕ್ಕೂಟ (ಎ.ಯು.) ಮತ್ತು ದಕ್ಷಿಣ ಆಫ್ರಿಕ ಅಭಿವೃದ್ಧಿ ಮಂಡಳಿ (ಎಸ್.ಎ.ಡಿ.ಸಿ.) ಚುನಾವಣೆ ಸ್ವತಂತ್ರವಾಗಿ, ನ್ಯಾಯಯುತವಾಗಿ, ಶಾಂತಿಯುತವಾಗಿ ನಡೆದಿದೆ ಎಂದು ಹೇಳಿದ್ದಾರೆ. ಅದಲ್ಲದೆ ಆಫ್ರಿಕಾದ ಎಲ್ಲಾ ದೇಶಗಳು ಮುಗಾಬೆಯವರಿಗೆ ಅಭಿನಂದನಾ ಸಂದೇಶಗಳನ್ನು ಕಳಿಸಿ ಚುನಾವಣಾ ಫಲಿತಾಂಶವನ್ನು ಮನ್ನಿಸಿವೆ. 2008 ಚುನಾವಣೆಯ ನಂತರ ಫಲಿತಾಂಶದ ಬಗ್ಗೆ ವಿವಾದ ಉಂಟಾಗಿ ಜಾನು-ಪಿ.ಎಫ್ ಮತ್ತು ಎಂ.ಡಿ.ಸಿ. ಸಮ್ಮಿಶ್ರ ಸರ್ಕಾರ ರಚಿಸಿತ್ತು. ತ್ಸವಿಂಗರಾಯ್ ಪ್ರಧಾನಿಯಾಗಿದ್ದು ಎಂ.ಡಿ.ಸಿ.ಯ ನಾಯಕರು ಹಣಕಾಸು ಖಾತೆ ಸೇರಿದಂತೆ ಪ್ರಮುಖ ಖಾತೆಗಳನ್ನು ಹೊಂದಿದ್ದರು. ಅಲ್ಲದೆ ಚುನಾವಣಾ ಕಮಿಶನಿನ ಸದಸ್ಯರ ನೇಮಕವನ್ನು ಎಲ್ಲಾ ಪಕ್ಷಗಳ ಸಹಮತದೊಂದಿಗೆ ಮಾಡಲಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಆದ್ದ-ರಿಂದ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎನ್ನುವುದು ಅರ್ಥಹೀನ ಎಂದು ಮುಗಾಬೆ ಹೇಳಿದ್ದಾರೆ. ಯಾವುದೇ ಸಂದೇಹ ಇದ್ದರೆ ಕೋರ್ಟಿಗೆ ಹೋಗಬಹುದು ಎಂದಿದ್ದಾರೆ ಕಾನೂನು ಮಂತ್ರಿ. ಈ ಬಾರಿ 'ಚುನಾವಣೆಯಲ್ಲಿ ವ್ಯಾಪಕ ಅಕ್ರಮದ ವಿರುದ್ಧ ಬೀದಿಗಿಳಿದು ಪ್ರತಿಭಟಿಸಬೇಕು' ಎಂಬ ಎಂ.ಡಿ.ಸಿ. ಕರೆಗೂ ಅಂತಹ ಪ್ರತಿಸ್ಪಂದನ ಸಿಕ್ಕಿಲ್ಲ. 2008ರಲ್ಲಿ ಇಂತಹ ಕರೆಗೆ ಭಾರೀ ಪ್ರತಿಸ್ಪಂದನ ಸಿಕ್ಕಿದ್ದು ವ್ಯಾಪಕ ಪ್ರತಿಭಟನೆ ಮತ್ತು ಎರಡೂ ಪಕ್ಷಗಳ ನಡುವೆ ತೀವ್ರ ಹಿಂಸಾತ್ಮಕ ಘರ್ಷಣೆಗಳು ನಡೆದಿದ್ದವು.

ಎಂ.ಡಿ.ಸಿ. ಜನಬೆಂಬಲ ಕುಸಿತ

ಸ್ವತಂತ್ರ ಪ್ರಾದೇಶಿಕ ಬಹು-ರಾಷ್ಟ್ರೀಯ ಸಂಘಟನೆಗಳಾದ ಎ.ಯು. ಮತ್ತು



ಎಸ್.ಎ.ಡಿ.ಸಿ. ತಂಡಗಳು ಚುನಾವಣೆಯನ್ನು 'ಸ್ವತಂತ್ರ ಮತ್ತು ನ್ಯಾಯಯುತ' ಎಂದು ಮನ್ನಿಸಿರುವಾಗ, ಯಾವುದೇ ಸಾಕ್ಷ್ಯಾಧಾರ ಕೊಡದೆ ಫಲಿತಾಂಶವನ್ನು ಮನ್ನಿಸದಿರುವುದು ಸ್ವೀಕಾರಾರ್ಹವಲ್ಲ ಎಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜೂಮಾ ಸಹ ಹೇಳಿದ್ದಾರೆ. ಎಂ.ಡಿ.ಸಿ.ಯ ದೂರನ್ನು ಆಫ್ರಿಕಾದಲ್ಲಿ ಯಾರೂ ಗಣನೆಗೆ ತೆಗೆದುಕೊಂಡಿಲ್ಲವಾದರೂ, ಅಮೆರಿಕ, ಬ್ರಿಟನ್ ಮತ್ತು ಯುರೋಪಿಯನ್ ಒಕ್ಕೂಟ ಎಂ.ಡಿ.ಸಿ.ಯ ಹೇಳಿಕೆಯನ್ನು ಮನ್ನಿಸಿ ಚುನಾವಣೆಯ ವಿಶ್ವಾಸಾರ್ಹತೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿವೆ. ಆದರೆ ಕಳೆದ ಐದು ವರ್ಷಗಳಲ್ಲಿ ಸರ್ಕಾರ ನಡೆಸಿದ ನಂತರ ಎಂ.ಡಿ.ಸಿ. ಸಾಕಷ್ಟು ಜನಬೆಂಬಲ ಕಳಕೊಂಡಿದೆ ಎಂದು ಪಾಶ್ಚಿಮಾತ್ಯ ಸಮೀಕ್ಷೆಗಳೇ ಹೇಳಿವೆ. ಅಮೆರಿಕದ ಫ್ರೀಡಂ ಹೌಸ್ (ಈ ಸಂಘಟನೆ ಜಾನು-ಪಿ.ಎಫ್ ಅಥವಾ ಮುಗಾಬೆಯ 'ಫ್ಯಾನ್' ಏನಲ್ಲ!) ನಡೆಸಿದ ಸಮೀಕ್ಷೆಯ ಪ್ರಕಾರ ಎಂ.ಡಿ.ಸಿ.ಗೆ ಬೆಂಬಲ 2011ರಲ್ಲಿ ಶೇ. 38 ಇದ್ದಿದ್ದು, 2012ರಲ್ಲೇ ಶೇ.20ಕ್ಕೆ ಇಳಿದಿತ್ತು. 2008ರ ಚುನಾವಣೆಯಲ್ಲಿ ಎಂ.ಡಿ.ಸಿ. ಶೇ.43 ಮತ ಪಡೆದಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದರೆ ಅದರ ಅಧಿಕಾರಾವಧಿಯಲ್ಲಿ ಎಂ.ಡಿ.ಸಿ.ಯ ಜನಬೆಂಬಲ ಅರ್ಧಕ್ಕೂ ಹೆಚ್ಚು ಕುಸಿದಿತ್ತು.

ಎಂ.ಡಿ.ಸಿ.ಗೆ ಮುಳುವಾದದ್ದು ಭೂಸುಧಾರಣೆ ಪ್ರಶ್ನೆ

ಎಂ.ಡಿ.ಸಿ.ಗೆ ಬಹುಮತ ಬರುವಂತೆ ಮಾಡಲು ಪ್ರಚಾರಕ್ಕೆ ಜಾನು-ಪಿ.ಎಫ್ ಸರ್ಕಾರದಲ್ಲಿ ಯಾವುದೇ ಪಾತ್ರ ಇಲ್ಲದಂತೆ ಪಾಶ್ಚಿಮಾತ್ಯ ದೇಶಗಳು ಎನ್.ಜಿ.ಓ.ಗಳ ಮೂಲಕ 200 ಕೋಟಿ ಡಾಲರು ಖರ್ಚು ಮಾಡಿದ್ದವು ಎಂದು ಮೊಗಾಬೆ ಆಪಾದಿಸಿದ್ದಾರೆ. ಆದರೂ ಎಂ.ಡಿ.ಸಿ. ಸೋಲಲು ಅದು ಅಧಿಕಾರದಲ್ಲಿದ್ದಾಗ ಜಾರಿ ಮಾಡಿದ ಆರ್ಥಿಕ ನೀತಿಗಳು ಕಾರಣ. ಎಂ.ಡಿ.ಸಿ.ಯದ್ದು ಅಮೆರಿಕ-ಯುರೋಪುಗಳು ಆರ್ಥಿಕದ ಜತೆ ಬೆಸೆದುಕೊಳ್ಳುವ ನವ-ಉದಾರವಾದಿ ಆರ್ಥಿಕ ನೀತಿಯಾಗಿತ್ತು. ಇದಕ್ಕೆ ಬದಲಾಗಿ ಭೂಸುಧಾರಣೆ ಆಧಾರಿತ ಸ್ವತಂತ್ರ ಅಭಿವೃದ್ಧಿ ನೀತಿಯನ್ನು ಜಾನು-ಪಿ.ಎಫ್ ಜನರ ಮುಂದಿಟ್ಟಿತು. ಎಂ.ಡಿ.ಸಿ. ಭೂಸುಧಾರಣೆ ಬಗ್ಗೆ ಮಾತನಾಡಲೇ ಇಲ್ಲ. ಆದರೆ ಆ ಪಕ್ಷದ ಬೆಂಬಲಕ್ಕೆ ನಿಂತ ಪಾಶ್ಚಿಮಾತ್ಯ ಸರ್ಕಾರಗಳು (ಅದರಲ್ಲೂ ಬ್ರಿಟಿಷ್) ಮತ್ತು ಅವರ ಬೆಂಬಲಿಗ ಜಾಗತಿಕ/ಸ್ಥಳೀಯ ಮಾಧ್ಯಮಗಳು ಭೂಸುಧಾರಣೆಯನ್ನು 'ಹಗಲು ದರೋಡೆ' ಎಂದು ಕರೆಯುತ್ತಿದ್ದನ್ನು ಜನ ಗಮನಿಸಿದ್ದರು.

ಶೇ.1 ಬಿಳಿಯರು ಶೇ.70 ಭೂಮಿಯ ಒಡೆ-ಯರು

ಭೂಮಿಯ ಪ್ರಶ್ನೆ ಜಿಂಬಾಬ್ವೆಯಲ್ಲಿ ಯಾವಾಗಲೂ ಪ್ರಮುಖ ಪ್ರಶ್ನೆಯಾಗಿತ್ತು. ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ವಿಮೋಚನಾ ಹೋರಾಟದಲ್ಲೂ ಬ್ರಿಟಿಷ್ ವಲಸೆಗಾರರು ದೊಡ್ಡ ಪ್ರಮಾಣದಲ್ಲಿ ಎಸ್ಟೇಟುಗಳನ್ನು ಕಬಳಿಸಿದ್ದು ಅತೃಪ್ತಿಗೆ ಮುಖ್ಯ ಕಾರಣವಾಗಿತ್ತು. ಜಿಂಬಾಬ್ವೆ ಸ್ವತಂತ್ರವಾದಾಗ ಶೇ.1 ಬಿಳಿಯರು ದೇಶದ ಶೇ.70 ಅತ್ಯುತ್ತಮ ಭೂಮಿಯ ಒಡೆತನ ಹೊಂದಿದ್ದರು. ಆದರೆ ದೀರ್ಘ ಸಶಸ್ತ್ರ ಹೋರಾಟದ ನಂತರ ಮಾತುಕತೆಗಳಲ್ಲಿ ಸ್ವಾತಂತ್ರ್ಯ-ಕ್ಕೆ ಹಾಕಿದ ಶರತ್ತಿನ ಪ್ರಕಾರ 10ವರ್ಷಗಳ ಕಾಲ ಹೊಸ ಸರ್ಕಾರ 'ಭೂಸುಧಾರಣೆ' ಮಾಡುವಂತಿರಲಿಲ್ಲ. 10 ವರ್ಷಗಳ ಕಾಲ 'ಸ್ವ-ಇಚ್ಛೆಯ ಮಾರಾಟಗಾರ, 'ಸ್ವ-ಇಚ್ಛೆಯ ಕೊಳ್ಳುವವ' ನೀತಿಯ ಆಧಾರದ ಮೇಲೆ ಮಾತ್ರ ಭೂಒಡೆತನ ವರ್ಗಾಯಿಸಬಹುದಿತ್ತು. ಒಪ್ಪಂದದ ಪ್ರಕಾರ ಇಂತಹ ಸ್ವ-ಇಚ್ಛೆಯ ವರ್ಗಾವಣೆಯ ವೆಚ್ಚವನ್ನು ಬ್ರಿಟಿಷ್ ಸರ್ಕಾರ ವಹಿಸಬೇಕಾಗಿತ್ತು. ಅಪ್ರಯೋಜಕ ಭೂಮಿ (ಅದರಲ್ಲೂ ತುಂಡು ತುಂಡಾಗಿ) ಯ ಮಾತ್ರ ಬಿಳಿಯರು ಮಾರಲು ತಯಾರಾದ್ದ-ರಿಂದ, ಅರ್ಥಪೂರ್ಣ ಭೂಹಂಚಿಕೆ ಮಾಡಲು ಆಗಲಿಲ್ಲ. ಆದರೂ 1980ರ ದಶಕದಲ್ಲಿ 75 ಸಾವಿರ ಕುಟುಂಬಗಳು ಭೂಮಿ ಪಡೆದವು.

1980ರ ದಶಕದುದ್ದಕ್ಕೂ ಸರ್ಕಾರ ಶಿಕ್ಷಣ ಮತ್ತು ಆರೋಗ್ಯದಲ್ಲಿ ಭಾರಿ ಹೂಡಿಕೆ ಮಾಡಿತ್ತು. ಸಾಕ್ಷರತೆಯ ಪ್ರಮಾಣ ಶೆ.90ಕ್ಕೇರಿತು. ಆದರೆ ಬ್ರಿಟಿಷ್ ಸರ್ಕಾರ ಭೂಸುಧಾರಣೆ ಮೇಲಿನ ನಿರ್ಬಂ ಧ ಮತ್ತು ವಿಧಿಸಿದ್ದ ಇತರ ಹಲವು ಆರ್ಥಿಕ ಮಿತಿಗಳಿಂದಾಗಿ 1990ರ ದಶಕದ ಆರಂಭದ ಹೊತ್ತಿಗೆ ತೀವ್ರ ಹಣಕಾಸಿನ ಕೊರತೆ ಜಿಂಬಾಬ್ವೆಯನ್ನು ಕಾಡುತ್ತಿತ್ತು. ಆದ್ದ-ರಿಂದ 1991ರಲ್ಲಿ ಅದು ಐ.ಎಂ.ಎಫ್. ಸಾಲದ ಮೊರೆ ಹೋಗಬೇಕಾಯಿತು. ಈ ಸಾಲದ ಅವಧಿಯ ಕೊನೆಯ ಹೊತ್ತಿಗೆ ಅದರ ನಾಣ್ಯ ಅರ್ಧದಷ್ಟು ಅಪಮೌಲ್ಯಗೊಂಡಿತ್ತು. ಸಾಲದ ಹೊರೆ ಜಿಡಿಪಿಯ ಶೇ.44ರಿಂದ ಶೇ.71ಕ್ಕೆ ಜಿಗಿದಿತ್ತು. ಕೈಗಾರಿಕೆ ಬೆಳವಣಿಗೆಯ ದರ ಶೇ.0.1 ಆಗಿತ್ತು. ಶಾಲೆಗೆ ಮಕ್ಕಳ ದಾಖಲಾ ಇಳಿದಿತ್ತು. ಶಿಕ್ಷಣ ಮತ್ತು ಆರೋಗ್ಯದ ಮೇಲೆ ವೆಚ್ಚದಲ್ಲಿ ಭಾರಿ ಕಡಿತ ಆಗಿತ್ತು. ಕಾಂಗೋ ಯುದ್ಧಕ್ಕೆ ಜಿಂಬಾಬ್ವೆ ಸೈನ್ಯ ಕಳಿಸಿ ಆ ಯುದ್ಧ 4 ವರ್ಷಗಳ ಕಾಲ ಎಳೆಯುತ್ತಾ ಹೋದಂತೆ ಅದೂ ಆರ್ಥಿಕ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು. 1990ರ ದಶಕದ ಕೊನೆಯ ಹೊತ್ತಿಗೆ ದೇಶದಲ್ಲಿ ತೀವ್ರ ಅತೃಪ್ತಿ ಹೊಗೆಯಾಡುತ್ತಿತ್ತು. 20 ವರ್ಷಗಳ ಏಕವ್ಯಕ್ತಿ/ಏಕಪಕ್ಷೀಯ ಸರ್ಕಾರದ ಆಡಳಿತದಿಂದಾಗಿ (ಅನಿವಾರ್ಯವಲ್ಲದಿದ್ದರೂ, ಸ್ವಾಭಾವಿಕ ಬೆಳವಣಿಗೆಯಾಗಿ) ಅಧಿಕಾರಶಾಹಿ, ಭ್ರಷ್ಟಾಚಾರ ಬೆಳೆದಿತ್ತು.

ಈ ದಶಕದ ಭೂಗ್ರಹಣ ಚಳುವಳಿ

ಇವೆಲ್ಲದಕ್ಕೆ ಪ್ರತಿಕ್ರಿಯೆಯಾಗಿ ನಗರದ ಯುವಕರು, ಎನ್.ಜಿ.ಓ.ಗಳು, ಮಧ್ಯಮ ವರ್ಗದವರು ಎಂ.ಡಿ.ಸಿ.ಯ ಸ್ಥಾಪಿಸಿದರು. ಎಂ.ಡಿ.ಸಿ. ಮೊಗಾಬೆ ರಾಜೀನಾಮೆಗೆ →

ುವತಿಯರ ಅಂತರಂಗದ.....

ುಟ 16 ರಿಂದ

ತಿಯಲ್ಲಿ ಸೇಡು ತೀರಿಸಿಕೊಳ್ಳುವ ಹಂತಕ್ಕೆ ುಮತೇಕ ಗಂಡಸರು ಬಂದುಬಿಡುತ್ತಾರೆ." ಂಡ್ಯದ ಅರುಣಾ ಹೀಗೆ ತಮಗಾದ ಅನುಭವವನ್ನು ಾವೇಶದಲ್ಲಿ ಎಳೆ ಎಳೆಯಾಗಿ ಚ್ಚಿಡುತ್ತಿದ್ದರು. ಇಂತಹ ಅನೇಕ ದೌರ್ಜನ್ಯ-ಾಳಿಕೆಗಳಿಗೆ ಕೊನೆಹಾಡಲೇಬೇಕು. ಇದಕ್ಕಾಗಿ ುವತಿಯರನ್ನು ಸಂಘಟಿಸಬೇಕೆಂಬ ಡಿತವನ್ನು ಭಾಗವಹಿಸಿದ್ದ ಯುವತಿಯರಲ್ಲಿ ಾವೇಶವು ತುಂಬಿತ್ತು. ಹೀಗಾಗಿ ೈಎಫ್‌ಐಯನ್ನು ಬಲಿಷ್ಠಗೊಳಿಸಲು ವು ದುಡಿಯುತ್ತೇವೆಂದು ಸಮಾವೇಶದಲ್ಲಿ ಯುವತಿಯರು ಸ್ವಯಂ ಪ್ರೇರಿತರಾಗಿ ತಿಜ್ಞೆಯನ್ನು ಸ್ವೀಕರಿಸಿದರು.

ಅಕ್ಟೋಬರ್ 19-20, 2013 ರಂದು ೋಷಣೆ ರಹಿತ-ಆತಂಕ ಮುಕ್ತ ಾಸತ್ತಾತ್ಮಕ ಸಮಾಜಕ್ಕಾಗಿ" ಯುವತಿಯರ ೇ ರಾಜ್ಯ ಸಮಾವೇಶ ದಾವಣಗೆರೆಯಲ್ಲಿ ಎಫ್‌ಐ ಆಯೋಜಿಸಿತ್ತು. ಈ ಾವೇಶದಲ್ಲಿನ ಪ್ರತಿನಿಧಿ ಅಧಿವೇಶನದ ರ್ಚೆಯಲ್ಲಿ ಭಾಗವಹಿಸಿ ಮಾತಾಡಿದ ವರ ಅಭಿಪ್ರಾಯ ಮೇಲಿನವು. ಂತಹ ಅನೇಕ ಉದಾಹರಣೆಗಳನ್ನು ಡಿದ ಪ್ರತಿನಿಧಿಗಳ ಆಶಯವೆಂದರೆ ುವತಿಯರನ್ನು ಆವರಿಸಿಕೊಂಡಿರುವ ಕೋಲೆಗಳನ್ನು ಬಿಡಿಸುವುದು. ಯುವತಿಯರ ಮೇಲಿನ ಅಮಾನವೀಯ ೋಷಣೆಯನ್ನು ತಪ್ಪಿಸಲು, ಇಡೀ ುವಜನಾಂಗವೇ ಒಂದಾಗಿ ಪಾಳೇಗಾರಿಕೆಯ ುರುಷ ಪ್ರಧಾನ ವ್ಯವಸ್ಥೆಯನ್ನು ತೊಡದು ಕುವುದು. ಜೊತೆಗೆ ಯುವತಿಯರ ೇಲೆ ದಾಳಿಗಳನ್ನು ಹೆಚ್ಚು ಮಾಡುವಂತಹ ಾವಉದಾರೀಕರಣಗಳ ನೀತಿಗಳನ್ನು ಮ್ಮೆಟ್ಟಿಸುವುದು.

ಈ ಸಮಾವೇಶವನ್ನು ಡಿವೈಎಫ್‌ಐ ಅಖಿಲ ಭಾರತ ಯುವತಿಯರ ಉಪ ಸಮಿತಿ ಸಂಚಾಲಕರಾದ ಕಾಂ. ಪ್ರೀತಿ ಶೇಖರ್‌ವರು ಉದ್ಘಾಟಿಸಿ ಮಾತಾಡಿದರು. ಯುವತಿಯರ ಮೇಲಿನ ಲೈಂಗಿಕ ಅತ್ಯಾಚಾರಗಳು, ವರದಕ್ಷಿಣೆ ಸಾವುಗಳು, ಯುವತಿಯರನ್ನು ಅಪಹರಿಸಿ ಅತ್ಯಾಚಾರವೆಸಗಿ ಕೊಲೆ ಮಾಡುವುದು. ಅದರಲ್ಲೂ ಎಳೆಯ ಕಂದಮ್ಮಗಳ ಮೇಲೂ ಇಂತಹ ಅಮಾನುಷ ಘಟನೆಗಳು ನಡೆಯುತ್ತಲೇ ಇವೆ. ಕಳೆದ ವರ್ಷದ ಡಿಸೆಂಬರ್ 16 ರಂದು ದೆಹಲಿಯಲ್ಲಿ ನರ್ಸಿಂಗ್ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಮಾಧ್ಯಮಗಳ ಮೂಲಕ ಬಿತ್ತರಿಸಿದ್ದರ ಪರಿಣಾಮ ಜನತೆಯ ಕಣ್ಣು ತೆರೆಸುವಂತೆ ಮಾಡಿತು. ಇಂತಹ ಘಟನೆಗಳು ದೇಶದೆಲ್ಲೆಡೆ ಪ್ರತಿನಿತ್ಯ ಎಗ್ಗಿಲ್ಲದೇ ನಡೆಯುತ್ತಲೇ ಇವೆ. ಉದಾಹರಣೆಗೆ: ರಾಷ್ಟ್ರೀಯ ಕ್ರೈಂ ದಾಖಲಾತಿ ಪ್ರಕಾರ ದೇಶದಲ್ಲಿ 1971 ರಿಂದ 2011ರವರೆಗೆ ನೋಡಿದರೆ ಶೇ. 873.3 ರಷ್ಟು ಅತ್ಯಾಚಾರ ಪ್ರಕರಣಗಳು ಹೆಚ್ಚಿವೆ ಎಂದು ಅವರು ಹೇಳಿದರು.

ಅಂತರಾಷ್ಟ್ರೀಯ ವೈದ್ಯಕೀಯ ಪತ್ರಿಕೆಯ ವರದಿ ಪ್ರಕಾರ ಕಳೆದ ಮೂರು ದಶಕಗಳಲ್ಲಿ 1.2 ಕೋಟಿ ಮಕ್ಕಳ ಭ್ರೂಣ ಹತ್ಯೆ ನಮ್ಮ ದೇಶದಲ್ಲಿ ನಡೆದಿದೆ ಎಂಬ ವರದಿಯನ್ನು ಮಾಡಿದೆ. ಇನ್ನೂ ತಾಯಂದಿರ ಪರಿಸ್ಥಿತಿಯ ಬಗ್ಗೆ ಆಳುವ ಸರ್ಕಾರಗಳೇ ಒಪ್ಪಿಕೊಂಡಿವೆ. ಗರ್ಭಿಣಿ, ಹೆರಿಗೆ, ಬಾಣಂತಿಯ ಸಂದರ್ಭದಲ್ಲಿ ಶೇ. 80ರಷ್ಟು ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಇನ್ನೂ ಬಾಲ್ಯ ವಿವಾಹಗಳು, ಮತ್ತು 18 ರೊಳಗಿನ ವಿವಾಹಗಳು ಮತ್ತು ಯುವತಿಯರ 20 -22ರ ವಯೋಮಾನದಲ್ಲಿರುವಷ್ಟರಲ್ಲೇ ವಿವಾಹವಾಗಿ ಮಗುವಿಗೆ ತಾಯಿಯಾಗುವುದು. ಮಗುವಿನಿಂದ ಮಗುವಿಗೆ ಅಂತರವಿರದಿರುವುದು. ಹೀಗೆ ಅನೇಕ ಸಾಮಾಜಿಕ ಮತ್ತು ಕೌಟುಂಬಿಕ ಕಟ್ಟುಪಾಡುಗಳಿಗೆ ಒಳಗಾಗುತ್ತಿದ್ದಾಳೆ. ಜೊತೆ-ಗೆ ಇಂದಿಗೂ ದೇಶದ ಒಟ್ಟು ಮಹಿಳೆಯರಲ್ಲಿ ಅರ್ಧದಷ್ಟು ಅನಕ್ಷರಸ್ತರಾಗಿರುವುದು. ಪ್ರಾಥಮಿಕ ಹಂತದಿಂದ ವೃತ್ತಿ ಶಿಕ್ಷಣದವರೆಗೂ ವ್ಯವಸ್ಥಿತವಾಗಿ ತಾರತಮ್ಯಕ್ಕೆ ಒಳಪಡಿಸಿ ಯುವಕರಿಗೆ ಆದ್ಯತೆ ಕೊಡುವಂತಹ ಸಾಮಾಜಿಕ ಪರಿಸ್ಥಿತಿಯನ್ನು ಕಾಯ್ದುಕೊಳ್ಳಲಾಗಿದೆ. ಉದಾ: ಪ್ರಾಥಮಿಕ ಹಂತದ ಶಿಕ್ಷಣದಲ್ಲಿ 100 ಗಂಡು ಮಕ್ಕಳಿಗೆ 86 ಹೆಣ್ಣು ಮಕ್ಕಳಿದ್ದಾರೆ. ಇದು ಮಾಧ್ಯಮಿಕ ಶಾಲೆಯ ಮಟ್ಟಕ್ಕೆ ಬರುವಷ್ಟರಲ್ಲಿ 68ಕ್ಕಿಳಿಯುತ್ತದೆ. ಇನ್ನೂ ಶಾಲೆಯಿಂದ ಹೊರಗಿರುವವರಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಹೆಚ್ಚು. ದೇಶದ ಒಟ್ಟು ವಿದ್ಯಾರ್ಥಿನಿಯರಲ್ಲಿ ಶೇ.5.4 ರಷ್ಟು ಮಾತ್ರ ಇಂಜಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಇನ್ನೂ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಅವಕಾಶಗಳೇ ಇಲ್ಲವಾಗಿವೆ ಎಂದು ಪ್ರೀತಿ ಶೇಖರ್ ವಿವರಿಸಿದರು.

ಇಂತಹ ಸಂದರ್ಭದಲ್ಲಿ ಯುವತಿಯರ ಶಿಕ್ಷಣ-ಉದ್ಯೋಗ ಮತ್ತು ಸಾಮಾಜಿಕ ಭದ್ರತೆ ಮುಂತಾದ ರೀತಿಯಲ್ಲಿ ಯುವತಿಯರ ಸಬಲೀಕರಣದ ಉದ್ದೇಶ ಆಳುವ ಕಾಂಗ್ರೆಸ್ ಸರ್ಕಾರಕ್ಕಿಲ್ಲ. ಜೊತೆಗೆ ಮಹಿಳೆಯರನ್ನು ಅತ್ಯಂತ ತುಚ್ಛವಾಗಿ ಕಾಣುವ ಬಿಜೆಪಿಯಿಂದ ಕೂಡ ಅದನ್ನು ನಿರೀಕ್ಷಿಸುವ ಹಾಗಿಲ್ಲ. ಇಂತಹ ಸಂದರ್ಭದಲ್ಲಿ ಬಿಜೆಪಿ ಜನತೆಗೆ ಮಂಕು ಬೂದಿ ಎರಚಿ ಅಧಿಕಾರಕ್ಕೇರಲು ನರೇಂದ್ರ ಮೋದಿಯನ್ನು ಮುಂದೆ ಬಿಟ್ಟಿದೆ. ಹೀಗಾಗಿ ಈ ಹಿಂದೆಗಿಂತಲ್ಲೂ ಹೆಚ್ಚು ದಾಳಿಗಳು ಮಹಿಳೆಯರ ಮೇಲೆ ಹೆಚ್ಚಾಗಲಿವೆ. ಹೀಗಾಗಿ ಡಿವೈಎಫ್‌ಐ ಇಂತಹ ಸವಾಲುಗಳನ್ನು ಎದುರಿಸಲು ಯುವತಿಯರನ್ನು ಸಂಘಟಿಸಲು ಮುಂದಾಗುವಂತಾಗಬೇಕೆಂದು ಕರೆ ನೀಡಿದರು.

ನಿರ್ಣಯಗಳ ಅಂಗೀಕಾರ:

ಮಾಧ್ಯಮಗಳಲ್ಲಿನ ಆಶ್ಲೀಲತೆ ವಿರುದ್ಧ, ಲೈಂಗಿಕ ದೌರ್ಜನ್ಯ ವಿರೋಧಿ ಸಮಿತಿಗಳ ರಚನೆಗೆ ಆಗ್ರಹಿಸಿ ಮತ್ತು ಆದಿವಾಸಿ ಮಹಿಳೆಯರ ಮೇಲಿನ ದೌರ್ಜನ್ಯ, ವರದಕ್ಷಿಣೆ ಕಿರುಕುಳದ ವಿರುದ್ಧ ನಿರ್ಣಯ, ಎಲ್ಲಾ ಸಾರ್ವಜನಿಕ ಪ್ರದೇಶಗಳಲ್ಲಿ ಮಹಿಳಾ ಶೌಚಾಲಯ ನಿರ್ಮಾಣ ಮಾಡಲು ಒತ್ತಾಯಿಸಿ, ಸೌಜನ್ಯ ಕೊಲೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಇನ್ನಷ್ಟು ರಾಜ್ಯಾದ್ಯಂತ ನವೆಂಬರ್ 20ರಂದು ಚಳುವಳಿ ನಡೆಸುವುದು ಇತ್ಯಾದಿ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಮುಂದಿನ ದಿನಗಳಲ್ಲಿ ಬಲಿಷ್ಠ ಯುವಜನಾಂದೋಲವನ್ನು ರೂಪಿಸಲು ನಿರ್ಧರಿಸಲಾಯಿತು.

ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಸಾಮಾಜಿಕ ಕಾರ್ಯಕರ್ತೆ ದು. ಸರಸ್ವತಿ, ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಬಿ.ಟಿ.ಜಾಹ್ನವಿ, ಮುಂತಾದ ಗಣ್ಯರ ಜೊತೆಯಲ್ಲಿ ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಎನ್.ಎಲ್.ಭರತ್ ರಾಜ್, ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ ಮತ್ತು ಸಂಘಟನೆಯ ರಾಜ್ಯ ಮುಖಂಡರು ಹಾಗೂ ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿ ಯುವತಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ನೂತನ ಸಮಿತಿ

ಪ್ರಜ್ಞಾ ಟಿ ಪಾಟೀಲ್-ದಾವಣಗೆರೆ, ಪ್ರಮೀಳಾ, ಮಲ್ಲಿಕಾ- ದಕ್ಷಿಣ ಕನ್ನಡ ಜಿಲ್ಲೆ, ನವೀನಾ- ಮಂಡ್ಯ, ರೀಟಾ-ಕೊಡಗು, ಆರತಿ -ತುಮಕೂರು, ದೇವಮ್ಮ- ಕೊಪ್ಪಳ, ಜೀವ ಭಾರತಿ- ಬೆಂಗಳೂರು ದಕ್ಷಿಣ, ಲಿಖಿತ. ಎಂ-ಬೆಂಗಳೂರು ಉತ್ತರ, ಜ್ಯೋತಿ -ಹುಬ್ಬಳ್ಳಿ-ಧಾರವಾಡ, ರೇಣುಕಾ ಕಹಾರ್-ಎಸ್‌ಎಫ್‌ಐ ಮುಖಂಡರು. ಒಟ್ಟು ಹತ್ತು 15 ಜನರ ಉಪ ಸಮಿತಿ ರಚನೆಯಾಗಿದೆ.

ಜೊತೆಗೆ ಸಮಾವೇಶ ಮುಗಿದ ನಂತರದಲ್ಲಿ "ಮುಕ್ತ ಮಾರುಕಟ್ಟೆಯ ಸುಳಿಯಲ್ಲಿ ಯುವತಿಯರು" ಎಂಬ ವಿಷಯ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಲಾಗಿತ್ತು. ವಿಷಯವನ್ನು ಪ್ರಾಧ್ಯಾಪಕರಾದ ಶ್ರೀಮತಿ ತಾರಣಿಶುಭದಾಯಿನಿಯವರು ಮಂಡಿಸಿದರು. ಅಧ್ಯಕ್ಷತೆಯನ್ನು ಪ್ರಜ್ಞಾರವರು ವಹಿಸಿದ್ದರು. ●

➡ ಒತ್ತಾಯಿಸಿ ಬೀದಿಗಿಳಿಯಿತು. ಈ ಸಂದರ್ಭವನ್ನು ಬಳಸಿಕೊಳ್ಳಲು ಬ್ರಿಟಿಷ್ ುತ್ತಿತರ ಪಾಶ್ಚಿಮಾತ್ಯ ಸರ್ಕಾರಗಳು, ೇಯ ಬಿಳಿಯರು ಎಂ.ಡಿ.ಸಿ.ಗೆ ಎಲ್ಲಾ ೀತಿಯ ಬೆಂಬಲ ಕೊಟ್ಟರು. ಭೂಸುಧಾರಣೆ ರ್ಕಾರದ ನೀತಿಯಾದರೂ, ಭೂಮಿಯ ್ನೆ ಬಗ್ಗೆ ಅಷ್ಟು ಹೊತ್ತಿಗೆ ಅದು ಏನು ಾಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಹಿಂದೆ ಮೋಚನಾ ಹೋರಾಟದಲ್ಲಿ ಭಾಗವಹಿಸಿದ್ದ ರಿಲ್ಲಾ ದಳದ ಸದಸ್ಯರು (ಇನ್ನು ಸರ್ಕಾರ-ಕಾದು ಪ್ರಯೋಜನವಿಲ್ಲ ಎಂದು ಗ್ರಹಿಸಿ) ಳಿಯರ ಎಸ್ಟೇಟುಗಳ ಭೂಗ್ರಹಣ ಚಳುವಳಿ ರಂಭಿಸಿದರು. 1999ರಲ್ಲಿ ಆರಂಭವಾದ ಳುವಳಿ ಬೇಗನೇ ವ್ಯಾಪಕವಾಗಿ ಹಬ್ಬಿತು. ೇಂದರೆ ಎಲ್ಲಾ ಪ್ರದೇಶಗಳಲ್ಲಿ ವಿಮೋಚನಾ ಾಟದಲ್ಲಿ ಭಾಗವಹಿಸಿದ್ದ ಗೆರಿಲ್ಲಾ ಳದ ಸದಸ್ಯರು ವಾಸಿಸುತ್ತಿದ್ದರು. ಅವರು ಚಳುವಳಿಯ ನಾಯಕತ್ವ ವಹಿಸಿದ್ದರಿಂದ ಚಳುವಳಿ ಶಿಸ್ತುಬದ್ಧವಾಗಿ ನಡೆಯಿತು. ಅವರು ಆಳುವ ಪಕ್ಷದ ಸದಸ್ಯರೂ ಪ್ರಮುಖ ಕಾರ್ಯಕರ್ತರೂ ಬೆಂಬಲಿಗರೂ ಆಗಿದ್ದ-ರಿಂದ ಸರ್ಕಾರೀ ಯಂತ್ರದ ಪ್ರತಿರೋಧವೂ ಕಡಿಮೆಯಿತ್ತು. ಈ ಚಳುವಳಿಯ ಫಲವಾಗಿ ಈಗ ಸ್ಥಳೀಯ ರೈತರು ದೇಶದ ಮುಕ್ಕಾಲು ಭಾಗ ಭೂಮಿಯ ಒಡೆತನ ಪಡೆದಿದ್ದಾರೆ. 2000ರ ನಂತರವೇ 1.7 ಲಕ್ಷ ಕುಟುಂಬಗಳು ಒಂದು ಕೋಟಿ ಹೆಕ್ಟೇರ್ ಭೂಮಿ ಪಡೆದವು.

'...ಹಗಲು ದರೋಡೆ'

ಸ್ವಾಭಾವಿಕವಾಗಿಯೇ ಈ ಭೂಗ್ರಹಣ ಚಳುವಳಿಯ ವಿರುದ್ಧ ಜಾಗತಿಕ/ಸ್ಥಳೀಯ ಮಾಧ್ಯಮಗಳಲ್ಲಿ ಇದು 'ಮೊಗಾಬೆ ಸರ್ಕಾರ ಪ್ರಾಯೋಜಿತ ಹಗಲು ದರೋಡೆ' ಎಂಬ ಅಬ್ಬರದ ಪ್ರಚಾರ ಆರಂಭವಾಯಿತು. ಇದಕ್ಕೆ ಬೆದರಿ ಮೊದ ಮೊದಲು ಸರ್ಕಾರಿ ಯಂತ್ರ ಈ ಭೂಗ್ರಹಣ ನಿಲ್ಲಿಸಲು ಪ್ರಯತ್ನಿಸಿತು. ಅದು ಸಾಧ್ಯವಾಗದೇ ಹೋದಾಗ ಸರ್ಕಾರ ಪರೋಕ್ಷ ಬೆಂಬಲ ಕೊಡಲಾರಂಭಿಸಿತು. ಆರ್ಥಿಕ ಚೇತರಿಕೆ ಮತ್ತು ಜನಬೆಂಬಲ ಮನಃಗಳಿಸಲು ಇದು ಸಹಾಯಕಾರಿಯಾಗಬಹುದು ಎಂದು ಗ್ರಹಿಸಿ ಅದು ತನ್ನ ಕಾರ್ಯಕ್ರಮ ಎಂದು ಬಿಂಬಿಸಲು ಪ್ರಯತ್ನಿಸಿತು. ಕ್ರಮೇಣ ಚಳುವಳಿಗೆ ರಕ್ಷಣೆ ಕಾನೂನುಬದ್ಧತೆ ಕೊಟ್ಟಿತು. ಇದೇ ಸಂದರ್ಭ ಬಳಸಿ ಬ್ರಿಟಿಷ್ ಮತ್ತಿತರ ಪಾಶ್ಚಿಮಾತ್ಯ ಸರ್ಕಾರಗಳು ಒಪ್ಪಂದದ ಪ್ರಕಾರ ಕೊಡಬೇಕಾದ 'ಸ್ವ-ಇಚ್ಛೆಯ ಮಾರಾಟಗಾರ, 'ಸ್ವ-ಇಚ್ಛೆಯ ಕೊಳ್ಳುವವ' ಕಾರ್ಯಕ್ರಮಕ್ಕೆ ಬೆಂಬಲ ನಿಲ್ಲಿಸಿದವು. ಮಾತ್ರವಲ್ಲ ಆರ್ಥಿಕ ದಿಗ್ಬಂಧನಗಳನ್ನು ಹೇರಿದವು.

ಮೊಗಾಬೆ ಜಯಭೇರಿಯ ಗುಟ್ಟು

ಆರ್ಥಿಕ ದಿಗ್ಬಂಧನಗಳು ಮತ್ತು ಭೂಗ್ರಹಣ ಚಳುವಳಿಯ ಪರಿಣಾಮವಾಗಿ ಕೆಲವು ವರ್ಷಗಳ ಕಾಲ ಕೃಷಿ ಉತ್ಪಾದನೆ ಮತ್ತು ಆರ್ಥಿಕ ಏರುಪೇರುಗಳು ಆದವು. 1998-2008 ಅವಧಿಯಲ್ಲಿ ಆರ್ಥಿಕ ಅರ್ಧಕ್ಕೆ ಕುಗ್ಗಿತು. ಹಣದುಬ್ಬರ ಶೇ.23 ಕೋಟಿ ಆಗಿತ್ತು ! ಆದರೆ 2009ರ ಹೊತ್ತಿಗೆ ಕೃಷಿ ಉತ್ಪಾದನೆ ಸ್ಥಿಮಿತಕ್ಕೆ ಬಂದು, ಆರ್ಥಿಕ ವಾರ್ಷಿಕವಾಗಿ ಶೇ.20ರಷ್ಟು ಬೆಳೆಯಲು ಆರಂಬಿಸಿತು. ಕೃಷಿ ರಫ್ತು ಪ್ರತಿ ವರ್ಷ ಇಮ್ಮಡಿಯಾಯಿತು. ಹಲವು ಅಮೂಲ್ಯ ಲೋಹ ನಿಕ್ಷೇಪಗಳ ಅನ್ವೇಷಣೆ, ಚೀನಾದ ಆರ್ಥಿಕ ಬೆಂಬಲಗಳಿಂದ ಕೈಗಾರಿಕಾ-ಗಣಿ ಉತ್ಪಾದನೆ ಸಹ ಏರತೊಡಗಿತು. ಜುಲೈ ಚುನಾವಣೆಯಲ್ಲಿ ಜಾನು-ಪಿ.ಎಫ್ ವ್ಯಾಪಕ ಭೂಸುಧಾರಣೆ ತನ್ನ ನೀತಿಯ ಫಲ ಎಂದು ಹೇಳಿತು. ಈ ಹಿನ್ನೆಲೆಯಲ್ಲಿ ಎಂ.ಡಿ.ಸಿ.ಯ ಐದು ವರ್ಷಗಳ ಜಂಟಿ ಆಡಳಿತ ಮತ್ತು ನೀತಿಗಳು ಜನರಿಗೆ ಹಿಡಿಸಲಿಲ್ಲ. ಹೀಗೆ ಕೆಳಗಿನಿಂದ ಆರಂಭವಾಗಿ ಜಾರಿಯಾದ ಭೂಸುಧಾರಣೆ ('ಸರ್ವಾಧಿಕಾರಿ') ಮೊಗಾಬೆಯವರ ('ಆಶ್ಚರ್ಯಕರ') ಜಯಭೇರಿ ಹಿಂದೆ ಇದೆ. 'ತ್ಸವಿಂಗರಾಯ್ ಅಥವಾ ಎಂ.ಡಿ.ಸಿ. ನಮ್ಮ ವೈರಿ ಅಲ್ಲ. ಅವರ ಹಿಂದಿರುವ ಬ್ರಿಟಿಷ್/ ಅಮೆರಿಕನ್ ಸಾಮ್ರಾಜ್ಯಶಾಹಿ ನಮ್ಮ ವೈರಿ' ಎಂಬ ಮೊಗಾಬೆ ಹೇಳಿಕೆಗೆ ಜನಮತದ ಮುದ್ರೆ ಬಿದ್ದಿದೆ. ●

JANASHAKTHI KANNADA VARA PATRIKE NOV 03, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Sa
Licensed to Post without prepayment License No. WPP-

ಯುವತಿಯರ ಅಂತರಂಗದ ತಲ್ಲಣಗಳಿಗೆ ವೇದಿಕೆಯಾದ ರಾಜ್ಯ ಸಮಾವೇಶ

ಕಣ್ಣಲ್ಲಿ ಒಳ್ಳೆಯ ಬದುಕಿನ ಹೊಂಗನಸು, ಮನಸ್ಸಿನಲ್ಲಿ ಹೊಸ ಜೀವನದ ಹುಮ್ಮಸ್ಸು ಹೊತ್ತು ಹೆಜ್ಜೆ ಇಡಲು ತವಕಿಸುತ್ತಿರುವ ನವ ಪೀಳಿಗೆಯ ಯುವತಿಯರ ಬಾಳಿನ ದಾರಿಗೆ ಮುಳ್ಳು, ಕಲ್ಲುಗಳನ್ನು ಸುರಿಯುವ ನೀಚ ದುಷ್ಟ ಶಕ್ತಿಗಳೇ ನಮ್ಮ ಸಮಾಜದಲ್ಲಿ ಈಗ ಎದ್ದು ಕುಳಿತಂತೆ ಕಾಣುತ್ತಿದೆ. ಇಂತಹ ಸನ್ನಿವೇಶದಲ್ಲಿ ಯುವತಿಯರ ಅಂತರಂಗದ ದುಗುಡಗಳಿಗೆ ವೇದಿಕೆಯಾದ ಡಿವೈಎಫ್ಐನ ರಾಜ್ಯ ಯುವತಿಯರ ಸಮಾವೇಶದ ಒಂದು ವರದಿ.

– ಬಿ. ರಾಜಶೇಖರಮೂರ್ತಿ

"ಮನೆಯಿಂದ ಕಾಲೇಜಿಗೆ ಹೋಗಲು ಹೊರಗೆ ಹೆಜ್ಜೆ ಇಡುತ್ತಿದ್ದಂತೆ ನಮಗೆ ಭಯ ಶುರುವಾಗುತ್ತದೆ. ರಸ್ತೆಯಲ್ಲಿ ನಡೆಯುವಾಗ, ಬಸ್‌ಸ್ಟಾಪ್‌ನಲ್ಲಿ ನಿಂತಿರುವಾಗ, ಬಸ್ಸಿನಲ್ಲಿ ಪ್ರಯಾಣಿಸುವಾಗ ಹೀಗೆ ಹೊರಗಡೆ ಎಲ್ಲಿದ್ದರೂ ಕಾಮದ ಕಣ್ಣುಗಳ ಕಾಟ. ನಮ್ಮ ಹಿಂದೆ ಮುಂದೆ ಸಿಗುವ ಹುಡುಗರಲ್ಲಿ ನಮ್ಮನ್ನು ಚುಡಾಯಿಸುವವರೇ ಹೆಚ್ಚು. ಇಂಥ ತೊಂದರೆಗಳ ಬಗ್ಗೆ ಕಾಲೇಜಿನಲ್ಲಿ ದೂರುಗಳನ್ನು ಕೊಟ್ಟರೂ ಪ್ರಯೋಜನವಿಲ್ಲ. ತಂದೆ ತಾಯಿಗೆ ಹೇಳುವಂತಿಲ್ಲ. ಹೇಳಿದರೆ 'ನೀನು ಕಾಲೇಜಿಗೆ ಹೋಗುವುದೇ ಬೇಡ ಸುಮ್ಮನೆ ಮನೆಯಲ್ಲಿ ಬಿದ್ದಿರು' ಎಂದು ಹೇಳುತ್ತಾರೆ. ಇನ್ನೂ ಅಪ್ಪಿ ತಪ್ಪಿ ನಮ್ಮ ಮೊಬೈಲ್ ನಂಬರ್ ಯಾರಾದರೂ ಹುಡುಗರಿಗೆ ಸಿಕ್ಕರೆ ಅಸಹ್ಯ ಮಸೇಜ್‌ಗಳು ಕಳಿಸುವುದು. ಮಿಸ್ ಕಾಲ್ ಮಾಡುವುದು. ಫೋನ್ ಮಾಡುವುದು. ಈ ರೀತಿಯ ಅನೇಕ ಸಮಸ್ಯೆಗಳನ್ನು ಪ್ರತಿನಿತ್ಯ ಅನುಭವಿಸುವ ಪರಿಸ್ಥಿತಿ ನಮ್ಮದಾಗಿದೆ." – ಬೆಂಗಳೂರಿನ ಬಸನವಗುಡಿ ಕಾಲೇಜಿನಲ್ಲಿ ಓದುತ್ತಿರುವ ಸುಜಾತ.

"ನಮ್ಮ ಮನೆ ಹತ್ತಿರ ಗಂಡ-ಹೆಂಡತಿ ಮತ್ತು ಅವರಿಗೆ ಒಂದು ಮೂರು ವರ್ಷದ ಹೆಣ್ಣು ಮಗುವಿತ್ತು. ಪ್ರತಿ ದಿನ ರಾತ್ರಿಯಾಯಿತೆಂದರೆ ಅವರು ಜಗಳ ಮಾಡುತ್ತಿದ್ದರು. ಆಗ ಮಗು ತುಂಬಾ ಅಳುತಿತ್ತು. ಆಗ ನಾನು ಮತ್ತು ನನ್ನ ಗೆಳತಿ ಹೋಗಿ ಮಗುವನ್ನು ಎತ್ತಿಕೊಂಡು ಬಂದು ಊಟ ಮಾಡಿಸಿ ಕಳುಹಿಸುತ್ತಿದ್ದೆವು. ಆ ಮಹಿಳೆ ತನ್ನ ಗಂಡ ಕುಡಿಯುವುದು ಬಿಡಲೆಂದು ಯೋಚಿಸಿ, ಒಂದು ದಿನ ತನ್ನ ಗಂಡನನ್ನು ಹೆದರಿಸುವ ಸಲುವಾಗಿ ಮೈಮೇಲೆ ಸೀಮೆಎಣ್ಣೆ ಸುರಿದು ಕೊಂಡು ಬೆಂಕಿ ಹಚ್ಚಿಕೊಂಡರು. ಕೊನೆಗೆ ಹತ್ತಿದ ಬೆಂಕಿಯನ್ನು ಆಳಿಸಲಾಗದೆ ಸತ್ತೇ ಹೋದರು. ಈಗ ಆ ಹೆಣ್ಣು ಮಗು ತಾಯಿ ಇಲ್ಲದ ತಬ್ಬಲಿಯಾಗಿದೆ" – ಬೆಂಗಳೂರಿನ ಪ್ರತಿನಿಧಿ ಲಿಖಿತ.

"ನೀವೆಲ್ಲಾ ಕೊಡಗು ಅಂದರೆ ಬಹಳ ಸುಂದರವಾಗಿದೆ ಅಂದಿಕೊಂಡಿದ್ದೀರಾ? ಅಲ್ಲೆ ಹುಟ್ಟಿಬೆಳೆದ ನಾವು ಜೀತಾದಾಳುಗಳಾಗಿದ್ದೇವೆ. ಗುಲಾಮರಾಗಿ ಕಾಫಿ ಎಸ್ಟೇಟ್‌ನಲ್ಲಿ ದುಡಿಯುತಿದ್ದೇವೆ. ನಮ್ಮ ಮಕ್ಕಳಿಗೆ ಓದಿಸಲು ಆಗುತ್ತಿಲ್ಲ. ಕಾಯಿಲೆ ಬಂದ್ರೆ ನರಳಿ ನರಳಿ ಸಾಯಬೇಕು. ಇಂಥ ತೊಂದರೆಗಳ ಬಗ್ಗೆ ಸೊಲ್ಲು ಎತ್ತಿದರೆ ಪೋಲಿಸರಿಂದ ಏಟು ಬೀಳುತ್ತಾವೆ. ನಮ್ಮ ಕಾಫಿ ಎಸ್ಟೇಟ್ ಮಾಲೀಕರ ಕಡೆಯವರು ನಮ್ಮ ಹೆಣ್ಣು ಮಕ್ಕಳನ್ನ ಮಾನಭಂಗ, ಅತ್ಯಾಚಾರ ಮಾಡುತ್ತಾರೆ. ತಮ್ಮ ಯಾವ ತಪ್ಪು ಇಲ್ಲದೇ ಹೆಣ್ಣು ಮಕ್ಕಳು ಗರ್ಭಿಣಿಯರಾಗಿ ಕೊನೆಗೆ ನೇಣು ಹಾಕಿಕೊಂಡು ಸಾಯುವ ಪರಿಸ್ಥಿತಿ ಇದೆ. ಇನ್ನೂ ಬೇರೆ ಬೇರೆ ಜಿಲ್ಲೆ, ರಾಜ್ಯಗಳಿಗೆ ಮಾರಾಟವಮಾಡುತ್ತಾರೆ. ಎಷ್ಟೋ ಹೆಣ್ಣು ಮಕ್ಕಳು ಕಾಣೆಯಾಗಿದ್ದಾರೆ." ಪೋಲಿಸರಿಗೆ ದೂರು ಕೊಡೊ ಹಾಗಿಲ್ಲ. –ಕೊಡಗನ್ನು ಪ್ರತಿನಿಧಿಸಿ ಬಂದಿದ್ದ ರೀಟಾ

"ಬಸ್ಸುಗಳಲ್ಲಿ ಕಣ್ಸನ್ನೆ ಮಾಡುವುದು. ಮೈ ಸವರುವುದು. ಮೈ ಮೇಲೆ ಬೀಳುವಂತೆ ಬರುವುದು. ಒಂದಾ ಎರಡಾ, ನಮ್ಮ ಮೇಲಿನ ದೌರ್ಜನ್ಯಗಳಿಗೆ ಲೆಕ್ಕವೇ ಇಲ್ಲ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಬೇರೆ ಬೇರೆ ಜಾತಿಯವರನ್ನು ಪ್ರೀತಿಸಿ ಮದುವೆ ಆದರೆ ಸಾಕು ಕೊಲೆಗಳು ನಡೆಯುತ್ತವೆ. ಹೀಗಾಗಿ ಕಾಲೇಜಿಗೆ ಹೋಗೋ ಹುಡುಗಿಯರಲ್ಲಿ ಅಥವಾ ಕೂಲಿ ನಾಲಿ ಕೆಲ್ಸ ಅಂತ ಹೋಗುವಾಗಲೂ ಗಂಡು ಹುಡುಗರ ಜೊತೆ ಮಾತಾಡಲು ಭಯ ಪಡುವ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿದೆ." –ಮಂಡ್ಯವನ್ನು ಪ್ರತಿನಿಧಿಸಿದ್ದ ಅರುಣಾ



"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮುವಾದಿಗಳ ಅಟ್ಟಹಾಸ ಹೆಚ್ಚಾಗಿದೆ. ನಾಲ್ಕೈದು ಯುವತಿಯರು ನಿಂತರೂ, ಕುಂತರೂ ಸಹಿಸಿಕೊಳ್ಳದ ಹೃದಯಹೀನ ಪುಂಡರ ಹಲ್ಲೆಗಳು ಹೆಚ್ಚುತ್ತಿವೆ. ಬೆಳ್ತಂಗಡಿಯ ಸೌಜನ್ಯ ಮೇಲೆ ಅತ್ಯಾಚಾರ ಮಾಡಿ ಕೊಲೆಗೈದ ಅಪರಾಧಿಗಳು ರಾಜರೋಶವಾಗಿ ತಿರುಗಾಡಿಕೊಂಡು ಇದ್ದಾರೆ. ಸೌಜನ್ಯಳ ಮೇಲಿನ ಅತ್ಯಾಚಾರ ಮತ್ತು ಕೊಲೆ ಮಾಡಿರುವವರನ್ನು ಬಂಧಿಸಲು ಪೋಷಕರು ದೂರು ನೀಡಿದ್ದರೂ ಅಲ್ಲಿನ ಧರ್ಮಸ್ಥಳದ ಅಧಿನಾಯಕರ ಅಪ್ಪಣೆ ಇಲ್ಲದೆ ಪೋಲಿಸರು ಏನೂ ಮಾಡುವ ಹಾಗಿಲ್ಲ. ಹೀಗಾಗಿ ಜಿಲ್ಲೆಯಲ್ಲಿ ತಂದೆ ತಾಯಿಗಳು ಮಕ್ಕಳನ್ನು ಹೊರಗಡೆ ಕಳುಹಿಸಲು ತು ಹೆದರುವ ಪರಿಸ್ಥಿತಿ ಇದೆ." ದಕ್ಷಿಣ ಜಿಲ್ಲೆಯನ್ನು ಪ್ರತಿನಿಧಿಸಿ ಬಂದಿದ್ದ ಯ ಮಲ್ಲಿಕಾ



"ನನ್ನ ಸ್ವಂತ ಅನುಭವ ಇ ನಮ್ಮ ಜಿಲ್ಲೆಯಲ್ಲಿ ಸರ್ಕಾರಿ ಕೆಲಸಕ್ಕೆ ಪೇಪರ್‌ನಲ್ಲಿ ಕಾಲ್ ಮಾಡಿದ್ರು, ನನ್ನ ಡಿಗ್ರಿ ಓದಿದ್ದಾಳೆ. ಹೀಗಾಗಿ ಅರ್ಜಿ ಇಂಟರ್‌ವ್ಯೂಗೆ ಹೋಗಿದ್ದಳು. ಅದ ಪಾಸು ಕೂಡ ಆಗಿದ್ದಳು. ಆಗ ಅ ಒಬ್ಬ ಅಧಿಕಾರಿ 'ನೋಡಮ್ಮ ನಿನಗ ಕೆ ದಕ್ಕುತದ, ಆದ್ರ ಹೊರಗಡೆ ಏಜೆ ಮುಖಾಂತರ ನೀ ಬರಬೇಕು. ನಿನಗೆ ಸಂ 5,800 ನಿಗದಿಯಾಗುತ್ತದಾ. ಅದ ನನಗ ತಿಂಗಳಿಗೆ 1000 ಕೊಡಬೇಕು. ಏಜನ್ಸಿಗೆ 1,800 ಕೊಡಬೇಕು. ಉ 3,000 ನಿನಗೆ ಸಿಗುತ್ತಾದ. ಒಪ್ಪಿಗೆ ? ನಾಳೆಯಿಂದ ಕೆಲ್ಸಾಕ ಬಾ', ಎ ಹೇಳಿದ್ದರು. ಬೇರೆ ದಾರಿ ಇಲ್ಲದೆ ಅಕ್ಕ ಕೆಲಸಕ್ಕೆ ಹೋಗುತ್ತಿದ್ದಾಳೆ." ಹಾ ಜಿಲ್ಲೆಯ ಜ್ಯೋತಿ

"ನಾನು ಮಂಡ್ಯ ಜಿಲ್ಲೆಯ ಸಕಾ ಅಸ್ಪತ್ರೆಯಲ್ಲಿ ನರ್ಸ್ ಆಗಿ ಮಾಡುತಿದ್ದೇನೆ. ಕೆಲಸ ಮಾ ಸಂದರ್ಭದಲ್ಲಿ ನಮ್ಮ ಜೊತೆಗೆ ಇ ಗಂಡಸರಿಂದ ತುಂಬಾ ತೊಂದರೆ ಅನುಭವಿಸುತ್ತೇವೆ. ಅದರಲ್ಲೂ ರಾತ್ರಿ ಕೆಲಸ ಮಾಡುವಾಗ ಎಡಗೈಯಲ್ಲಿ ಜೀವ ಹಿಡಿದುಕೊಂಡು ಕೆಲಸ ಮಾಡುವ ಪ ಇದೆ. ನಾವು ಗಂಡಸರ ಅನುಕೂಲಕ್ಕೆ ತ ನಡೆದುಕೊಳ್ಳದೆ ಹೋದರೆ, ಒಂದಲ್ಲಾ ಒ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**